3

# ಸುಳ್ಳು ಬೋಧಕರು

# (2:1-22)

ಅಧ್ಯಾಯ 1ರಲ್ಲಿ ಪೇತ್ರನ ಸೂಚನೆ ನಾನು ಅಪೊಸ್ತಲರಾದ ಓದುಗರಿಗೆ ತೊಂದರೆಯನ್ನು ನೀಡುತ್ತಿರುವ ಸುಳ್ಳು ಬೋಧಕರಿಗೆ ಸಂಭೋದಿದ್ದೇನೆ ಎಂದಾದರೆ ಇದು ಮಾರ್ಮಿಕವಾಗಿದೆ. ಸಭೆಯು ಎದುರಿಸುತ್ತಿರುವ ಸಮಸ್ಯೆಗಳನ್ನು ಸಂಭೋದಿಸುತ್ತಿದ್ದೇನೆ ಎಂದು ತಿಳಿದು ಆತನ ಬಹುಶಃ ಪದಗಳನ್ನು ಆಯ್ದುಕೊಂಡಿದ್ದಾನೆ ಎಂದು ತೋರುತ್ತದೆ ಆದರೆ ಆತನು ತನ್ನ ಬೋಧನೆಯನ್ನು ತನ್ನ ಓದುಗರ ನಿರ್ಣಯಕ್ಕೆ ಬಿಟ್ಟಿದ್ದಾನೆ ಅವರು ಅದನ್ನು ತಮ್ಮನ್ನು ವಿರೋಧಿಸುವವರಿಗೆ ಹೋಲಿಸಬಹುದು. ಈ ಹಂತದಲ್ಲಿ ಅವನು ಮಾರ್ಮಿಕವಾಗಿ ಪ್ರತ್ಯೇಕವಾಗಿದ್ದಾನೆ. ಸಭೆಯಲ್ಲಿ ಸುಳ್ಳು ಬೋಧಕರಿದ್ದರು ಅವರು ಕ್ರೈಸ್ತ ಸಿದ್ಧಾಂತಗಳಿಗೆ ಭಯವನ್ನು ಹುಟ್ಟಿಸುವವರಾಗಿದ್ದರು. ಯೂದನ ಪುಸ್ತಕದಲ್ಲಿ ಈ ಬೋಧಕರ ವರ್ಣನೆ ಅದೇ ರೀತಿಯಲ್ಲಿದೆ. ನಾವು ಪಠ್ಯದಲ್ಲಿ ಭಾಷೆಯು ಸಮಾನರೂಪದಲ್ಲಿರುವದನ್ನು ಕಾಣಬಹುದು.

## ಸುಳ್ಳು ಬೋಧಕರ ವಿರುದ್ಧ ಎಚ್ಚರಿಕೆ (2:1-3)

**[1]ಆದರೆ ಇಸ್ರಾಯೇಲ್ ಜನರಲ್ಲಿ ಸುಳ್ಳುಪ್ರವಾದಿಗಳೂ ಎದ್ದರಲ್ಲಾ; ಅದೇ ಪ್ರಕಾರ ನಿಮ್ಮಲ್ಲಿಯೂ ಸುಳ್ಳು ಬೋಧಕರು ಇರುವರು. ಅವರು ನಾಶಕರವಾದ ಮತಭೇದಗಳನ್ನು ಕಳ್ಳತನದಿಂದ ಹುಟ್ಟಿಸುವವರೂ ತಮ್ಮನ್ನು ಕೊಂಡುಕೊಂಡ ಒಡೆಯನನ್ನು ಕೂಡ ತಾವು ಅರಿಯೆವು ಎಂದು ಹೇಳುವವರೂ ಆಗಿದ್ದು ಪಕ್ಕನೆ ತಮ್ಮ ಮೇಲೆ ನಾಶವನ್ನು ಬರಮಾಡಿಕೊಳ್ಳುವರು. [2]ಅವರ ನಿರ್ಲಜ್ಜಾ ಕೃತ್ಯಗಳನ್ನು ಅನೇಕರು ಅನುಸರಿಸುವರು; ಅವರ ನಿಮಿತ್ತ ಸತ್ಯಮಾರ್ಗಕ್ಕೆ ದೂಷಣೆ ಉಂಟಾಗುವದು. [3]ಅವರು ದ್ರವ್ಯಾಶೆಯುಳ್ಳವರಾಗಿ ಕಲ್ಪನೆಯ ಮಾತುಗಳನ್ನು ಹೇಳುತ್ತಾ ನಿಮ್ಮಿಂದ ಲಾಭವನ್ನು ಸಂಪಾದಿಸಬೇಕೆಂದಿರುವರು. ಲೋಕಾದಿಯಿಂದ ಅಂಥವರಿಗೆ ದಂಡನೆಯ ತೀರ್ಪು ತಪ್ಪದೆ ಬರುತ್ತಿರುವದು, ಅವರ ನಾಶವು ತೂಕಡಿಸುವದಿಲ್ಲ.**

**ವಚನ 1.** ಅಧ್ಯಾಯ ಒಂದರ ಕೊನೆಯಲ್ಲಿ ಮತ್ತು ಅಧ್ಯಾಯ ಎರಡರ ಪ್ರಾರಂಭದಲ್ಲಿ ತೀವ್ರವಾದ ವಿರಾಮ ಇರುವದಿಲ್ಲ. ದೇವರು ಇಸ್ರಾಯೇಲರ ಮಧ್ಯದಲ್ಲಿ ಪ್ರವಾದಿಗಳನ್ನು ಕಳುಹಿಸಿದನು. "ಪವಿತ್ರಾತ್ಮನಿಂದ ನಡೆಸಲ್ಪಟ್ಟವರಾಗಿ" (1:21) ಅವರು ದೇವರ ಸಂದೇಶವನ್ನು ಮಾತನಾಡಿದರು ಮತ್ತು ಬರೆದರು ಆದರೆ ಕೆಲವು ಜನರು ತಾವು ದೇವರಿಂದ ಸಂದೇಶವನ್ನು ಹೊಂದಿಕೊಂಡಿದ್ದೇವೆ ಎಂದು ಹೇಳಿ ಸ್ವಾರ್ಥಿಗಳಾಗಿ ತಮ್ಮ ಸೇವೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಅದೇ ಸಮಯದಲ್ಲಿ ದೇವರ ಪ್ರವಾದಿಗಳು ಆತನ ವಾಕ್ಯಗಳನ್ನು ಪ್ರಕಟಿಸುತ್ತಿದ್ದಾರೆ, ಪೇತ್ರನು **ಜನರಲ್ಲಿ ಸುಳ್ಳು ಪ್ರವಾದಿಗಳೂ ಸಹ ಎಳುತ್ತಿರುವದನ್ನು ಗಮನಿಸುತ್ತಾನೆ.** ಯೆರೆಮೀಯನು ಮತ್ತು ಯೆಹೆಜ್ಕೇಲ ... "ಸುಳ್ಳು ಪ್ರವಾದಿಗಳೊಂದಿಗೆ" ನಿರ್ಧಿಷ್ಟವಾದ ಹೋರಾಟದಲ್ಲಿದ್ದರು. "ಸೇನಾಧೀಶ್ವರನಾದ ಯೆಹೋವನು ಇಂತೆನ್ನುತ್ತಾನೆ ... ನಿಮಗೆ ಪ್ರವಾದಿಸುವ ಪ್ರವಾದಿಗಳ ಮಾತುಗಳನ್ನು ಕೇಳಬೇಡಿರಿ; ನಿಮ್ಮಲ್ಲಿ ವ್ಯರ್ಥ ನಿರೀಕ್ಷೆಯನ್ನು ಹುಟ್ಟಿಸುತ್ತಾರೆ; ಯೆಹೋವನ ಬಾಯಿಂದ ಹೊರಟದ್ದನ್ನು ನುಡಿಯದೆ ಸ್ವಂತ ಹೃದಯಕ್ಕೆ ಹೊಳೆದದ್ದನ್ನೇ ಹೇಳುತ್ತಾರೆ" (ಯೆರೆಮೀಯ 23:16).

"ಇಸ್ರಾಯೇಲ ಜನರ ಮಧ್ಯದಲ್ಲಿ ಸುಳ್ಳು ಪ್ರವಾದಿಗಳು ಇರುವದರಿಂದ" ಪೇತ್ರನ ಮೊದಲ ಓದುಗರ ಮಧ್ಯದಲ್ಲೂ ಸುಳ್ಳು ಬೋಧಕರು ಇದ್ದಾರೆ ಎಂಬುದು ದೊಡ್ಡ ಆಶ್ಚರ್ಯವೇನಲ್ಲ. "ಸುಳ್ಳು ಪ್ರವಾದಿಗಳು" ಮತ್ತು "ಸುಳ್ಳು ಬೋಧಕರು" ಇವರ ಮಧ್ಯದಲ್ಲಿರುವ ವ್ಯತ್ಯಾಸ ಸ್ಪಷ್ಟವಾಗಿಲ್ಲ. ಬಹುಶಃ ಅಪೊಸ್ತಲನು ತನ್ನ ವಿರೋಧಿಗೆ "ಪ್ರವಾದಿ" ಎಂಬ ಬಿರುದನ್ನು ನೀಡಿ ಗೌರವವನ್ನು ತೋರಿಸುವ ಮನಸ್ಸನ್ನು ಹೊಂದಿಲ್ಲ ಅದರೊಂದಿಗೆ ಸುಳ್ಳು ಎಂಬ ಪದವು ಸೇರಿದಾಗ್ಯೂ ಸಹ. ಈ ಹಂತದಲ್ಲಿ ಎರಡು ವೀಕ್ಷಣೆಗಳು ಪ್ರಾಮುಖ್ಯವಾಗಿವೆ. ಮೊದಲನೆಯದಾಗಿ, ಅನೇಕಾವರ್ತಿ ಒಂದೇ ಶ್ರೇಣಿಯಲ್ಲಿ ಬರುವ ಸಭೆಗಳು ಎದುರಿಸುತ್ತಿರುವ ಕಠಿಣ ಹೋರಾಟಗಳು. ಪೌಲನ ಪತ್ರ ವಾಸ್ತವವಾಗಿ ಸುವಾರ್ತಾ ಸೇವೆಯ, ಕೂಟದಲ್ಲಿ ಏನು ಸಂಭವಿಸಿತು, ಅಥವಾ ಸಹಕಾರದ ಪರೋಪಕಾರಿ ಕಾರ್ಯಗಳ ಕುರಿತು ಬಹಳ ಕಡಿಮೆ ಹೇಳುತ್ತದೆ, ಈ ಎಲ್ಲಾ ಸಂಗತಿಗಳು ಪ್ರಾಮುಖ್ಯವಾಗಿವೆ. ಬದಲಾಗಿ, ಆತನ ಪತ್ರಗಳು ಎರಡು ಕ್ಷೇತ್ರಗಳ ಮೇಲೆ ಕೇಂದ್ರಿಕರಿಸುತ್ತವೆ: ಕ್ರೈಸ್ತನ ನಂಬಿಕೆಯ ಶ್ರೇಷ್ಟ ಸಿದ್ಧಾಂತ ಮತ್ತು ಈ ಸಿದ್ಧಾಂತಗಳಿಗೆ ವಿರೋಧಿಗಳಿಂದ ಬರುವ ಸವಾಲುಗಳು. ಸಭೆಯು ಕ್ರೈಸ್ತ ಸಿದ್ಧಾಂತಗಳು ಮತ್ತು ಅವುಗಳನ್ನು ಅಭ್ಯಾಸಿಸುವದರಲ್ಲಿ ವಿಶ್ವಾಸಾರ್ಹತೆಯನ್ನು ನಿರ್ವಹಿಸಲು ಕೊನೆಯಿಲ್ಲದ ಹೋರಾಟವನ್ನು ಎದುರಿಸುತ್ತಿದೆ. ಅವರ ಕೈಗಳನ್ನು ಬಲಾತ್ಕಾರದಿಂದ ಕಿತ್ತುಕೊಂಡು "ಸುಳ್ಳು ಬೋಧಕರ" ಅಥವಾ ಅನೈತಿಕ ಗುಣಲಕ್ಷಣಗಳನ್ನು ಹೊಂದಿದವರು ಕ್ರಿಸ್ತನ ಹೆಸರನ್ನು ಧರಿಸಿಕೊಳ್ಳಲು ಬಯಸುವವರ ಉಪಸ್ಥಿತಿಯಲ್ಲಿ ದುಃಖಿಸುವದು ಕ್ರೈಸ್ತರಿಗೆ ಒಳ್ಳೇಯದೇನನ್ನೂ ಮಾಡುವದಿಲ್ಲ. ಇಂಗ್ಲೀಷ್ ಭಾಷೆ ಹೀಗೆ ಹೇಳುತ್ತದೆ, ವಿಶ್ವಾಸಿಗಳು "ತಮ್ಮನ್ನು ಬಲಪಡಿಸಿಕೊಂಡು" ಸತ್ಯವನ್ನು ಬೋಧಿಸುವದನ್ನು ಮತ್ತು ಉಪದೇಶಿಸುವದನ್ನು ಮುಂದುವರೆಸಬೇಕು.

ಎರಡನೆಯದಾಗಿ, ಕ್ರೈಸ್ತರ ಮಾದರಿಗಳು ತಮ್ಮನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳುವವರೆಗೆ ನಿರ್ಧಿಷ್ಟವಾಗಿ ಬೇಧವಾಗುತ್ತವೆ. ಕರ್ತನು ತನ್ನ ಹಿಂಬಾಲಕರಿಗೆ ಜನರಿಗೆ ಒಳ್ಳೆಯವರಾಗಿರಬೇಕು, ಇತರರ ಕುರಿತಾಗಿ ಒಳ್ಳೆಯದನ್ನು ಯೋಚಿಸಬೇಕು, ತಮ್ಮನ್ನು ತಾವು ಪರೀಕ್ಷಿಸಿಕೊಳ್ಳಬೇಕು ಮತ್ತು ಅಪರಿಚಿತರನ್ನು ಮತ್ತು ಸ್ನೇಹಿತರನ್ನು ಒಂದೇ ರೀತಿ ಯಲ್ಲಿ ಕುರಣೆ ಮತ್ತು ಗೌರವದಿಂದ ನೋಡಿಕೊಳ್ಳಬೇಕು ಎಂದು ಬೋಧಿಸಿದ್ದಾನೆ. ಸಭೆಯ ಪ್ರಾರಂಭದ ದಿನಗಳಿಂದ ಕ್ರೈಸ್ತರ ಭರವಸೆ ಮತ್ತು ದಾರಾಳತೆಯ ಮೇಲೆ ಕಪಟವೇಷಾಧಾರಿಗಳು ಲೂಟಿ ಮಾಡಿದ್ದಾರೆ.[1] ಹಣವು ಮಾತ್ರ ಒಳಗೊಂಡಿರುವಾಗ, ಶಿಷ್ಯರು ಧಾರಾಳತೆಯ ವಿಷಯದಲ್ಲಿ ತಪ್ಪು ಮಾಡುವದನ್ನು ಆಯ್ದುಕೊಂಡಿದ್ದಾರೆ, ತಾವು ಸ್ವಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳಲ್ಪಟ್ಟಿದ್ದೇವೆ ಎಂದು ಸಂದೇಹಸಿದ್ದರೂ ಸಹ.[2] ಹಾಗೂ, ಜನರು ಸಭೆಯ ಒಳ್ಳೆ ತನದ ಮೇಲೆ ಒತ್ತಡ ತರುವ ಇನ್ನಿತರ ಮಾರ್ಗಗಳು ಇವೆ. ಶಿಷ್ಯರು ವಯಕ್ತಿಕ ಅಧಿಕಾರವನ್ನು ಹುಡುಕುವವರನ್ನು ಅಥವಾ ವಯಕ್ತಿಕ ಸಿದ್ಧಾಂತಗಳಿಂದ ಸತ್ಯವೇದದ ಬೋಧನೆಗಳನ್ನು ಅಲ್ಲಗಳೆಯುವವರನ್ನು ಸಹ ಸಭೆ ಸೋಸಿತೆಗೆದಿದೆ. ಯೇಸು ಹೀಗೆ ಹೇಳುತ್ತಾನೆ, ಅವರಲ್ಲಿ ಪರಸ್ಪರ ಮೇಲೆ ಇರುವ ಪ್ರೀತಿಯಿಂದಾಗಿ ವಿಚಿತ್ರವಾದವರು ಎಂದು ಗುರುತಿಸಲ್ಪಟ್ಟಿದ್ದಾರೆ ಎಂದು ಹೇಳುತ್ತಾನೆ (ಯೋಹಾನ 13:35). ವಿಶ್ವಾಸಿಗಳು ಸರಿಯಾದ ಮಾರ್ಗವನ್ನು ತೋರಿಸುವರನ್ನು ಗೌರವಿಸಲು ಬಯಸುತ್ತಾರೆ ಈ ಕಾರಣದಿಂದಾಗಿ, ಕ್ರಿಸ್ತನಿಗೆ ನಂಬಿಗಸ್ತರಾಗಿರುವವನ್ನು ವಿರೋಧಿಸುವದು ಕಠಿಣವಾಗಿದೆ. ಆದರೆ ಅವರ ಮಾತುಗಳು ಮತ್ತು ನಡತೆ ಕರ್ತನನ್ನು ಅಲ್ಲಗಳೆಯುತ್ತವೆ.

2 ಪೇತ್ರನ ಪತ್ರಿಕೆಯಲ್ಲಿ "ಸುಳ್ಳು ಬೋಧಕರು" ಏಕೆ ಭಯವನ್ನು ಹುಟ್ಟಿಸುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕು, ಪೇತ್ರನು ಏಕೆ ಅವರನ್ನು ಅಷ್ಟು ಬಲವಾಗಿ ವಿರೋಧಿಸಿದನು, ಆದರೆ ಅಪೊಸ್ತಲನು ಅವರು ನಿಜವಾಗಿ ಯಾವ ಬೋಧನೆಯನ್ನು ಹೊಂದಿದ್ದಾರೆ ಎಂಬುದರ ಕುರಿತು ಸ್ವಲ್ಪ ಮಾತ್ರ ಹೇಳಿದ್ದಾನೆ. ಅವನು ಹೇಳಿದ್ದೇನೆಂದರೆ ಅವರು ವಂಚನೆಯ ರಹಸ್ಯ

ವಾದ ಮಾರ್ಗವನ್ನು ನಾಶಕರವಾದ ಮತಬೇಧಗಳನ್ನು ಹುಟ್ಟಿಸಲು ಉಪಯೋಗಿಸಿದ್ದಾರೆ. ಮತಬೇಧವು ಕ್ರೈಸ್ತ ನಂಬಿಕೆಯನ್ನು ಹೀನೈಸುವ ಒಂದು ವಿಧಾನ ಮತ್ತು ಸುಳ್ಳು ಬೋಧನೆ ಯಾಗಿದೆ. ಒಂದು ಅರ್ಥದಲ್ಲಿ "ನಾಶಕರವಾದ ಮತಬೇಧಗಳೆಂದರೆ" ಎಂದರೆ ಮಿತಿಮೀರಿ ದ್ದಾಗಿದೆ. ಮತಬೇಧವು ಸ್ವರೂಪದಿಂದಲೇ ನಾಶಕರವಾದದ್ದಾಗಿದೆ. ಅದು ಸಭೆಗೆ ಮತ್ತು ಕ್ರಿಸ್ತನ ಸಂದೇಶದೊಂದಿಗೆ ತಲುಪಲು ಬಯಸುವ ಸಭೆಗೆ ನಾಶಕರವಾಗಿದೆ.

ಪೇತ್ರನು ಎದುರಿಸಿದ "ಸುಳ್ಳು ಬೋಧಕರ" ನಾಶಕರವಾದ ಸಿದ್ಧಾಂತಗಳು ವಿಶೇಷವಾಗಿ ಘೋರವಾಗಿದೆ. ಅವು ತಮ್ಮನ್ನು ಕೊಂಡಿಕೊಂಡ ಯಜಮಾನನ್ನು ಅಲ್ಲಗಳೆಯುವ ಮಟ್ಟಕ್ಕೆ ಹೋಗಿವೆ. ಆ ಅರ್ಥದಲ್ಲಿ ಅವರು ಆತನನ್ನು ಅಲ್ಲಗಳೆದಿದ್ದಾರೋ? ಹಿಂದಿನ ಅಧ್ಯಾಯದಲ್ಲಿ ಅಪೊಸ್ತಲನು ರೂಪಾಂತರದೊಂದಿಗೆ ದೇವರ ಧ್ವನಿ "ಈತನು ಪ್ರಿಯನಾಗಿರುವ ನನ್ನ ಮಗನು" ಎಂದು ಹೇಳುವದನ್ನು ದೃಢಪಡಿಸಿದ್ದಾನೆ. ಯೇಸು ಮಗನಾಗಿದ್ದಾನೆ ಎಂಬುದು ಮತ್ತು ಆದ ಕಾರಣದಿಂದಾಗಿ ಆತನ ದೈವತ್ವ ವಿಷಯವಾಗಿ ತೋರಿಬರುತ್ತದೆ. ಪೇತ್ರನಿಗೆ ಕ್ರಿಸ್ತನ ದೈವತ್ವ ವಾದವನ್ನು ಮೀರಿದ್ದಾಗಿದೆ. "ಸುಳ್ಳು ಪ್ರವಾದಿಗಳು" ಸಂಪೂರ್ಣ ದೈವತ್ವವನ್ನು ಅಥವಾ ಕರ್ತನ ಸಂಪೂರ್ಣ ಮಾನವೀಯತೆಯನ್ನು ಅಲ್ಲಗಳೆದಿದ್ದಾರೆ ಎಂಬುವ ನಿರ್ಣಯಕ್ಕೆ ಬರುವದು ಉತ್ತಮವಾಗಿದೆ, ಆದರೆ ಅದರಿಂದ ಆಚೆಗೆ ನಾವು ಸ್ವಲ್ಪ ಮಾತ್ರ ಹೇಳಬಹುದು.

ನಮ್ಮ ಕೂತುಹಲವು ಮನಸ್ತಾಪಕ್ಕೆ ನಡೆಸುತ್ತದೆ. "ಸುಳ್ಳು ಬೋಧಕರು" ಯೇಸುವಿನ ದೈವತ್ವವನ್ನು ಅಲ್ಲಗಳೆದಿದ್ದರೆ ಅವರು ಯಾರನ್ನು ಅಥವಾ ಆತನು ಯಾರಾಗಿದ್ದಾನೆ ಎಂಬುದರ ಕುರಿತು ಏನನ್ನು ನಂಬುತ್ತಾರೆ? ಬುದ್ಧಿವಂತ ಬೋಧಕ? ದೇವದೂತ ಕೆಲವೊಂದು ವಿಧದಲ್ಲಿ ದೈವಿಕನಾಗಿದ್ದಾನೆ ಆದರೆ ಸಂಪೂರ್ಣವಾಗಿ ಅಲ್ಲ ಎಂದೋ? ಪೇತ್ರನು ಹೀಗೆ ಹೇಳಲಿಲ್ಲ. ಅಪೊಸ್ತಲನಿಗೆ ಆತನ ದೈವೀಕತೆಯನ್ನು ಅಲ್ಲಗಳೆಯುವದದ್ದೆಂದರೆ 2 ಪೇತ್ರನ ಪತ್ರಿಕೆಯಲ್ಲಿ ಯೇಸುವಿನ ಮರಣದ ಕುರಿತು ಇದೊಂದೇ ಉಲ್ಲೇಖವಿದೆ ಮತ್ತು ಇದು ಅಸರಳವಾದದ್ದಾಗಿದೆ. ಪೇತ್ರನು ಕರ್ತನು ತನ್ನನ್ನು ಕೊಂಡುಕೊಂಡಿದ್ದಾನೆ ಎಂದು ಹೇಳುವಾಗ ಕ್ರಿಸ್ತನ ರಕ್ತವು ಇನ್ನೂ ವಿಮೋಚನೆಯನ್ನು ನೀಡುವ ಸಂಗತಿಯಾಗಿದೆ. ಆತನು ಅವರನ್ನು ತನ್ನ ರಕ್ತದಿಂದ ಕೊಂಡುಕೊಂಡಿದ್ದಾನೆ. ಅದೇ ಕ್ರಿಯಾಪದವನ್ನು ವಿಮೋಚನೆ ಅಥವಾ ಕೊಂಡುಕೊಳ್ಳುವದಕ್ಕೆ *(agorazō)* ಉಪಯೋಗಿಸಿಲಾಗದೆ ಇದೇ ಪದವನ್ನು 1 ಕೊರಿಂಥ 6:20 ಮತ್ತು 7:23ರಲ್ಲಿ ಉಪಯೋಗಿಸಲಾಗಿದೆ. ಈ ಉದಾಹರಣೆಗಳಲ್ಲಿ ಕೊಂಡುಕೊಳ್ಳುವದು ವಿಶಿಷ್ಟವಾಗಿ ಕ್ರೂಜೆಯ ಮೇಲೆ ಯೇಸು ಸುರಿಸಿದ ರಕ್ತಕ್ಕೆ ಸಂಬಂಧಿಸಿದದ್ದಾಗಿದೆ. 2 ಪೇತ್ರನ ಪತ್ರಿಕೆಯಲ್ಲಿ ಯೇಸುವಿನ ಪುನರುತ್ಥಾನದ ಕುರಿತು ಉಲ್ಲೇಖಿಸಿದಲ್ಲ, ಆದರೆ ಪುನರುತ್ಥಾನ ಹೊಂದಿದ ಕರ್ತನು ಆಳುತ್ತಾನೆ. "ಸುಳ್ಳು ಬೋಧಕರು" ಬಹುಶಃ ಯೇಸು ದೇವರ ಬಲಗಡೆಯಲ್ಲಿ ಆಸೀನನಾಗಿದ್ದಾನೆ ಎಂಬುದನ್ನು ಅಲ್ಲಗಳೆಯುತ್ತಾರೆ.

ಕೊಂಡುಕೊಳ್ಳುವದು ಮತ್ತು ವಿಮೋಚಿಸುವದು ನಿಕಟವಾದ ಸಂಬಂಧವನ್ನು ಹೊಂದಿವೆ. ದೇವರ ಪ್ರೀಯ ಮಗನಾದ ಯೇಸು ಜನರನ್ನು ಪಾಪದಿಂದ ವಿಮೋಚಿಸಲು ಶಕ್ತನಾಗಿದ್ದಾನೆ. "ಸುಳ್ಳು ಬೋಧಕರು" ಕ್ರಿಸ್ತನ ದೈವತ್ವವನ್ನು ಅಲ್ಲಗಳೆದಾಗ, ಅವರು ಆತನು ತಮ್ಮನ್ನು ಕೊಂಡುಕೊಳ್ಳಲು ಇರುವ ಅಧಿಕಾರವನ್ನು ಅಲ್ಲಗಳೆದಿದ್ದಾರೆ. ಅವರು ಕ್ರೈಸ್ತ ಸಿದ್ಧಾಂತದ ಕೇಂದ್ರವಾಗಿರುವ ಅರಿಕೆಯನ್ನು ಅಲ್ಲಗಳೆದಿದ್ದರಿಂದ "ಸುಳ್ಳು ಬೋಧಕರು" ತಮ್ಮ ಮೇಲೆ ಪಕ್ಕನೇ ನಾಶನವನ್ನು ಬರಮಾಡಿಕೊಳ್ಳುತ್ತಿದ್ದಾರೆ. ಪೇತ್ರನು ಈಗಾಗಲೇ ಅವರ ಬೋಧನೆಯನ್ನು "ನಾಶಕರ" ಎಂದು ಕರೆದಿದ್ದಾನೆ.[3] ಇಂಥಹಾ ಬೋಧನೆಗಳು ಇತರರಿಗೆ ನಾಶನವನ್ನು ತರುತ್ತವೆ ಅಲ್ಲದೆ ಇದನ್ನು ಪ್ರತಿಪಾದಿಸುವವರನ್ನು ನಾಶ ಮಾಡುತ್ತವೆ. ಪೇತ್ರನ ಓದುಗರು "ಸುಳ್ಳು ಬೋಧಕರನ್ನು" ಅನುಸರಿಸಬೇಕೋ ಇಲ್ಲಿ ಸೂಚಿಸುವದೇನಂದರೆ ಅವರು "ಪಕ್ಕನೆ ಬರುವ ನಾಶನವನ್ನು" ತಮ್ಮ ಮೇಲೆ ಸಹ ಬರಮಾಡಿಕೊಳ್ಳುವವರಾಗಿದ್ದಾರೆ.

**ವಚನ 2.** ನಾವು ಅವರ ಸಿದ್ಧಾಂತಗಳಿಗೆ ಸ್ವಲ್ಪ ಗಮನವನ್ನು ನೀಡಿದ್ದರೂ "ಸುಳ್ಳು

ಬೋಧಕರು" ಗುಣಲಕ್ಷಣದ ಸಾಮಾನ್ಯ ವರ್ಣನೆ ಪೇತ್ರನ ಪತ್ರದಲ್ಲಿ ನಮಗೆ ಕಂಡುಬರುತ್ತದೆ. ಅಪೊಸ್ತಲನು ಜನರು ತಾವು ಆಲಿಸಿರುವ ಸಂಗತಿಗಳ ಕುರಿತಾಗಿ ಮಾತನಾಡಿದ ವ್ಯಕ್ತಿಯ ಗುಣಲಕ್ಷಣಗಳನ್ನು ತಾವು ಅಂದಾಜು ಮಾಡಿರುವ ಆಧಾರದ ಅನೇಕಾವರ್ತಿ ಮೌಲ್ಯಮಾಪನ ಮಾಡುತ್ತಾರೆ ಈ ಕಾರಣದಿಂದಾಗಿ ಆತನು ತನ್ನ ಸ್ವಂತ ಅರ್ಹತೆಗಳನ್ನು ಮುಟ್ಟುಗೋಲು ಹಾಕಿದ್ದಾನೆ. ಆತನು ತನ್ನ ವಿರೋಧಿಸದವರ ವ್ಯತಿರಿಕ್ತ ಗುಣಲಕ್ಷಣಗಳನ್ನು ಬಹಿರಂಗಪಡಿಸಿದ್ದಾನೆ. ಅವರು ವಿಷಯಲಂಪಟತ್ವದಲ್ಲಿ ತೊಡಗಿದ್ದಲ್ಲದೆ ಅವರು ತಮ್ಮ ದೈಹಿಕ ಹಸಿವೆಯನ್ನು ಸಮರ್ಥಿಸಿಕೊಳ್ಳಲು ಕೆಲವು ಸಿದ್ಧಾಂತಗಳನ್ನು ಅಥವಾ ಅಭಿಪ್ರಾಯಗಳ ಆಧಾರವನ್ನು ಅನುಸರಿಸುತ್ತಾರೆ ಎಂದು 2:19ರಲ್ಲಿ ಕಂಡುಬರುತ್ತದೆ. ಹಸಿವೆಯನ್ನು ನೀಗಿಸಲು ತೊಡಗಿಸಿಕೊಳ್ಳುವದು ಸ್ವ-ನಿಗ್ರಹಕ್ಕಿಂತ ಸರಳ. ಅನೇಕರು ಏಕೆ ನೀತಿಬಾಹಿರ ಮಾರ್ಗಗಳನ್ನು ಅನುಸರಿಸುತ್ತಾರೆ ಎಂಬುದನ್ನು ತಿಳಿದುಕೊಳ್ಳುವದು ಕಠಿಣವಾಗಿದೆ.

ಅನೈತಿಕತೆಯು ಸಭೆಯಲ್ಲಿ ಸಹಿಸಲ್ಪಡುವಾಗ, ವಿಶೇಷವಾಗಿ ತಾವು ಬೋಧಕರು ಎಂದು ಹೇಳಿಕೊಳ್ಳುವವರು ಇದನ್ನು ಅಭ್ಯಾಸಿಸುವಾಗ, ಹಾಸಿ ಕೇವಲ ಬೋಧಕರಿಗೆ ಮಾತ್ರ ಸೀಮಿತವಾಗಿರುವದಿಲ್ಲ. ಇಡೀ ದೇಹವು ತೊಂದರೆಯನ್ನು ಅನುಭವಿಸುತ್ತದೆ. ಕರ್ತನು ತಾನೇ ಬಾಧೆಯನ್ನನುಭವಿಸುತ್ತಾನೆ. **ಅವರ ನಿಮಿತ್ತ ಸತ್ಯಮಾರ್ಗಕ್ಕೆ ದೂಷಣೆ ಉಂಟಾಗುವದು.** ಸಿದ್ಧಾಂತಗಳನ್ನು ಮತ್ತು ಕ್ರೈಸ್ತರು ಅನುಸರಿಸುತ್ತಿರುವ ಜೀವಿತದ ಮಾರ್ಗವನ್ನು "ಸತ್ಯದ ಮಾರ್ಗ" ಎಂದು ಕರೆಯುವದಕ್ಕೆ ಪೇತ್ರನು ಹಿಂಜರಿಯುವದಿಲ್ಲ. ಈ ಹಿಂದೆ ಆತನು ತನ್ನ ಓದುಗರು "ಸತ್ಯದಲ್ಲಿ ಸ್ಥಾಪಿತವಾಗಿದ್ದಾರೆ" ಎಂದು ಕರೆಯುತ್ತಾನೆ (1:12). ಕೇವಲ "ಸತ್ಯ" ಎನ್ನುವದಕ್ಕೆ ಬದಲಾಗಿ "ಸತ್ಯದ ಮಾರ್ಗ" ಎಂದು ಪೇತ್ರನು ಬರೆಯುವದಕ್ಕೆ ಕಾರಣ ಇದೆಯೋ ಅಥವಾ ಇದು ಕೇವಲ ಶೈಲಿಯಲ್ಲಿರುವ ವ್ಯತ್ಯಾಸವಾಗಿದೆಯೋ? ಬಹುಶಃ ನಂತರದ್ದು ಸರಿಯಾಗಿದೆ. ಆದಾಗ್ಯೂ "ಮಾರ್ಗ" ಸತ್ಯವನ್ನು ಅಮೂರ್ತಮಟ್ಟಕ್ಕೆ ಇಳಿಸಬಾರದು ಎಂದು ಸೂಚಿಸುತ್ತದೆ. ಇದು ದೃಢಪಡಿಸುವ ಸಿದ್ಧಾಂತಗಳಿಗಿಂತ ಹೆಚ್ಚಿನದಾಗಿದೆ; ಇದು ಸಂಚರಿಸುವ ಮಾರ್ಗವಾಗಿದೆ. ಕ್ರಿಸ್ತನನ್ನು "ದೇವರೆಡೆಗೆ ಮಾರ್ಗ" ಎಂದು (ಅಪೊಸ್ತಲರ ಕೃತ್ಯಗಳು 18:26). "ಸಮಾಧಾನದ ಮಾರ್ಗ" (ರೋಮಾಪುರ 3:17); "ಹೊಸ ಮತ್ತು ಜೀವಿಸುವ ಮಾರ್ಗ" (ಇಬ್ರಿಯ 10:20). ಮತ್ತು "ನೀತಿವಂತಿಕೆಯ ಮಾರ್ಗ" ಎಂದು (2 ಪೇತ್ರ 2:21) ಅರಿಕೆ ಮಾಡುವದಾಗಿದೆ.

ವಿಶ್ವಾಸಿಗಳ ಬೋಧನೆ ಮತ್ತು ಅಭ್ಯಾಸ ಅವರನ್ನು ಜನರನ್ನಾಗಿ ಒಂದುಗೂಡಿಸುತ್ತದೆ. ಕ್ರಿಸ್ತನಲ್ಲಿರುವದು ಆತನ ದೇಹದಲ್ಲಿರುವದಕ್ಕೆ ಅವಶ್ಯವಾಗಿದೆ. ದೇಹದ ಯಾವುದಾದರೂ ಅಂಗವು ತೊಂದರೆಗೆ ಒಳಗಾದರೆ, ಎಲ್ಲರು ತೊಂದರೆಗೆ ಒಳಗಾಗುತ್ತಾರೆ. ಸಭೆಯು ದೂಷಣೆಗೆ ಒಳಗಾಗುತ್ತದೆ. ಮತ್ತು ಈ ಪ್ರಕ್ರಿಯೆಯಲ್ಲಿ ಕರ್ತನು ತಾನೇ ದೂಷಣೆಗೆ ಒಳಗಾಗುತ್ತಾನೆ. ಆತನ ಹೆಸರನ್ನು ಧರಿಸುವವರು ವಿಷಯಲಂಪಟತನದಲ್ಲಿ ಆನಂದಿಸುತ್ತಾರೋ ಆಗ ಇತರರನ್ನು ನಾಶನ ಮತ್ತು ಅವಮಾನಕ್ಕೆ ಗುರಿಮಾಡುತ್ತಾರೆ.

ವಿಗ್ರಹ ಆರಾಧಕ ಲೋಕದಲ್ಲಿ ಸುಳ್ಳು ಕಾರಣದಿಂದ ಕ್ರಿಸ್ತನ ದೇಹವು ದೂಷಣೆಗೆ ಒಳಗಾಗುವಾಗ ಅದು ಅನಿರೀಕ್ಷಿತವಾಗಿರುವದು ವಿರಳ. ಕ್ರೈಸ್ತರು ಲೋಕವು ಸ್ವ-ಇಚ್ಛೆಯಿಂದ ಪರಸ್ಪರ ತಾಳಿಕೊಳ್ಳುವ ನಡತೆಯಿಂದಾಗಿ ದೂಷಣೆಗೆ ಒಳಗಾಗುವಾಗ ವಿಚಿತ್ರವಾಗಿ ಕಾಣುತ್ತದೆ. ವಿಶ್ವಾಸಿಗಳು ಸಹ ಪರಿಶುದ್ಧ ಜೀವಿತಕ್ಕೆ ಕ್ರೈಸ್ತರನ್ನು ಅಳತೆಗೋಲನ್ನಾಗಿಸುತ್ತಾರೆ. ಅವಿಶ್ವಾಸಿಗಳು ಸುಳ್ಳು ಬೋಧಕರನ್ನು ಚಿತ್ರಿಸಲು ಉಪಯೋಗಿಸುವ ಕುಂಚದಿಂದಲೇ ಸಂಪೂರ್ಣ ಸಭೆಯನ್ನು ಚಿತ್ರಿಸುತ್ತಾರೆ ಎಂಬ ವಿಷಯದಲ್ಲಿ ಕ್ರೈಸ್ತರು ಎಚ್ಚರಿಕೆಯಿಂದ ಇರಬೇಕು. ಭಕ್ತಿ ಹೀನರು ನಿರಂತರವಾಗಿ ಸಭೆಯಲ್ಲಿರುವ ಬಲಹೀನ ಸದಸ್ಯರ ಮೂಲಕ ಸಭೆಯನ್ನು ತೀರ್ಮಾನಿಸುತ್ತಾರೆ.

ಈ ಪತ್ರಿಕೆಯ ಎರಡನೆಯ ಅಧ್ಯಾಯವು ಗುಣಲಕ್ಷಣದ ಮೇಲೆ ಅಪೊಸ್ತಲನ

ಬಲವಾದ ಆಕ್ರಮಣವನ್ನು ಎದುರಿಸಲು ಪ್ರಯಾಸಪಡುವಂತೆ ಮಾಡಲು ಮತ್ತು ಕ್ರೈಸ್ತ ಬೋಧನೆಯೊಂದಿಗೆ ಸಂಧಾನ ಮಾಡಿಕೊಳ್ಳುವವರ ಮಾರ್ಗಗಳಿಗೆ ಓದುಗರು ಪ್ರಯಾಸದಿಂದ ಹೊಂದಿಕೊಳ್ಳಬೇಕಾಗಿದೆ. ಎರಡನೆಯ ಅಧ್ಯಾಯವು ಸ್ವಲ್ಪ ನೆಮ್ಮದಿ ನೀಡದೇ ಇರುವಂಥದ್ದು ಮತ್ತು ಓದುಗರಿಗೆ ಬೇಸರವನ್ನುಂಟು ಮಾಡುವಂಥದ್ದು ಆಗಿದೆ. ಆದಾಗ್ಯೂ, ಅಪೊಸ್ತಲನು ಎಚ್ಚರಿಕೆಯಲ್ಲಿ ಅರ್ಥವಿದೆ ಅವು ಹೊಸ ಒಡಂಬಡಿಕೆಯಲ್ಲಿ ಹೆಚ್ಚು ಪ್ರಾಯೋಗಿಕವಾಗಿ ಕಂಡುಬರುತ್ತದೆ ಎಂಬುದನ್ನು ಗಮನಿಸಲು ನಾವು ವಿಫಲರಾಗಬಾರದು. ಪೇತ್ರನು ಸ್ಪಷ್ಟಪಡಿಸುವದಕ್ಕೆ ಇಚ್ಛಿಸುವದೇನಂದರೆ ಸುಳ್ಳು ಬೋಧ ಕರನ್ನು ಸಹಿಸಿಕೊಳ್ಳಬಾರದು. ಅವರು ಸಭೆಗಳನ್ನು ಶೋಧಿಸುವದಕ್ಕೆ ಮತ್ತು ಅದರ ಜೀವಿತವನ್ನು ಮತ್ತು ಕಲ್ಪನೆಗಳನ್ನು ಹೀನೈಸಲು ಅನುಮತಿಸಬಾರದು. ಕ್ರಿಸ್ತನ ಹೆಸರಿನಲ್ಲಿ ಕ್ರೈಸ್ತ ಬೋಧನೆ ಯೊಂದಿಗೆ ಸಂಧಾನವನ್ನು ಮಾಡಿಕೊಳ್ಳುವವರಿರುತ್ತಾರೋ, ಕ್ರೈಸ್ತರನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿಸುವವರು ಇರುತ್ತಾರೋ ಸಭೆಗೆ 2 ಪೇತ್ರನ ಪತ್ರಿಕೆಯಲ್ಲಿರುವ ಮಾರ್ಗದರ್ಶನದ ಅವಶ್ಯಕತೆ ಇರುತ್ತದೆ. ಈ ಪತ್ರದಲ್ಲಿ ಚರ್ಚಿಸಿದ ವಿಷಯಗಳು ಅಸಮಂಜಸವಾಗಿಲ್ಲ; ಅವು ಮುಗಿದುಹೋಗಿಲ್ಲ.

**ವಚನ 3.** ಇದರೊಟ್ಟಿಗೆ "ವಿಷಯಲಂಪಟತನಕ್ಕೆ" ಒಪ್ಪಿಸಿಕೊಡುವವರು ಸಭೆಯಲ್ಲಿ ಗಲಿಬಿಲಿಯನ್ನು ಎಬ್ಬಿಸುವವರು ದುರಾಶೆಯಿಂದ ನಡೆಸಲ್ಪಟ್ಟವರಾಗಿರುತ್ತಾರೆ. ಅವರು ತಮ್ಮ ಗುರಿಯನ್ನು ಮುಟ್ಟುವದಕ್ಕಾಗಿ ಚಮತ್ಕಾರದ ಅಥವಾ ಮೋಸದ ಯೋಜನೆಗಳನ್ನು ಉಪಯೋಗಿಸುವದಿಲ್ಲ. ಅವರು ತಮ್ಮ ಕಲ್ಪನೆಯ ಮಾತುಗಳಿಂದ ನಿಮ್ಮನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳುತ್ತಾರೆ, ಎಂದು ಎಚ್ಚರಿಸುತ್ತಾನೆ. ಪೇತ್ರನು ಈಗಾಗಲೇ ಸುಳ್ಳು ಬೋಧಕರ ಕುರಿತಾಗಿ ಮೂರು ಸಂಗತಿಗಳನ್ನು ಹೇಳಿದ್ದಾನೆ. (1) ಅವರು ಕರ್ತನನ್ನು ಅಲ್ಲಗಳೆಯುತ್ತಾರೆ. (2) ಅವರು ವಿಷಯಲಂಪಟತನಕ್ಕೆ ಎಳೆಯಲ್ಪಡುತ್ತಾರೆ. (3) ಅವರು ದುರಾಶೆಯಿಂದ ನಡೆಸಲ್ಪಡುತ್ತಾರೆ. ಸ್ವಪ್ರಯೋಜನಕ್ಕಾಗಿ ಉಪಯೋಗಿಸುವದು ಎಲ್ಲೆಡೆ ಇದೆ. ಮಾನವನ ಅವಶ್ಯಕತೆಗಳನ್ನು ಕಪಟವೇಷದಾರಿಗಳಾಗಿ ಲೂಟಿಮಾಡುತ್ತಾರೆ ಮತ್ತು ನ್ಯೂನತೆಗಳ ಲಾಭಪಡೆಯುತ್ತಾರೆ. ಕೆಲವರು ದೈಹೀಕ ಆರೋಗ್ಯದ ಬಯಕೆಯಿಂದ ತಾವು ವೈದ್ಯರು ಅಥವಾ ತಮ್ಮಲ್ಲಿ ಚಮತ್ಕಾರದ ಔಷದವಿದೆ ಎಂದು ಹೇಳಿ ಸ್ವಲಾಭವನ್ನು ಪಡೆಯುತ್ತಾರೆ. ದುರಾಶೆಯಿಂದ ಪ್ರೇರಿತರಾಗಿರುವವರು ಧರ್ಮದ ಹೆಸರಿನಲ್ಲಿ ಉತ್ತಮವಾದ ವ್ಯವಹಾರಗಳನ್ನು ಮಾಡುತ್ತಾರೆ ಎಂಬುದರಲ್ಲಿ ವಿಶ್ವಾಸಿಗಳು ಆಶ್ಚರ್ಯಪಡಬೇಕಾಗಿಲ್ಲ. ಅವರು ಅದರೊಟ್ಟಿಗೆ ಅವರು ಭಾವನಾತ್ಮಕತೆಯೊಂದಿಗೆ ನೈತಿಕ ನಿರ್ಬಂದಗಳಿಗೆ ಸ್ವಾತಂತ್ರದ ವಾಗ್ದಾನವನ್ನು ಸೇರಿಸುವಾಗ, ಸುಳ್ಳು ಬೋಧಕರಿಗೆ ಸರಳವಾಗಿ ಸಿದ್ಧರಾಗಿರುವ ಶೋತ್ರು ಗಳು ದೊರೆಯುತ್ತಾರೆ.

ಈಗಾಗಲೇ ಪೇತ್ರನು, ಸುಳ್ಳು ಬೋಧಕರು "ಪಕ್ಕನೇ ತಮ್ಮ ಮೇಲೆ ನಾಶನವನ್ನು ಬರಮಾಡಿಕೊಳ್ಳುತ್ತಾರೆ" ಎಂದು ಹೇಳಿದ್ದಾನೆ. ಆತನು ಹೆಚ್ಚು ಕಡಾಖಂಡಿತವಾಗಿ, **ಲೋಕಾದಿಯಿಂದ ಅಂಥವರಿಗೆ ದಂಡನೆಯ ತೀರ್ಪು ತಪ್ಪದೆ ಬರುತ್ತಿರುವದು, ಅವರ ನಾಶವು ತೂಕಡಿಸುವದಿಲ್ಲ,** ಸೇರಿಸುತ್ತಾನೆ. ಅಪೊಸ್ತಲನು "ನ್ಯಾಯತೀರ್ಪು" ಮತ್ತು "ನಾಶನ" ಅವುಗಳಿಗೆ ಮಾನವನ ನಡತೆಯನ್ನು ನೀಡುವದರ ಮೂಲಕ ವ್ಯಕ್ತಿತ್ವಾರೋಪಣೆ ಮಾಡಿದ್ದಾನೆ. ಗ್ರೀಕ್‌ರು ಈ ವ್ಯಕ್ತಿತ್ವಾರೋಪಣೆಯನ್ನು ವಿಗ್ರಹಾರಾಧನೆಯವರೆಗೆ ಕೊಂಡೊಯ್ಯುತಿದ್ದಾರೆ. *Erōs* ಇದು ಕೇವಲ ದೊಡ್ಡ ಪ್ರಮಾಣದ ವಿಷಯಲಂಪಟತನದಿಂದ ಕೂಡಿದ ದೈಹೀಕ ಪ್ರೀತಿ ಯಲ್ಲ ಬದಲಾಗಿ *Erōs* ಉಲ್ಲಾಸದಿಂದಿರುವ ಯೌವನಸ್ಥ ದೇವರ ಮಗನ Aphrodite ಪ್ರೀತಿಯನ್ನು ಇತರರಲ್ಲಿ ಸುರಿಸಲು ಹೊರಟನು. ಅದೇ ರೀತಿಯಾಗಿ, ಸ್ವಸ್ಥತೆಯನ್ನು ನೀಡುವ ದೇವರು Asclepius, ಕೆಲವೊಮ್ಮೆ ಆರೋಗ್ಯದ ದೇವರು *(Hugieia)* ಎಂದು ಅಮಂಜಸವಾಗಿ ಕರೆಯಲಾಗಿದೆ.

ಪೇತ್ರನಿಗೆ ವ್ಯಕ್ತಿತ್ವಾರೋಪಣೆ ಕೇವಲ ವ್ಯಾಕರಣದ ಅಂಶವಾಗಿದೆ, ಹೇಳಿಕೆಗಳನ್ನು ನಾಟಕೀಯವಾಗಿ ನೀಡುವ ವಿಧಾನವಾಗಿದೆ. ಕಳೆದುಹೋದ *(ekpalai)* ಹಿಂದಿನ ದಿನಗಳಲ್ಲಿ ಸುಳ್ಳು ಬೋಧಕರಂತೆ ನ್ಯಾಯತೀರ್ಪಿಗೆ ಒಳಗಾಗಬೇಕು ನಾಶನಕ್ಕೆ ಒಳಗಾಗಬೇಕು "ಸುಳ್ಳು ಬೋಧಕರ ವಿಷಯದಲ್ಲಿ ತಪ್ಪುಮಾಡಬೇಡಿರಿ." ಪೌಲನು ತನ್ನ ಓದುಗರಿಗೆ ಭರವಸೆಯನ್ನು ನೀಡುತ್ತಾನೆ. ದೇವರ ಉದ್ದೇಶಗಳು ಅರಿತುಕೊಳ್ಳುವ ಪ್ರಕ್ರಿಯೆಯಲ್ಲಿವೆ. ಅವನು ಲೋಕದಲ್ಲಿ ಚಟುವಟಿಕೆಯಿಂದ ಇದ್ದಾನೆ. ನ್ಯಾಯತೀರ್ಪು "ಸೋಮಾರಿ" ಅಥವಾ "ಆಲಸ್ಯ" ಇಬ್ಬರೂ ಇರಬಾರದು. ಇದರ ಹಿಂದೆಯೇ ಬರುವ 3:9ರಲ್ಲಿದ್ದಂತೆ ದೇವರ ತಾಳ್ಮೆಯನ್ನು ತಪ್ಪಾಗಿ ತಿಳಿದುಕೊಳ್ಳುತ್ತಾರೋ ಅಥವಾ ನ್ಯಾಯತೀರ್ಪನ್ನು ಪರಿಗಣಿಸಲು ಅಸಹಾಯಕರಾಗಿದ್ದಾರೋ. ಆತನು ಅದನ್ನು ಬಹಳ ಹಿಂದಿನ ಕಾಲದಲ್ಲಿಯೇ ಲೋಕಕ್ಕೆ ತಂದಿದ್ದಾನೆ.

## ದೇವರ ನ್ಯಾಯತೀರ್ಪಿನ ಖಚಿತತೆ (2:4-10)

**4ಹೇಗಂದರೆ ದೇವದೂತರು ಪಾಪ ಮಾಡಿದಾಗ ದೇವರು ಅವರನ್ನು ಸುಮ್ಮನೆ ಬಿಡದೆ ನರಕಕ್ಕೆ ದೊಬ್ಬಿ ನ್ಯಾಯತೀರ್ಪನ್ನು ಹೊಂದುವದಕ್ಕೆ ಇಡಲ್ಪಟ್ಟವರಾಗಿರಬೇಕೆಂದು ಕತ್ತಲೆಗುಂಡಿಗಳಿಗೆ ಒಪ್ಪಿಸಿದನು. 5ಆತನು ಭಕ್ತಿಹೀನರಾದ ಪುರಾತನರ ಲೋಕವನ್ನು ಸುಮ್ಮನೆ ಬಿಡದೆ ಅವರ ಮೇಲೆ ಜಲಪ್ರಲಯವನ್ನು ಬರಮಾಡಿದನು; ಆದರೆ ಸುನೀತಿ ಯನ್ನು ಸಾರುವವನಾಗಿದ್ದ ನೋಹನನ್ನೂ ಅವನೊಂದಿಗೆ ಬೇರೆ ಏಳು ಮಂದಿಯನ್ನೂ ಉಳಿಸಿದನು. 6ಆತನು ಸೊದೋಮಗೊಮೋರ ಪಟ್ಟಣಗಳನ್ನು ಸುಟ್ಟು ಬೂದಿಮಾಡಿ ಮುಂದೆ ಭಕ್ತಿಹೀನರಾಗಿ ಬದುಕುವವರ ಗತಿ ಇಂಥದೆಂದು ಸೂಚಿಸುವದಕ್ಕಾಗಿ ಅವುಗಳಿಗೆ ನಾಶನವನ್ನು ವಿಧಿಸಿದನು. 7ಆದರೆ ಆ ಅಧರ್ಮಿಗಳ ನಾಚಿಕೆಗೆಟ್ಟ ನಡತೆಗೆ ವೇದನೆಗೊಂಡಿದ್ದ ನೀತಿವಂತನಾದ ಲೋಟನನ್ನು ತಪ್ಪಿಸಿದನು. 8ಆ ನೀತಿವಂತನು ಅವರ ನಡುವೆ ಇದ್ದುಕೊಂಡು ಅವರ ಅನ್ಯಾಯಕೃತ್ಯಗಳನ್ನು ನೋಡುತ್ತಾ ಕೇಳುತ್ತಾ ಅವುಗಳ ನಿಮಿತ್ತ ದಿನೇ ದಿನೇ ತನ್ನ ನೀತಿಯುಳ್ಳ ಆತ್ಮದಲ್ಲಿ ಬಹಳವಾಗಿ ಕರಕರೆಗೊಂಡನು. 9ಕರ್ತನು ಭಕ್ತರನ್ನು ಕಷ್ಟಗಳೊಳಗಿಂದ ತಪ್ಪಿಸುವದಕ್ಕೂ ದುರ್ಮಾರ್ಗಿಗಳನ್ನು ನ್ಯಾಯತೀರ್ಪಿನ ದಿನದ ತನಕ ಶಿಕ್ಷಾನುಭವದಲ್ಲಿ ಇಡುವದಕ್ಕೂ ಬಲ್ಲವನಾಗಿದ್ದಾನೆ. 10ಮುಖ್ಯವಾಗಿ ಬಂಡುತನವನ್ನು ಆಶಿಸಿ ಶರೀರಭಾವಾನುಸಾರ ನಡೆದು ಪ್ರಭುತ್ವತಿರಸ್ಕಾರ ಮಾಡುವವರನ್ನು ಹೀಗೆ ಶಿಕ್ಷಿಸುವನು. ಇವರು ಯಾರಿಗೂ ಹೆದರದೆ ಸ್ವೇಚ್ಛಾಪರರಾಗಿದ್ದು ಮಹಾಪದವಿಯವರನ್ನು ನಿರ್ಭಯವಾಗಿ ದೂಷಿಸುತ್ತಾರೆ.**

ಉದ್ದವಾದ ಈ ಗ್ರೀಕ್ ವಾಕ್ಯಗಳು ಎಂದಿಗೂ ಸರಿಯಾದ ಮುಕ್ತಾಯಕ್ಕೆ ಬರುವದಿಲ್ಲ. ಅದು 10ನೇ ವಚನದಲ್ಲಿ ಸತ್ತುಹೋಗುತ್ತದೆ ಇದರಿಂದಾಗಿ ಪೇತ್ರನು ತನ್ನ ಗಮನವನ್ನು ಸುಳ್ಳು ಬೋಧಕರ ಕುರಿತು ಹೆಚ್ಚಿನ ವರ್ಣನೆಯತ್ತ ತಿರುಗಿಸುತ್ತಾನೆ. ಶರತ್ತುಬದ್ಧವಾದ ಸರಣಿ ವಾಕ್ಯಗಳೊಂದಿಗೆ. ಹಿಂದೆ ನ್ಯಾಯ ತೀರ್ಪನ್ನು ನೀಡಿದ ದೇವರು ಮತ್ತೊಮ್ಮೆ ನ್ಯಾಯತೀರ್ಪನ್ನು ನೀಡಲು ಸಂಪೂರ್ಣವಾಗಿ ಸಮರ್ಥನಾಗಿದ್ದಾನೆ. ಯೂದನೊಂದಿಗಿರುವ ಸಮಾನತೆಗಳು ಸಾಕ್ಷಿಯಾಗಿದ್ದವೆ. ದೇವರು ದೇವದೂತರನ್ನು ಉಳಿಸದಿದ್ದಲ್ಲಿ, ದೇವರು ನೋಹನನ ಲೋಕ ವನ್ನು ಉಳಿಸದಿದ್ದಲ್ಲಿ, ಆತನು ಸೊದೋಮಗೊಮೋರ ಪಟ್ಟಣವನ್ನು ಉಳಿಸದಿದ್ದಲ್ಲಿ ... ಹೇಳಿಕೆಯು ಮುಂದುವರೆಯುತ್ತದೆಂದು ನಾವು ನಿರೀಕ್ಷಿಸುತ್ತೇವೆ. ಆತನು ಸುಳ್ಳುಬೋಧ ಕರನ್ನು ಉಳಿಸುವದಿಲ್ಲ. ಅವರಿಗೆ ಸಹ ತೀರ್ಪಾಗುವದು. ಸೂಚನೆಯು ಸ್ಪಷ್ಟವಾಗಿದ್ದರೂ ಪೇತ್ರನು ಈ ಮಾತನ್ನು ಸುತ್ತುಬಳಸಿ ಹೇಳುವದಿಲ್ಲ. ಕೆಲವು ಅನುವಾದಕರು ವಚನ 9ರಲ್ಲಿ "ನಂತರ" ಎಂಬ ಪದವನ್ನು ಉಪಯೋಗಿಸುತ್ತಾರೆ ಮತ್ತು ವಾಕ್ಯವನ್ನು ಪೂರ್ತಿಗೊಳಿಸಲು ಪ್ರಯತ್ನಿಸುತ್ತಾರೆ ಆದರೆ ಅವರ ಪ್ರಯತ್ನಗಳು ಕೃತಿಮವಾಗಿವೆ.

**ವಚನ 4.** ಓದುಗರು ಈ ವಚನದಿಂದ ಸೈತಾನ ಮೂಲಕ ಕುರಿತು ಏನನ್ನೂ ಹೇಳ ದಿರುವ ದೇವದೂತರ ಕುರಿತು ಒಂದು ಸಿದ್ಧಾಂತವನ್ನು ಬೆಳೆಸುವದರ ಕುರಿತು ಎಚ್ಚರವಾಗಿ ರಬೇಕು. ದೇವದೂತರು ಆಕಸ್ಮಿಕವಾಗಿದ್ದಾರೆ ಇಲ್ಲಿ ಪ್ರಾಮುಖ್ಯವಾದದ್ದು ದೇವರ ನ್ಯಾಯ ತೀರ್ಪು. ದೇವರು ಮತ್ತು ಮನುಷ್ಯರ ಮಧ್ಯದಲ್ಲಿರುವ ಸಂಬಂಧದಲ್ಲಿ ದೇವದೂತರ ಕಾರ್ಯ ಮಾಡುತ್ತಾರೆ ಎಂಬುದಕ್ಕೆ ಪೇತ್ರನು ಯಾವ ತತ್ವಶಾಸ್ತ್ರದ ಸಾಕ್ಷಿಯನ್ನು ಒದಗಿಸುವದಿಲ್ಲ. ಅವನು ಅವರ ಸೃಷ್ಟಿ ಅಥವಾ ಅವರನ್ನು ನ್ಯಾಯತೀರ್ಪಿಗೆ ನಡೆಸುವ ಪಾಪಗಳ ಕುರಿತಾಗಿ ಏನನ್ನೂ ಹೇಳುವದಿಲ್ಲ. ಉತ್ತಮವಾದದ್ದನ್ನು ನಾವು ಹೇಳಬೇಕಾದರೆ ದೇವದೂತರ ಕುರಿತು ಓದುಗರನ್ನು ಪ್ರಶ್ನೆ ಕೇಳಲು ಆಮಂತ್ರಿಸುವದಾಗಿದೆ.

ದೇವದೂತರು, ದೆವ್ವಗಳು ಮತ್ತು ಸೈತಾನನು ಸತ್ಯವೇದದಲ್ಲಿ ಒಗಟಾಗಿದ್ದಾರೆ. ಇಬ್ರಿಯ *mal'ak* ಪದ ಗ್ರೀಕ್ *angelos* ಪದ ಒಬ್ಬ ವ್ಯಕ್ತಿಗೆ ಅನ್ವಯಿಸುವ ಪದಗಳಾಗಿವೆ ಇದರ ಅರ್ಥ "ದೂತರು" ಕೆಲವೊಂದು ಸಂದರ್ಭಗಳಲ್ಲಿ ದೇವರು ದೂತರನ್ನು ಜನರ ಬಳಿಗೆ ಕಳುಹಿಸಿದನು. ಕೆಲವು ದೇವದೂತರಿಗೆ ಹೆಸರುಗಳನ್ನು ಸಹ ನೀಡಲಾಗಿದೆ: ಮಿಕಾಯೇಲ್ ಮತ್ತು ಗಬ್ರಿಯೇಲ್. ಇಲ್ಲಿ ಹೇಳಲು ಹೆಚ್ಚಿನದೇನು ಇಲ್ಲ. ಆದಾಗ್ಯೂ ಇನ್ನೂ ಹೆಚ್ಚಿನ ವ್ಯವಹಾರದ ಕುರಿತು ಹೇಳಲು ಜನರ ಮನಸ್ಸನ್ನು ವೀಕ್ಷಿಸುವ ಹಂತದಲ್ಲಿ ಇರಿಸಲಾಗಿಲ್ಲ. ಯೋಬ ಮತ್ತು ಕೆಲವು ಕೀರ್ತನೆಗಳು ಪರಲೋಕದಲ್ಲಿರುವ ಸಭೆಯನ್ನು ಉಲ್ಲೇಖಿಸುವಾಗ, ಈ ಹೇಳಿಕೆಗಳನ್ನು ವಾಸ್ತವಿಕತೆಗಿಂತ ಕಡಿಮೆ ಹಂತದಲ್ಲಿ ತೆಗೆದುಕೊಳ್ಳಲಾಗಿದೆ ಎಂದು ಸಂದೇಹಪಡುತ್ತಾರೆ. ಕ್ರಮಾನುಗತದ ಶ್ರೇಣಿಯಲ್ಲಿ ದೇವದೂತರನ್ನು ಕೆರೂಬಿಯರು ಮತ್ತು ಸೆರಾಫಿಯರು ಎಂಬ ಸ್ಥಾನದಲ್ಲಿ ಇಡುವಾಗ ಇದು ಸ್ಪಷ್ಟವಾದ ವಿಚಾರವಾಗಿದೆ. ಸತ್ಯವೇದದ ಕಥಾನಕಗಳಲ್ಲಿ ದೇವರ ದೂತರು ಕಾಣಿಸಿಕೊಳ್ಳುತ್ತಾರೆ, ಇಂಥಹಾ ಜೀವಿಗಳು ಸಹಜವಾಗಿ ಅಸ್ತಿತ್ವದಲ್ಲಿವೆ. ಇಷ್ಟು ಮಾತ್ರ ನಮಗೆ ತಿಳಿದದೆ.

2 ಪೇತ್ರ 2:4ರಲ್ಲಿ "ದೆವ್ವ" ಅಥವಾ "ಸೈತಾನ" ಎಂಬ ಪದಗಳು ಕಂಡುಬರುವದಿಲ್ಲ.[4] ಹಾಗೂ, ಈ ವಚನವನ್ನು ಆತನ ಮೂಲಕದ ಹೇಳಿಕೆಯಾಗಿ ತೆಗೆದುಕೊಳ್ಳಲಾಗಿದೆ. ಸೈತಾನನು ಒಬ್ಬ ದೇವದೂತನಾಗಿದ್ದನು ಅವನಲ್ಲಿರುವ ಹೆಮ್ಮೆ ಅವನನ್ನು ದೇವರ ವಿರುದ್ಧ ವಾಗಿ ಬಂಡಾಯ ಮಾಡುವದಕ್ಕೆ ಪ್ರೇರೇಪಿಸಿತು ಎಂಬ ದೀರ್ಘಕಾಲದ ಹಿಂದಿನ ಹೇಳಿಕೆ ಯಿದೆ. ಇದರ ಕುರಿತು ಸತ್ಯವೇದದ ಹೇಳಿಕೆಗಳು ಬೇಕಾಗಿವೆ. ಪ್ರಕಟನೆ 12 ಬಹಳಷ್ಟು ಅಲಂಕಾರಿಕವಾಗಿದೆ, ಮತ್ತು ಯೋಹಾನ ದಾರ್ಶನಿಕ ಹೇಳಿಕೆಯಾಗಿದೆ. ವಾಕ್ಯಭಾಗದಿಂದ ಸೈತಾನ ಮೂಲದ ಕುರಿತು ಇದಕ್ಕೆ ಸಮಾನವಾದ ಹೇಳಿಕೆಯನ್ನು ಹೊಂದಿಕೊಳ್ಳುವದು ಕಠಿಣವಾಗಿದೆ. ಯೇಸು, "ಸೈತಾನನು ಸಿಡಿಲಿನಂತೆ ಆಕಾಶದಿಂದ ಬೀಳುವದನ್ನು ಕಂಡೆನು" (ಲೂಕ 10:18) ಎಂದು ಹೇಳುವಾಗ ಸನ್ನಿವೇಶವು ಎಪ್ಪತ್ತು ಜನರ ಕಾರ್ಯದಿಂದಾಗಿ ಆತನು ಸೈತಾನ ಆತ್ಮೀಕ ಸೋಲಿನ ಕುರಿತಾಗಿ ಮಾತನಾಡುತ್ತಿದ್ದಾನೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಯೆಹೆಜ್ಕೇಲ 28 ರಂತಹ ವಾಕ್ಯಭಾಗಗಳು ತೂರ್ ಪಟ್ಟಣದ ಮೇಲೆ ದೇವರ ನ್ಯಾಯತೀರ್ಪಿನ ಕುರಿತಾಗಿ ಮಾತನಾಡುತ್ತವೆ. ಈ ಅಧ್ಯಾಯದಲ್ಲಿ ಏದೇನ್ ತೋಟದ ಊಹೆ ಸಹ ಇದೆ. ಸೈತಾನ ಮೂಲದ ಕುರಿತಾಗಿ ಕಾಲ್ಪನಿಕ ಉಲ್ಲೇಖಗಳನ್ನು ನೋಡುವದಾಗಿದೆ. ದೇವದೂತರಂತೆ, ಸತ್ಯವೇದದಲ್ಲಿ ಸೈತಾನನು ಸಹ ಸರಳವಾಗಿ ಕಾಣಿಸಿಕೊಳ್ಳುತ್ತಾನೆ. ಸೈತಾನನು ಹೇಗೆ ಸಂಬಂಧಿಸಿದ್ದಾನೆ ಅಥವಾ ಮನುಷ್ಯನು ಪಾಪಕ್ಕೆ ಕಾರಣನಾಗಿದ್ದಾನೆ ಎಂಬುದು ಸ್ಪಷ್ಟನಾಗಿಲ್ಲ. ಆತನು ಏನೇ ಮಾಡಿದರೂ, ಮಾನವರನ್ನು ತಮ್ಮ ಜವಾಬ್ದಾರಿಯಿಂದ ವಿಮುಕ್ತಿಗೊಳಿಸುವದಿಲ್ಲ.

ನಾವು ವಿಷಯದ ಕುರಿತು ಹೇಳುವದೇನೆಂದರೆ, ಎಲ್ಲಿಯೋ, ಯಾವುದೋ ಸಮಯದಲ್ಲಿ ದೇವದೂತರು ಪಾಪಮಾಡಿದ್ದಾರೆ. ಪೇತ್ರನು ದೇವದೂತರು ಪಾಪ ಮಾಡಿದ ಉದಾಹರಣೆಯನ್ನು ಸತ್ಯವೇದದಲ್ಲಿ ತೋರಿಸುವದಾದರೆ, ಆದಿಕಾಂಡ 6:1-4 ಉತ್ತಮವಾದ

ದೃಷ್ಟಿಕೋನವಾಗಿದೆ. ಪ್ರಳಯಕ್ಕಿಂತ ಸ್ವಲ್ಪ ಸಮಯ ಪೂರ್ವದಲ್ಲಿ "ದೇವಪುತ್ರರು" ಮನುಷ್ಯ ಪುತ್ರಿಯರ ಸೌಂದರ್ಯವನ್ನು ಅವರನ್ನು ತಮ್ಮ ಹೆಂಡತಿಯರಾಗಿ ಸ್ವೀಕರಿಸಿದರು ಎಂದು ದಾಖಲಿಸುತ್ತದೆ. ಈ ಸನ್ನಿವೇಶದಲ್ಲಿ ಸೃಷ್ಟಿಯಲ್ಲಿ ದುಷ್ಟತನವನ್ನು ಗಮನಿಸಲಾಗಿದೆ. ಇದರ ಪರಿಣಾಮವಾಗಿ ದೇವರು ಪ್ರಳಯವನ್ನು ಬರಮಾಡಿದನು, ಅದೇ ಸಮಯದಲ್ಲಿ ಆದಿಕಾಂಡ 6ರಲ್ಲಿ ದೇವದೂತರು ಎಂಬ ಪದವನ್ನು ಉಪಯೋಗಿಸಲಾಗಿಲ್ಲ. "ದೇವ ಪುತ್ರರು" ಬಹುಶಃ ಪರಲೋಕದ ಜೀವಿಗಳನ್ನು ಯೋಬ 1:6ರಲ್ಲಿರುವಂತೆ ಉಲ್ಲೇಖಿಸುತ್ತಿರಬಹುದು.

ಪೇತ್ರನ ದೇವದೂತರು ಆದಿಕಾಂಡ 6:2ರಲ್ಲಿರುವ "ದೇವಪುತ್ರರು" ಎಂಬ ಪದಕ್ಕೆ ಸಮಾನವಾಗಿದೆ ಎಂಬ ನಿರ್ಣಯಕ್ಕೆ ಬರಲು ಬೆಂಬಲಿಸುವದಕ್ಕಾಗಿ ಇನ್ನೂ ಇತರ ಪರಿಗಣನೆಗಳನ್ನು ಅನೇಕಾವರ್ತಿ ಉಪಯೋಗಿಸಲಾಗಿದೆ. ಹೊಸ ಒಡಂಬಡಿಕೆಯ ಅವಧಿಯಲ್ಲಿ, ರಬ್ಬಿಗಳು ಆದಿಕಾಂಡ 6:2ರಲ್ಲಿರುವ "ದೇವಪುತ್ರರು" ಎಂಬುದನ್ನು ಸ್ಥಿರ ಪಡಿಸುವದಕ್ಕೆ ಬಹಳ ಆಸಕ್ತಿಯನ್ನು ತೋರಿಸಿದರು. ಯೂದನಿಂದ ಸೂಚಿಸಲ್ಪಟ್ಟ 1 ಹನೋಕ ಎಂದು ಕರೆಯಲ್ಪಡುವ ಕಾಲದಿಂದ ಆದಿಕಾಂಡ 6ರಲ್ಲಿರುವ ಕಥೆಯನ್ನು ಅಂದಗೊಳಿಸಲು ಆಸಕ್ತಿ ಹುಟ್ಟಿಸುವಂಥ ಕಾರ್ಯಗಳು ನಡೆದಿವೆ, ಯೂದನು ಮತ್ತು ಪೇತ್ರನು ಇದರ ಕುರಿತು ಚಿರಪರಿಚಿತರಾಗಿದ್ದರು ಎಂದು ಹೇಳುವದು ಉತ್ತಮವಾಗಿದೆ. ಪೇತ್ರನು ನೋಹನ ಕಾಲದಲ್ಲಿ ಲೋಕಕ್ಕೆ ಬಂದ ನ್ಯಾಯತೀರ್ಪಿನ ಕುರಿತಾಗಿ ತನ್ನ ಪತ್ರದಲ್ಲಿ ಮೂರು ಸಾರಿ ಮಾತನಾಡುತ್ತಾನೆ (1 ಪೇತ್ರ 3:20; 2 ಪೇತ್ರ 2:5; 3:6). "ದೇವಪುತ್ರರು" ಎಂಬ ವಿಷಯವು ಪ್ರಳಯವನ್ನು ಪರಿಚಯಿಸಿದ ಅಧ್ಯಾಯದಿಂದ ಪ್ರಾರಂಭವಾಗುತ್ತದೆ.

ಕೊನೆಯಲ್ಲಿ ಸಾಕ್ಷಿಯು ಖಚಿತವಾಗಿಲ್ಲ. ಪೇತ್ರನು ದೇವದೂತರು ನರಕಕ್ಕೆ ದೊಬ್ಬಲ್ಪಟ್ಟರು ಎಂದು ಹೇಳುವಾಗ ಆದಿಕಾಂಡ 6ರಲ್ಲಿ ಉಲ್ಲೇಖಿಸಿದ "ದೇವಪುತ್ರರು" ಎಂಬ ಪದವನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರಲಿಕ್ಕಿಲ್ಲ. ಹಾಗಿಲ್ಲದಿದ್ದಲ್ಲಿ, ಪಾಪಿಗಳಾದ ದೇವದೂತರು ವಿಷಯವಾಗಿರುವ ಇನ್ನೊಂದು ಹಳೆ ಒಡಂಬಡಿಕೆಯ ವಾಕ್ಯಭಾಗವನ್ನು ಯೋಚಿಸುವದು ಕಠಿಣವಾಗಿದೆ. ಯೂದನು ಸಹ ದೇವದೂತರ ಮೇಲೆ ಬಂದ ನ್ಯಾಯತೀರ್ಪಿನ ಕುರಿತಾಗಿ ಪ್ರಸ್ತಾಪಿಸುತ್ತಾನೆ ಆದರೆ ಅವರು ದೇವರು ಅವರಿಗೆ ನೀಡಿದ ಸ್ಥಾನದಲ್ಲಿ ತೃಪ್ತರಾಗಿಲ್ಲದೇ ಇರುವ ಕಾರಣ ದೊಬ್ಬಲ್ಪಟ್ಟರು. ಯೂದನು ದೇವದೂತರ ಪಾಪದ ಹಿಂದೆಯಿರುವ ಪರಿಸ್ಥಿಯ ಕುರಿತಾಗಿ ಪೇತ್ರನಿಗಿಂತ ಹೆಚ್ಚಿನ ವಿವರವನ್ನು ನೀಡುತ್ತಾನೆ.

ಪೇತ್ರನು, **ದೇವದೂತರು ಪಾಪ ಮಾಡಿದಾಗ ದೇವರು ಅವರನ್ನು ಸುಮ್ಮನೆ ಬಿಡದೆ ನರಕಕ್ಕೆ ದೊಬ್ಬಿದನು** ಎಂದು ಹೇಳುತ್ತಾನೆ. "ನರಕದಲ್ಲಿ ದೊಬ್ಬುವದು" *(tartaroō)* ಇದು ಕ್ರಿಯಾಪದ ಇದರ ಅರ್ಥ *Tartarus* ವಶಪಡಿಸಿಕೊಳ್ಳುವದು ಇದನ್ನು ಕೇವಲ ಇಲ್ಲಿ ಹೊಸ ಒಡಂಬಡಿಕೆಯಲ್ಲಿ ಮಾತ್ರ ಉಪಯೋಗಿಸಲಾಗಿದೆ. ವಿಗ್ರಹರಾಧಕರ ಸಾಹಿತ್ಯದಲ್ಲಿ *Tartarus* ಪಾತಾಳಲೋಕದ ಭಾಗವಾಗಿದೆ. ಅಲ್ಲಿ ಒಲಂಪಿಯನ್ ದೇವರ ಪೂರ್ವಜರ ಟೈಟಾನ್‌ಗಳು ವಶಪಡಿಸಿಕೊಳ್ಳಲಾಗಿದೆ ಪೇತ್ರನು ಈ ಪದವನ್ನು ಅವು ಅಲೌಕಿಕ ಜೀವಿಗಳಾಗಿರುವದರಿಂದ ಆಯ್ದುಕೊಂಡಿರಬಹುದು, ಈ ವಿಷಯದಲ್ಲಿ ದೇವದೂತರು ಆತನ ವಿಷಯವಾಗಿದ್ದಾರೆ. ಕಾಲ್ಪನಿಕವಾಗಿ ಆಯ್ದುಕೊಂಡಿರಬಹುದು, ಈ ವಿಷಯದಲ್ಲಿ ದೇವದೂತರು ಆತನ ವಿಷಯ ವಾಗಿದ್ದಾರೆ. ಕಾಲ್ಪನಿಕವಾಗಿ ದುಷ್ಟರನ್ನು ಹೆಡ್ಸ್ ವಶಪಡಿಸಿಕೊಂಡಿದೆ.

ಕೆಲವು ಹಸ್ತಪ್ರತಿಗಳು "ಅಂಧಕಾರವೆಂಬ *(seirais)* ಸರಪಣಿಗಳಿಂದ ಬಂದಿಸಲ್ಪಟ್ಟಿದ್ದಾರೆ" ಎಂದು ಹೇಳುತ್ತವೆ. ಇನ್ನಿತರರು ಹೀಗೆ ಹೇಳುತ್ತಾರೆ. "ಅಂಧಕಾರವೆಂಬ *(sirois)* ತಗ್ಗಿನಲ್ಲಿ" NASB ಎರಡನೆಯ ಹೇಳಿಕೆಗೆ ಒಲವನ್ನು ತೋರಿಸುತ್ತದೆ ಅಂಧಕಾರ ವೆಂಬ ತಗ್ಗು. ನಾವು ಯಾವ ಹೇಳಿಕೆಯನ್ನು ಓದುವದಕ್ಕೆ ಆಯ್ಕೆ ಮಾಡಿಕೊಳ್ಳುತ್ತೇವೆ ಎಂಬುವದರ ಮೇಲೆ ಯೋಚನೆಯು ಸ್ವಲ್ಪ ಮಟ್ಟಿಗೆ ಬದಲಾಗುತ್ತದೆ. "ಸರಪಣಿಗಳು" ಅಥವಾ "ತಗ್ಗುಗಳು" ಎಂಬ ಪದದ ಉಲ್ಲೇಖ ಸ್ಪಷ್ಟವಾಗಿ ಅಲಂಕಾರವಾಗಿದೆ. ಆತ್ಮೀಕ ಜೀವಿಗಳಿಗೆ

ವಾಸ್ತವಿಕವಾದ ಸರಪಣಿಗಳು, ತಗ್ಗುಗಳು ಯಾವ ಅರ್ಥವನ್ನೂ ನೀಡುವದಿಲ್ಲ. ದೇವದೂತರು ಕಾಯುತ್ತಿರುವ ನ್ಯಾಯತೀರ್ಪು ಕರ್ತನು ತಿರುಗಿ ಬರುವಾಗ ಎಲ್ಲರೂ ದೇವರ ಎದುರಿನಲ್ಲಿ ನಿಲ್ಲುವಾಗ ನಡೆಯುವ ನ್ಯಾಯತೀರ್ಪಿನಂತೆಯೇ ದೇವದೂತರು ಕಾಯುತ್ತಿರುವ ತೀರ್ಪು ಇರುತ್ತದೆ.

**ವಚನ 5.** ಅಪೊಸ್ತಲನು ಸುಳ್ಳು ಬೋಧಕರ ಮೇಲೆ ಖಚಿತವಾಗಿ ಬರುವ ನ್ಯಾಯತೀರ್ಪಿನ ಮೇಲೆ ಕೇಂದ್ರಿಕರಿಸಿ ಅಲ್ಲಿಯೇ ಉಳಿಯುತ್ತಾನೆ. ದೇವರು ದೇವದೂತರನ್ನು ಉಳಿಸದಿದ್ದಲ್ಲಿ, ಆತನು ಪ್ರಾಚೀನ ಲೋಕವನ್ನು ಸಹ ಉಳಿಸಲಿಲ್ಲ. ಮನುಷ್ಯಪುತ್ರಿಯರ ಬಳಿಗೆ ಹೋದ ದೇವಪುತ್ರರ ವರ್ಣನೆಯ ತಕ್ಷಣ ಆದಿಕಾಂಡ 6 ರಲ್ಲಿರುವ ಜಲಪ್ರಳಯದ ಕಥೆ ಮುಂದುವರೆಯುತ್ತದೆ. ಮೇಲೆ ಉಲ್ಲೇಖಿಸಿದಂತೆ, ಸಂಭವಿಸಿದ ಘಟನೆಗಳ ಕ್ರಮವು 2:4ರಲ್ಲಿರುವ "ದೇವದೂತರು" ಆದಿಕಾಂಡ 6ರಲ್ಲಿರುವ "ದೇವಪುತ್ರರಿಗೆ" ಸಮಾನವಾಗಿದ್ದರೆ ಎಂಬ ಸಲಹೆಗೆ ಸ್ವಲ್ಪ ಬೆಂಬಲವನ್ನು ನೀಡುತ್ತದೆ. ಪೇತ್ರನಂತೆ, ಯೂದನು ದೇವರು ಅನೀತಿವಂತರಿಗೆ ನೀಡಿದ ತೀರ್ಪಿನ ಕುರಿತಾಗಿ ಮೂರು ಉದಾಹರಣೆಗಳನ್ನು ಪ್ರಸ್ತಾಪಿಸುತ್ತಾನೆ. ಅದರಲ್ಲಿ ಎರಡು ಒಂದೇ ರೀತಿಯಾಗಿವೆ, ಆದರೆ ಯೂದನು ಪ್ರಳಯದ ಕಥೆಯ ಬದಲಾಗಿ ದೇವರು ಇಸ್ರಾಯೇಲರ ಮೇಲೆ ಅರಣ್ಯದಲ್ಲಿರುವಾಗ ಬಂದ ನ್ಯಾಯತೀರ್ಪಿನ ಕುರಿತಾಗಿ ಮಾತನಾಡುತ್ತಾನೆ (ಯೂದ 5). ಪೇತ್ರನು ನ್ಯಾಯತೀರ್ಪು ದೇವರಿಂದ ಬಂದದ್ದು ಎಂದು ಇಲ್ಲಿ ಮತ್ತು 3:5, 6ರಲ್ಲಿ ಉಲ್ಲೇಖಿಸುತ್ತಾನೆ ಯೂದನು ಪ್ರಳಯದ ಕುರಿತು ಉಲ್ಲೇಖಿಸುವದೇ ಇಲ್ಲ.

ಪೇತ್ರನು ನೋಹವನ್ನು ನೀತಿವಂತಿಕೆಯ ಉಪದೋಶಕನು ಎಂದು ಕರೆಯುವಾಗ ಯೆಹೂದ್ಯರ ಮತ್ತು ಕ್ರೈಸ್ತರ ಸಂಪ್ರದಾಯವನ್ನು ಅನುಸರಿಸುತ್ತಾನೆ. ನೋಹನು ಎಲ್ಲಾ ಭಕ್ತಿಹೀನತೆಯನ್ನು ನೋಡಿ ವೇದನೆ ಪಟ್ಟನು ಎಂದು ಯೋಚಿಸುವದು ಸಕಾರಣವುಳ್ಳದ್ದಾಗಿದೆ. ಆತನು ತನ್ನ ಸಮಕಾಲೀನರನ್ನು ಎಲ್ಲಾ ಕೆಟ್ಟತನದಿಂದ ದೂರವಾಗಿರ್ರಿ ಮತ್ತು ನೀತಿವಂತರಾಗಿ ಜೀವಿಸಿರಿ ಎಂದು ಪ್ರೇರೇಪಿಸಲು ಪ್ರಯತ್ನಿಸುತ್ತಿದ್ದನು ಎಂಬುದನ್ನು ಊಹಿಸಬಹುದು. ಹಾಗೂ ಆದಿಕಾಂಡದಲ್ಲಿ ದೇವರು ಮತ್ತು ನೋಹನನ ಮನುಷ್ಯರು ತಮ್ಮ ಮೇಲೆ ತಾವೇ ಬರಮಾಡಿಕೊಂಡ ಸ್ಥಿತಿಯನ್ನು ನೋಡಿ ದುಃಖಪಟ್ಟರೂ,

> ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವದನ್ನೂ ಅವರು ಹೃದಯದಲ್ಲಿ ಯೋಚಿಸುವದೆಲ್ಲವು ಯಾವಾಗಲು ಬರೀ ಕೆಟ್ಟದ್ದಾಗಿರುವದನ್ನೂ ಯೆಹೋವನು ನೋಡಿ ತಾನು ಭೂಮಿಯ ಮೇಲೆ ಮನುಷ್ಯರನ್ನು ಉಂಟುಮಾಡಿದ್ದಕ್ಕೆ ಪಶ್ಚಾತ್ತಾಪಪಟ್ಟು, ತನ್ನ ಹೃದಯದಲ್ಲಿ ನೊಂದುಕೊಂಡನು (ಆದಿಕಾಂಡ 6:5, 7).

ಮುಂದೆ ದಾಖಲೆಗಳು "ದೇವರು ಲೋಕವನ್ನು ನೋಡಿದಾಗ ಅದು ಕೆಟ್ಟು ಹೋಗಿತ್ತು; ಭೂನಿವಾಸಿಗಳೆಲ್ಲರೂ ತಮ್ಮ ನಡವಳಿಕೆಯನ್ನು ಕೆಡಸಿಕೊಂಡಿದ್ದರು" (ಆದಿಕಾಂಡ 6:12).

ಆದಿಕಾಂಡದಲ್ಲಿ ನೋಹನು ಉಪದೇಶಮಾಡಿದನು ಎಂಬುದಕ್ಕೆ ಯಾವುದೇ ದಾಖಲೆಗಳಿಲ್ಲ. ಅವನನ್ನು ನೀತಿವಂತ ಮನುಷ್ಯ ಎಂದು ವರ್ಣಿಸಲಾಗಿದೆ. ದೇವರು ಅವನಿಗೆ ನಾವೆಯನ್ನು ಕಟ್ಟಲು ಆದೇಶಿಸಿದಾಗ ಆತನು ನಂಬಿಗಸ್ತನಾಗಿದ್ದನು. ಪೇತ್ರನಿಗೆ ನೋಹನನು ಉಪದೇಶಿಸಿದ್ದು ಈ ವಿಷಯದಲ್ಲಿ ಕೇಂದ್ರವಾಗಿಲ್ಲ. ದೇವರ ನ್ಯಾಯತೀರ್ಪು ವಿಷಯವಾಗಿದೆ. ಸುಳ್ಳು ಬೋಧಕರು ಪೇತ್ರನು ಸಭೆಗೆ ಸಂಭೋಧಿಸಿರುವದನ್ನು ತೆಗೆದುಕೊಂಡು ಸಭೆಗೆ ತೊಂದರೆಯನ್ನು ನೀಡುತ್ತಿರುವಾಗ ಪೇತ್ರನು ಜಲಪ್ರಳಯದ ವಿರೋಧಿ ಲೋಕದಲ್ಲಿ ದೇವರ ನ್ಯಾಯತೀರ್ಪಿನ ಮೇಲೆ ಗಮನವನ್ನು ನೀಡಿರುವದು ಉತ್ತಮವಾಗಿದೆ.

NASB ಗ್ರೀಕ್‌ನ್ನು ಸರಳೀಕರಿಸುತ್ತದೆ. ಆದುದರಿಂದ ಇನ್ನಿತರ ಹೆಚ್ಚಾದ ಅನುವಾದಕರು, ಪೇತ್ರನು "ನೋಹನನ್ನು ... ಆತನೊಟ್ಟಿಗೆ ಏಳು ಜನರನ್ನು ರಕ್ಷಿಸಿದನು" ಎಂದು

ಹೇಳುವಾಗ, ನಿಜವಾಗಿಯೂ ಗ್ರೀಕ್‌ರು “ಎಂಟನೆಯವನಾದ ನೋಹನನ್ನು ರಕ್ಷಿಸಿದನು” ಎಂದು ಓದುತ್ತಾರೆ. 1 ಪೇತ್ರ 3:20ರಲ್ಲಿ ಅಪೊಸ್ತಲನು ಸಹ ಜಲಪ್ರಳಯದಲ್ಲಿ ರಕ್ಷಿಸಲ್ಪಟ್ಟವರು “ಎಂಟು ಜನರೆಂದು” ಉಲ್ಲೇಖಿಸುತ್ತಾನೆ. ಆದಿಕಾಂಡದಲ್ಲಿ ಅವರು ನೋಹನನು, ಅವನ ಹೆಂಡತಿ, ಅವನ ಮೂರು ಮಕ್ಕಳು ಮತ್ತು ಅವರ ಹೆಂಡತಿಯರು (ಆದಿಕಾಂಡ 8:18). ಅಪೊಸ್ತಲನು “ಎಂಟು” ಎಂಬ ಸಂಖ್ಯೆಯನ್ನು ಉಪಯೋಗಿಸುವಾಗ ಅದರ ಸಾಂಕೇತಿಕ ಪ್ರಾಮುಖ್ಯತೆಯಿಂದಾಗಿ ಎಚ್ಚರವಹಿಸಿದ್ದನು ಎಂದು ಅವರು ಹೇಳುತ್ತಾರೆ. ಆದಿ ಕ್ರೈಸ್ತರ ಬರಲಿಕ್ಕಿರುವ ಕಾಲವು ಎಂಟನೇ ದಿನವಾಗಿ ಬರುತ್ತದೆ ಎಂದು ನಂಬುತ್ತಿದ್ದರು, ಆದಿಕಾಂಡ 1; 2ರಲ್ಲಿರುವ ದಿನಗಳಿಗೆ ಒಂದು ದಿನವನ್ನು ಸೇರಿಸುತ್ತಾರೆ, ಮುಂದೆ ಅವರು ಭಾನುವಾರವನ್ನು “ಎರಡನೆಯ ದಿವೆಂದು” ಮಾತನಾಡುತ್ತಾರೆ. ವಾರದ ಉಳಿದ ದಿನಗಳಿಂದ ಪ್ರತ್ಯೇಕಿಸಲ್ಪಟ್ಟ ದಿವಸ.[5]

ಉಳಿದ ಮಾನವ ಕುಲಕ್ಕೆ ದೇವರು ಭಕ್ತಿಹೀನರ ಪ್ರಳಯವನ್ನು ಬರಮಾಡಿದ್ದಾನೆ. ಭಕ್ತಿಹೀನರಾಗಿದ್ದ ಲೋಕದ ಮೇಲೆ ದೇವರು ಜಲಪ್ರಳಯವನ್ನು ಬರಮಾಡಿದನು. ಜಲಪ್ರಳಯವನ್ನು ಬರಮಾಡಿದ್ದಾಗ ತಾನು ನೀತಿವಂತಿಕೆಯನ್ನು ಕೇಳುವವನಾಗಿದ್ದೇನೆ ಎಂಬುದನ್ನು ತೋರಿಸಿಕೊಟ್ಟನು. ಅಂದು ನ್ಯಾಯತೀರಿಸಿದ ಅದೇ ದೇವರು ಮತ್ತೇ ನ್ಯಾಯತೀರ್ಪನ್ನು ನೀಡುವದಕ್ಕಾಗಿ ಬರಲಿಕ್ಕಿದ್ದಾನೆ. ಪೇತ್ರನು ತನ್ನ ಓದುಗರು ದೇವರು ಎಂಟು ಜನರನ್ನು ರಕ್ಷಿಸಿದ್ದನ್ನು ಗಮನಿಸುವದರಲ್ಲಿ ವಿಫಲರಾಗಬಾರದೆಂದು ಕೇಳಿಕೊಳ್ಳುತ್ತಿದ್ದಾನೆ ಪಾಪ ಮಾಡಿದ ದೇವದೂತರು, ಒಬ್ಬರೂ ಉಳಿಯಲಿಲ್ಲ. ಜಲಪ್ರಳಯವು ಬಂದಾಗ ದೇವರು ಭಕ್ತಿವಂತರನ್ನು ರಕ್ಷಿಸಿದನು. ಕೊನೆಯ ನ್ಯಾಯತೀರ್ಪುಬರುವಾಗ, ದೇವರು ನೀತಿವಂತರನ್ನು ಮರಣದಿಂದ ತಪ್ಪಿಸಿ ಎಳೆದುಕೊಳ್ಳುತ್ತಾನೆ ನೋಹನನ್ನು ತಪ್ಪಿಸಿದಂತೆ. ನೋಹನನಂತೆ, ಪೇತ್ರನ ಓದುಗರು ಸಹ ನೀತಿವಂತಿಕೆಯನ್ನು ಉಪದೇಶಿಸುವವರಾಗಬೇಕೆಂದು ದೇವರು ಬಯಸುತ್ತಾನೆ. ದೇವರನ್ನು ವಿರೋಧಿಸುವ ಜನರ ನಾಶನವು ಪಾಪಮಾಡಿದ ದೇವದೂತರ ನಾಶನದೊಂದಿಗೆ ಸಂಬಂಧವನ್ನು ಹೊಂದಿದೆ. ಎಂಟು ಜನರು ರಕ್ಷಿಸಲ್ಪಟ್ಟದ್ದು ಏನೂ ಹೊಸ ಕೊಡುಗೆಯನ್ನು ನೀಡುತ್ತದೆ.

**ವಚನ 6.** ಅವನು ಈ ಹಿಂದೆ ಮಾಡಿದಂತೆ, ಪೇತ್ರನು ದೇವರ ಮೂರನೇ ಉದಾಹರಣೆಗೆ ಆದಿಕಾಂಡಕ್ಕೆ ಹೋಗುತ್ತಾನೆ. ದೇವರು ಪಾಪಮಾಡಿದ ದೇವದೂತರಿಗೆ ಮತ್ತು ದೇವವಿರೋಧಿ ಲೋಕಕ್ಕೆ ನ್ಯಾಯತೀರ್ಪನ್ನು ನೀಡಿದಂತೆ. ಅವನು ಸೊದೋಮ ಗೊಮೋರ ಪಟ್ಟಣಗಳಿಗೆ ನಾಶನದ ತೀರ್ಪನ್ನು ನೀಡಿದನು. ಸೊದೋಮ ಮತ್ತು ಗೊಮೋರ ಸತ್ಯವೇದದಲ್ಲಿ ಗಣನೀಯವಾದ ಗಮನವನ್ನು ಸೆಳೆಯುತ್ತವೆ. ಆದಿಕಾಂಡ 19ರಲ್ಲಿ ಅವುಗಳ ನಾಶನದ ದಾಖಲೆಯ ನಂತರ ಮೋಶೆ ಮತ್ತು ಆತನ ಶಿಷ್ಯರು ಮೇಲಿಂದ ಮೇಲೆ ಈ ಪಟ್ಟಣಗಳು ದೇವರನ್ನು ಬಿಟ್ಟು ಜೀವಿಸುವವರಿಗೆ ದೇವರ ದಂಡನೆಯ ಉದಾಹರಣೆಯನ್ನು ಇಸ್ರಾಯೇಲರಿಗೆ ನೀಡಿದನು (ಧರ್ಮೋಪದೇಶಕಾಂಡ 29:23; 32:32; ಯೆಶಾಯ 1:9, 10; 3:9; 13:19; ಯೆರೆಮೀಯ 23:14; 49:18; ಪ್ರಲಾಪಗಳು 4:6; ಯೆಹೆಜ್ಕೇಲ 16:46-56; ಆಮೋಸ 4:11; ಚೆಫನ್ಯ 2:9). ಮತ್ತಾಯ ಮತ್ತು ಲೂಕನ ಸುವಾರ್ತೆಯಲ್ಲಿ, ಸೊದೋಮಿನ ಕುರಿತು ಐದು ಉಲ್ಲೇಖಗಳಿವೆ; ಮತ್ತು ಪೌಲನು ಒಂದು ಸಾರಿ ಈ ಪಟ್ಟಣವನ್ನು ಉಲ್ಲೇಖಿಸುತ್ತಾನೆ (ರೋಮಾಪುರ 9:29).

ಪೇತ್ರ ಮತ್ತು ಯೂದ ಇಬ್ಬರೂ ದೇವರ ನ್ಯಾಯತೀರ್ಪಿನ ಖಚಿತತೆಯನ್ನು ತಿಳಿಸಲು ಪಟ್ಟಣಗಳ ಹೆಸರುಗಳನ್ನು ಉಲ್ಲೇಖಿಸಿದ್ದಾರೆ. ಬರಹಗಳು ಹೊಸ ಒಡಂಬಡಿಕೆಯ ಸಮಕಾಲಿನ ಅವಧಿಯಲ್ಲಿ ಜೀವಿಸಿರಬಹುದು ಸೊದೋಮ ಗೊಮೋಲಿನ ಉದಾಹರಣೆಯನ್ನು ದುಷ್ಟರಿಗೆ ದೇವರಿಗೆ ದೊರೆಯುವ ನ್ಯಾಯತೀರ್ಪಿನ್ನು ತಿಳಿಸಲು ಮೇಲಿಂದ ಮೇಲೆ ಯೆಹೂದ್ಯ ಮತ್ತು ಕ್ರೈಸ್ತ ಸಂಪನ್ಮೂಲಗಳು ಉಪಯೋಗಿಸುತ್ತವೆ. ಯೋಸೆಫಸ್‌ನು ಲೋಟನ ಹೆಂಡತಿ

ಉಪ್ಪಿನ ಕಂಭವಾಗಿ ಪರಿವರ್ತನೆ ಹೊಂದಿದ ಕಂಬವನ್ನು ನೋಡಿದ್ದಾನೆಂದು ಹೇಳುತ್ತಾನೆ.[6] ಪೇತ್ರನು ಈ ಪಟ್ಟಣದ ದುಷ್ಟತನವನ್ನು ಸಾಮಾನ್ಯ ರೀತಿಯಲ್ಲಿ ಸೂಚಿಸುತ್ತಾನೆ. ಆದರೆ ಯೂದನು ಸಲಿಂಗರತಿ ಅವರ ಪಾಪವಾಗಿತ್ತು ಎಂದು ನಿರ್ದಿಷ್ಟವಾಗಿ ತಿಳಿಸುತ್ತಾನೆ (ಯೂದ ವಚನ 7ರಲ್ಲಿರುವ ವಿಮರ್ಶೆಯನ್ನು ನೋಡಿರಿ). ಪಟ್ಟಣವು "ಸೊದೋಮ್ಯರು" ಎಂಬ ತನ್ನ ಪ್ರಭಾವವನ್ನು ಇಂಗ್ಲಿಷ್ ಭಾಷೆಯ ಮೇಲೆ ಬಿಟ್ಟುಹೋಗಿದೆ.

ಪಟ್ಟಣದ ಮೇಲೆ ದೇವರು ತಂದು ನ್ಯಾಯತೀರ್ಪಿನ ವಿಷಯದಲ್ಲಿ ಪೇತ್ರನು ನಿರ್ದಿಷ್ಟವಾಗಿದ್ದಾನೆ. ಅವನು ಅವರನ್ನು ಬೂದಿಗೆ ಸಮಾನರನ್ನಾಗಿ ಮಾಡುವ ಮಟ್ಟಿಗೆ ನಾಶಮಾಡಿದ್ದಾನೆ. ಸಂಪ್ರದಾಯಿಕವಾಗಿ, ಸತ್ತ ಸಮುದ್ರದ ಕ್ಷೇತ್ರದಲ್ಲಿ ಸೊದೋಮ ಮತ್ತು ಗೊಮೋರ ನಲ್ಲಿ ಯೆಹೂದ್ಯರು ವಾಸಿಸಿದ್ದರು. ಸತ್ತ ಸಮುದ್ರದ ಸುತ್ತಲೂ ಇರುವ ಭೂಮಿಯನ್ನು "ಬೂದಿಯ ದೇಶ" ಎಂದು ವರ್ಣಿಸಿದ್ದಾನೆ. ಆತನು "ಬೂದಿ" ಎಂಬ ಪದವನ್ನು ಪೇತ್ರನು ಉಪಯೋಗಿಸಿದ ಕ್ರಿಯಾಪದಂತೆ *(tephroō)* ಉಪಯೋಗಿಸಿದ್ದಾನೆ.[7] ಲೂಕ 17:26-30ರಲ್ಲಿ ಯೇಸುವಿನಂತೆ ನೀರಿನ ಮೂಲಕ ದೇವರ ನ್ಯಾಯತೀರ್ಪಿನ ಉದಾಹರಣೆಯನ್ನು ನೀಡಲು ನೋಹನ ಲೋಕವನ್ನು ಮತ್ತು ಬೆಂಕಿಯ ಮೂಲಕ ದೇವರ ನ್ಯಾಯತೀರ್ಪಿನ ಉದಾಹರಣೆಯನ್ನು ನೀಡಲು ಸೋದೋಮ ಮತ್ತು ಗೋಮೋರ ಪಟ್ಟಣಗಳನ್ನು ಉಪಯೋಗಿಸಿದ್ದಾನೆ.

ಸೊದೋಮ್ ಮತ್ತು ಗೊಮೋರಗಳಿಗೆ ಏನಾಯಿತು ಭಕ್ತಿಹೀನ ಜೀವಿತವನ್ನು ಜೀವಿಸುವವರಿಗೆ ಉದಾಹರಣೆಯಾಗಿವೆ. "ಉದಾಹರಣೆ" *(hupodeigma)* ಎಂದು ಅನುವಾದಿಸಿದ ಪದ ಒಬ್ಬನು ಅನುಕರಿಸಲು ಸಕಾರಾತ್ಮಕವಾದ ಉದಾಹರಣೆಯಾಗಿದೆ ಅಥವಾ ದೂರವಿರಸಬಹುದಾದ ನಕಾರಾತ್ಮಕ ಉದಾಹರಣೆಯಾಗಿದೆ. ಇದು ಯಾವುದಕ್ಕಾಗಿ ಎಂಬುದನ್ನು ಸನ್ನಿವೇಶವು ನಿರ್ಧರಿಸುತ್ತದೆ. ಯೇಸುವು ಕ್ರೈಸ್ತರಿಗೆ "ಮಾದರಿಯಾಗಿ" ಇರಬೇಕು ಎಂದು ಹೇಳಿದಾಗ (1 ಪೇತ್ರ 2:21) ಲೇಖಕನು ನಿರಂತರವಾಗಿ ಸಕಾರಾತ್ಮಕವಾಗಿ ಉಪಯೋಗಿಸುವ ಉದಾಹರಣೆಯ ಇನ್ನೊಂದು ಬೇರೆ ಗ್ರೀಕ್ ಪದವನ್ನು ಉಪಯೋಗಿಸುತ್ತಾನೆ. ಪೇತ್ರನು "ಭಕ್ತಿಹೀನ ಜೀವಿತವನ್ನು ಜೀವಿಸುವರು" ಎಂದು ಹೇಳುವಾಗ ಪೇತ್ರನು ಸುಳ್ಳುಬೋಧಕರನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದಾನೆ. ಇದು ಸೋದೋಮ ಮತ್ತು ಗೋಮೋರ ಪಟ್ಟಣದ ಮೇಲೆ ದೇವರು ನೀಡಿದ ನ್ಯಾಯತೀರ್ಪಿಗೆ ಗಮನ ನೀಡಲು ಉತ್ತಮವಾಗಿದೆ.

**ವಚನ 7.** ಪೇತ್ರನ ವಿಷಯ ನೋಹನು ವಾಸಿಸಿದ್ದ ಲೋಕವಾಗಿದ್ದಲ್ಲಿ, ಅವನು ವಿನಾಶಕರವಾದ ನ್ಯಾಯತೀರ್ಪಿನ ಜ್ಞಾಪನವನ್ನು ದೇವರು ನೀತಿವಂತರನ್ನು ರಕ್ಷಿಸುತ್ತಾನೆ ಎಂದು ಹೇಳುವದರ ಮೂಲಕ ಮೃದುವಾಗಿಸಿದ್ದಾನೆ. ಅದರಂತೆ, ಸೋದೋಮ ಗೋಮೋರಿನ ಮೇಲೆ ಬೆಂಕಿಯ ಮಳೆಯನ್ನು ಸುರಿಸುವಾಗ ಆತನು ನೀತಿವಂತನಾದ ಲೋಟವನ್ನು ಸಂರಕ್ಷಿಸಿದನು. ಇಲ್ಲಿ ವಿಚಾರವೆಂದರೆ ದೇವರು ಹಿಂದೆ ನಂಬಿಗಸ್ತರನ್ನು ಬಿಡುಗಡೆಗೊಳಿಸಿದನು, ಅವನು ಸುಳ್ಳು ಬೋಧಕರಿಗೆ ನ್ಯಾಯತೀರ್ಪನ್ನು ನೀಡುವಾಗ ನೀತಿವಂತರನ್ನು ರಕ್ಷಿಸುತ್ತಾನೆ. ಆದಾಗ್ಯೂ, ಲೋಟನ ಕುರಿತಾದ ಚರ್ಚೆಯಲ್ಲಿ ಸಿಕ್ಕಿಕೊಂಡನು ಮತ್ತು ತನ್ನ ವಿಚಾರವನ್ನು ಪೂರ್ತಿಗೊಳಿಸದೇ ಇಲ್ಲ.

ವಚನವು ದೀರ್ಘವಾದ ಜಟಿಲ ವಾಕ್ಯದ ಭಾಗವಾಗಿದೆ ಅದು "ಒಂದು ವೇಳೆ ದೇವರು ಉಳಿಸದಿದ್ದರೆ ..." 2:4ರಿಂದ ಪ್ರಾರಂಭವಾಗುತ್ತದೆ. ವಚನ 7ರಲ್ಲಿ, ಅನುವಾದಕನು ಇಂಗೀಷ್ ವಾಕ್ಯದ ಪದವನ್ನು ಒದಗಿಸಿದ್ದಾನೆ ಎಂದು ಓದುಗರ ಗಮನವನ್ನು ಸೆಳೆಯಲು ಪುನರಾವರ್ತಿಸುತ್ತದೆ. "ಒಂದು ವೇಳೆ" ಎಂಬ ಪದವು "ಆಗ" ಎಂಬ ಪದಕ್ಕೆ ನಡೆಸುತ್ತದೆ 2:9ರಲ್ಲಿ ಶರತ್ತು ಬದ್ಧ ವಾಕ್ಯವು ಸಂಪೂರ್ಣವಾಗುತ್ತದೆ. "ಒಂದುವೇಳೆ" ಎಂಬ 2:4ರಲ್ಲಿರುವ ವಾಕ್ಯವನ್ನು ಒಬ್ಬನ್ನು ನಿರೀಕ್ಷಿಸುತ್ತಿದ್ದಲ್ಲಿ ಪರಿಣಾಮವಾಗಿ "ಆಗ ಎಂಬ ಪದವು ದೇವರು ಸುಳ್ಳು ಬೋಧಕರನ್ನು ಉಳಿಸುವದಿಲ್ಲ" ಎಂದಾಗುತ್ತದೆ (2:1-3ರಲ್ಲಿ ಉಲ್ಲೇಖಿಸಿದ ಅದೇ

ಬೋಧಕರು), ಆದರೆ ಪೇತ್ರನು ವಿಚಾರವನ್ನು ಪೂರ್ತಿಗೊಳಿಸಲೇ ಇಲ್ಲ. ಬದಲಾಗಿ, ಲೋಟನ ಕುರಿತಾದ ಆತನ ಉಲ್ಲೇಖ ಅವನು ಮುಖ್ಯ ಮಾರ್ಗವನ್ನು ಬಿಟ್ಟು ಹೊಸ ಮಾರ್ಗದಲ್ಲಿ ನಡೆಸುವತ್ತ ತಿರುಗಿಸುತ್ತದೆ.

ಪೇತ್ರನು ಲೋಟನನ್ನು "ನೀತಿವಂತನು" ಎಂದು ಕರೆಯುವದು ಆಶ್ಚರ್ಯಕರವಾಗಿದೆ ಅವನು ವಿಷಯಲಂಪಟತನದ ವರ್ತನೆಯಿಂದ ನೀತಿನಿಯಮಗಳಿಲ್ಲದ ಮನುಷ್ಯರ ದಬ್ಬಾಳಿಕೆಗೆ ಒಳಗಾಗಿದ್ದನು. ಲೋಟನ ಕಥೆಯನ್ನು ಆದಿಕಾಂಡ 13:1-13ರಲ್ಲಿ ಓದುವಾಗ "ನೀತಿವಂತಿಕೆ" ನಮ್ಮ ಮನಸ್ಸಿನಲ್ಲಿ ಬರುವ ಕ್ರಿಯಾವಿಶೇಷಣವಲ್ಲ. ಅವನ ಚಿಕ್ಕಪ್ಪನಾದ ಅಬ್ರಹಾಮನು ಅವನು ತನ್ನ ಹಿಂಡನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕು ಎಂಬ ಪ್ರಶ್ನೆ ಬಂದಾಗ ಆಯ್ಕೆಯನ್ನು ಅವನಿಗೆ ಬಿಟ್ಟಿದ್ದನು. ಲೋಟನು ಫಲವತ್ತಾದ ಯೋರ್ದನ ಹೊಳೆಯ ದಂಡೆಯನ್ನು ಆರಿಸಿಕೊಂಡನು, ಪಟ್ಟಣದಲ್ಲಿರುವವರು ದುಷ್ಟರಾಗಿದ್ದಾಗ್ಯೂ ಅವನು ತನ್ನ "ಗುಡಾರವನ್ನು ದೂರದಲ್ಲಿರುವ ಸೊದೋಮಿಗೆ ತೆಗೆದುಕೊಂಡು ಹೋದನು" (ಆದಿಕಾಂಡ 13:12).

ಬಹುಶಃ ಪೇತ್ರನು ಲೋಟನನ್ನು "ನೀತಿವಂತನು" ಎಂದು ಕರೆಯುವದಕ್ಕೆ ಲೋಟನು ದೇವದೂತರಿಗೆ ತೋರಿಸಿದ ಆದರಾತಿಥ್ಯ ಕಾರಣವಾಗಿರಬಹುದು (ಆದಿಕಾಂಡ 19:1-3). ಮುಂದೆ ದೇವರು ಬರಲಿಕ್ಕಿರುವ ನ್ಯಾಯತೀರ್ಪಿನಿಂದಾಗಿ ಅಬ್ರಹಾಮನ ಸಹೋದರನ ಮಗನೂ ಆ ಪಟ್ಟಣದಲ್ಲಿ ಸಂಪೂರ್ಣವಾಗಿ ಭ್ರಷ್ಟನಲ್ಲವಾದದ್ದರಿಂದ ಲೋಟನಿಗೆ ಪಟ್ಟಣವನ್ನು ಬಿಟ್ಟುಹೋಗಲು ಆಜ್ಞೆ ನೀಡಿದನು. ಕೊನೆಯಲ್ಲಿ, ನಾವು ಪೇತ್ರನ ವಾಕ್ಯಗಳನ್ನು ನಂಬಬೇಕು. ಪೇತ್ರನು ಲೋಟನ ಕುರಿತಾಗಿ ಆದಿಕಾಂಡ ಪುಸ್ತಕ ಓದಿದಾಗಲೂ ನಮಗೆ ತಿಳಿಯದೇ ಇರುವ ಕೆಲವು ವಿಷಯಗಳನ್ನು ಹೇಳಿದ್ದಾನೆ. ಆದಿಕಾಂಡದಲ್ಲಿ ಲೋಟನು ತನ್ನ ನೆರೆಹೊರೆಯವರ ನಡತೆಯಿಂದಾಗಿ ದಬ್ಬಾಳಿಕೆಗೆ ಒಳಗಾಗಿದ್ದನು ಎಂಬುದಕ್ಕೆ ಯಾವ ಸೂಚನೆಯೂ ಇಲ್ಲ. ಆದಾಗ್ಯೂ, ಆತನ ಭಕ್ತಿವಂತ ಜೀವಿತ ದೇಶದ ಮೇಲೆ ನಾಶನವು ಬಂದಾಗ ದೇವರು ಅವನನ್ನು ಏಕೆ ರಕ್ಷಿಸಿದನು ಎಂಬುದಕ್ಕೆ ಉತ್ತಮವಾದ ವಿವರಣೆಯಾಗಿದೆ.

**ವಚನ 8.** ಪೇತ್ರನು ಲೋಟನ ನೀತಿವಂತಿಕೆಯನ್ನು ವಿವರವಾಗಿ ಹೇಳಿದ ಹಾಗೆ ಬಹುಶಃ ಆತನನ್ನು ಯಾವಾಗಲೂ ಮೆಚ್ಚಿಕೆಯನ್ನು ಸೂಚಿಸುವ ಬೆಳಕಿನಂತೆ ಆದಿಕಾಂಡ ಪುಸ್ತಕದಲ್ಲಿ ಮಂಡಿಸಿಲ್ಲ. ಲೋಟನ ನೀತಿವಂತ ಆತ್ಮ ಅವನು ನೋಡಿದ ಮತ್ತು ಆಲಿಸಿದ ಸಂಗತಿಗಳಿಂದಾಗಿ ವೇದನೆಗೆ ಒಳಗಾಗಿತ್ತು. ಸೋದೋಮ ಜನರ ಭಕ್ತಿಹೀನ ಜೀವಿತವನ್ನು ತಟಸ್ಥನಾಗಿ ನೋಡುವದಕ್ಕೆ ಬದಲಾಗಿ ಅವನು ಬೇಸರಗೊಂಡನು. ತನ್ನ ಸುತ್ತಮುತ್ತ ಯಾವಾಗ ಭಯಂಕರ ಸಂಗತಿಗಳು ಸಂಭವಿಸಿವೆ ಎಂಬ ಸುದ್ದಿಯನ್ನು ನಾನು ಕೇಳುತ್ತೇನೋ ಏನೋ ಎಂಬ ಬಾರದಲ್ಲಿ ಅವನು ಜೀವಿಸುತ್ತಿದ್ದನು.

ಅದೇರೀತಿಯಲ್ಲಿ, ಪೇತ್ರನ ಓದುಗರು ಕ್ರೂರತನ, ವಿಷಯಲಂಪಟತನ ಮತ್ತು ವಿಗ್ರಹಾರಾಧನೆ ಸಾಮಾನ್ಯವಾಗಿರುವ ಈ ಲೋಕದಲ್ಲಿ ಜೀವಿಸಬೇಕಾಗಿದೆ. ಅಪೊಸ್ತಲನು ಸೂಚಿಸಿದ ಸಂದೇಶ ಎರಡು ವಿಧದಲ್ಲಿದೆ: (1) ದೇವರು ಭಕ್ತಿಹೀನರಿಗೆ ತೀರ್ಪನ್ನು ನೀಡುವಾಗ, ಅವನು ನಂಬಿಗಸ್ತರನ್ನು ಬಿಡುಗಡೆಮಾಡುತ್ತಾನೆ. (2) ಕ್ರೈಸ್ತರು ಲೌಕಿಕ ಪಾಪಗಳೊಂದಿಗೆ ಸಂಧಾನ ಮಾಡಿಕೊಳ್ಳಬಾರದು ಅಥವಾ ಅವರು ಸಹ ಭಕ್ತಿಹೀನರಿಗೆ ಕಾಯ್ದಿರಿಸಲಾದ ನ್ಯಾಯತೀರ್ಪಿನಲ್ಲಿ ಅವರು ಸಹ ಭಾಗಿಗಳಾಗುತ್ತಾರೆ. ಲೋಟನ ಉದಾಹರಣೆಯಿಂದ ಕಲಿಯುತ್ತಾ, ಕ್ರೈಸ್ತರು ಪಾಪವನ್ನು ಹಗುರವಾಗಿ ಪರಿಗಣಿಸಬಾರದು. ಲೋಟನು ಸೊದೋಮನ್ನು ಬಿಟ್ಟುಬಂದದ್ದರಿಂದ ಮರಣದಿಂದ ತಪ್ಪಿಸಿಕೊಂಡನು ಆದರೆ ದೇವರಿಲ್ಲವೆಂದು ನಂಬಿರುವ ಜನರ ಮಧ್ಯದಲ್ಲಿ ವಾಸಿಸುವದರ ಪರಿಣಾಮದಿಂದ ಅವನಿಗೆ ರಕ್ಷಣೆ ದೊರೆಯಲಿಲ್ಲ. ಅವನು ತನ್ನ ಹೆಂಡತಿಯನ್ನು ತನ್ನ ಎಲ್ಲಾ ಸೊತ್ತನ್ನು ಕಳೆದುಕೊಂಡನು. ದೇವರು ಪಾಪಿಯನ್ನು ಕೊನೆಯ ನಾಶನದಿಂದ ರಕ್ಷಿಸಿದಾಗಲೂ

ಪಾಪದೊಂದಿಗೆ ಒಡನಾಟವನ್ನು ಮಾಡುವದರ ಪರಿಣಾಮ ಇದ್ದೇ ಇರುತ್ತದೆ.

**ವಚನ 9.** ಕೊನೆಗೆ, 2:4ರಲ್ಲಿ ಪ್ರಾರಂಭವಾದ ಉದ್ದವಾದ ವಾಕ್ಯದ ಕೊನೆಗೆ ನಾವು ಬಂದಿದ್ದೇವೆ, ಕೊನೆಯು ನಾವು ನಿರೀಕ್ಷಿಸಿದಂತೆ ಇರದಿದ್ದರೂ ಸಹ. ವಾಕ್ಯವು ನ್ಯಾಯತೀರ್ಪಿನೊಂದಿಗೆ ಪ್ರಾರಂಭವಾಗುತ್ತದೆ; ಮತ್ತು ಭಕ್ತಿವಂತರನ್ನು ರಕ್ಷಿಸುವದು ಮತ್ತು ದುಷ್ಟರಿಗೆ ನ್ಯಾಯತೀರ್ಪನ್ನು ನೀಡುವದರೊಂದಿಗೆ ಮುಕ್ತಾಯವಾಗುತ್ತದೆ. ತನ್ನ ಓದುಗರಿಗೆ ದೇವರು ಸಭೆಗಳಿಗೆ ತೊಂದರೆಯನ್ನು ನೀಡುತ್ತಿರುವ ಸುಳ್ಳು ಬೋಧಕರ ಕಾರ್ಯಗಳನ್ನು ಅಲಕ್ಷಿಸುವದಿಲ್ಲ ಎಂಬ ಭರವಸೆಯನ್ನು ನೀಡಲು, ಪೇತ್ರನು ದೇವರು ದುಷ್ಟರಿಗೆ ನ್ಯಾಯ ತೀರ್ಪನ್ನು ನೀಡಿದ ಸತ್ಯವೇದದಲ್ಲಿರುವ ಮೂರು ಉದಾಹರಣೆಗಳನ್ನು ನೆನಪಿಸಿಕೊಳ್ಳುತ್ತಾನೆ. (1) ಪಾಪ ಮಾಡಿದ ದೇವದೂತರು (2) ನೋಹನ ದಿವಸದಲ್ಲಿದ್ದ ದೇವವಿರೋಧಿ ಲೋಕ ಮತ್ತು (3) ಸೋದೋಮ ಮತ್ತು ಗೋಮೋರ ಪಟ್ಟಣಗಳು, ಕೊನೆಯ ಎರಡು ಉದಾಹರಣೆಗಳಲ್ಲಿ, ಆತನು ದೇವರ ವಿಮೋಚನೆಯ ಕಾರ್ಯವನ್ನು ಸಹ ಸೂಚಿಸಿದ್ದಾನೆ: ದೇವರಿಗೆ ಭಕ್ತಿವಂತ ಮನುಷ್ಯನನ್ನು ಶೋಧನೆಯಿಂದ ಹೇಗೆ ವಿಮೋಚಿಸಬೇಕು ಎಂಬುದು ತಿಳಿದರೆ. "ಶೋಧನೆ" ಇದು ಪರೀಕ್ಷಿಸುವದನ್ನು ಸೂಚಿಸುತ್ತದೆ. ನೋಹನ್ನು ಸಹ ಶೋಧನೆಗಳನ್ನು ಎದುರಿಸಿದನು ಅವನು ನಿರಂತರವಾಗಿ ಪಾಪದ ಮೇಲೆ ಕೇಂದ್ರಿಕೃತರಾಗಿರುವ ಜನರ ಮಧ್ಯದಲ್ಲಿದ್ದನು. ಲೋಟನು ಶೋಧನೆಯನ್ನು ಎದುರಿಸಿದನು ಅವನ ಹೃದಯವು ತನ್ನ ನೆರೆಹೊರೆಯವರು ಮಾಡುತ್ತಿರುವ ಕಾನೂನುಬಾಹಿರವಾದ ಸಂಗತಿಗಳಿಂದ ಹಿಂಸೆಗೆ ಒಳಗಾಗುತ್ತಿತ್ತು. ಪ್ರತಿಯೊಂದು ಸಂಗತಿಯಲ್ಲಿ, ನಾಶನವು ಬಂದಾಗ ದೇವರು ನೀತಿವಂತರನ್ನು ರಕ್ಷಿಸಿದ್ದಾನೆ.

ಪ್ರತಿಯೊಬ್ಬರು, ಮನಸ್ಥೈರ್ಯವನ್ನು ಮತ್ತು ಶೋಧನೆಯನ್ನು ಪರಿಹರಿಸುವ ಬಲವನ್ನು ಹೊಂದಿರುವದಿಲ್ಲ. ಯೇಸು ತನ್ನ ಶಿಷ್ಯರಂತೆ, "ನಮ್ಮನ್ನು ಶೋಧನೆಯಲ್ಲಿ ಸೇರಿಸದೇ ಕೇಡಿನಿಂದ ನಮ್ಮನ್ನು ತಪ್ಪಿಸು" (ಮತ್ತಾಯ 6:13) ಎಂದು ಪ್ರಾರ್ಥಿಸಲು ಕಲಿಸಿದನು. ಸುಳ್ಳು ಬೋಧಕರು ಪೇತ್ರನ ಕೆಲವು ಓದುಗರನ್ನು ಪ್ರೇರೆಪಿಸುತ್ತಾರೆ. ಅವರಲ್ಲಿ ಕೆಲವರು ಯೇಸುವಿನಲ್ಲಿರುವ ತಮ್ಮ ನಂಬಿಕೆಯನ್ನು ಬಿಟ್ಟು ಹಿಂದಕ್ಕೆ ಹೋಗಿದ್ದಾಕೆ. ಕರ್ತನನ್ನು ಆತುಕೊಂಡವರು, ಅಪೊಸ್ತಲನಾದ ಪೇತ್ರನ ಸಾಕ್ಷಿಯನ್ನು ಆಲಿಸಿದವರು, ಶೋಧನೆ ಯನ್ನು ಜಯಿಸಿದವರು, ಅವರಿಗೆ ವಿಮೋಚನೆ ದೊರೆಯಿತು. ದೇವರು ನೋಹನನ್ನು ಚಮತ್ಕಾರದಿಂದ ಅವನ ಭಕ್ತಿಹೀನ ಸಂಗತಿಗಳಿಂದ ದೂರ ತೆಗೆದುಕೊಂಡು ಹೋಗಿ ಬಿಡುಗಡೆ ನೀಡಲಿಲ್ಲ. ನೋಹನನ್ನು ನಂಬಿಕೆಯಿಂದ ನಾವೆಯನ್ನು ಕಟ್ಟಿದನು (ಇಬ್ರಿಯ 11:7). ವಿಮೋಚನೆ ಹೊಂದಿದವನಿಗೆ ವಿಮೋಚನೆಯು ಕ್ರಯವಿಲ್ಲದೆ ದೊರೆಯುವದಿಲ್ಲ. ದೇವರು ಲೋಟನನ್ನು ಪಾಪದಿಂದ ತುಂಬಿದ ಸೊದೋಮಿನಿಂದ ವಿಮೋಚಿದನು ಆದರೆ ಅದಕ್ಕೆ ಕ್ರಯವಾಗಿ ಲೋಟನು ತನ್ನ ಹೆಂಡತಿಯನ್ನು ಮತ್ತು ತನ್ನ ಎಲ್ಲಾ ಸಂಪತ್ತನ್ನು ಕಳೆದುಕೊಂಡನು. ಕೊನೆಯಲ್ಲಿ ಅವನಲ್ಲಿ ಏನೂ ಇರಲಿಲ್ಲ ದೇವರು ಲೋಟನನ್ನು ಬಿಡುಗಡೆಗೊಳಿಸಿದ್ದಿ ಕ್ರಯವಿಲ್ಲದೇ ಅಲ್ಲ. ದೇವರು ವಿಮೋಚನೆಯು ಸರಳವಾದದ್ದು ಎಂದು ವಾಗ್ದಾನ ಮಾಡುವದಿಲ್ಲ. ಅವನು ವಿಮೋಚಿಸಲ್ಪಟ್ಟವನ ಕ್ರಿಯಾಶೀಲ ಪ್ರಯತ್ನಗಳ ಮೂಲಕ ವಿಮೋಚಿಸುತ್ತಾನೆ. "ದೇವರು ನೀತಿವಂತರನ್ನು ಶೋಧನೆಯಿಂದ ರಕ್ಷಿಸಿದರೂ" ಪಾಪವು ತನ್ನ ಕ್ರಯವನ್ನು ತೆಗೆದುಕೊಳ್ಳುತ್ತದೆ.

ಮನುಷ್ಯರ ಸಂಗತಿಗಳೊಂದಿಗೆ ವ್ಯವಹರಿಸುವ ದೇವರ ನ್ಯಾಯನಿರ್ಣಯ ಯಾವಾಗಲು ತಕ್ಷಣದಲ್ಲಿ ಸಿಗುವಂಥದಲ್ಲ. ಪೇತ್ರನು ತನ್ನ ಓದುಗರಿಗೆ ನೀಡುವ ಭರವಸೆಯೆಂದರೆ ಅನೀತಿವಂತರು ಸಂಕಷ್ಟಕ್ಕೆ ಒಳಗಾಗಿದ್ದಾರೆ ಎಂಬುದು ದೇವರಿಗೆ ತಿಳಿದದೆ. ಅವನಿಗೆ ಸುಳ್ಳು ಬೋಧಕರ ಭಕ್ತಿಹೀನ ಮಾರ್ಗಗಳು ತಿಳಿದಿವೆ. ಹೇಗೆ ರಕ್ಷಿಸಬೇಕು ಎಂಬುದು ಆತನಿಗೆ ತಿಳಿದದೆ. ಅನೀತಿವಂತರನ್ನು ನ್ಯಾಯತೀರ್ಪಿನ ದಿನದಲ್ಲಿ ಹೇಗೆ ಶಿಕ್ಷೆಗೆ ಗುರಿಮಾಡಬೇಕು ಎಂಬುದು ಸಹ ತಿಳಿದದೆ. ಕ್ರೈಸ್ತ ನಂಬಿಕೆಗೆ ಆಧಾರವೆಂದರೆ, ರಕ್ಷಕನಾಗಿ ಬಂದ

ಕರ್ತನು, ಕ್ರೂಜೆಯ ಮೇಲೆ ಸತ್ತನು ಮತ್ತು ದೇವರ ಬಲಗಡೆಯಲ್ಲಿ ನಮ್ಮನ್ನು ಆಳುವದಕ್ಕೆ ಆಸೀನನಾಗಿದ್ದಾನೆ ಆತನು ತಿರುಗಿ ಬರುತ್ತಾನೆ. "ಕ್ರಿಸ್ತನು ಬಹುಜನರ ಪಾಪಗಳನ್ನು ಹೊತ್ತುಕೊಳ್ಳುವದಕ್ಕೋಸ್ಕರ ಒಂದೇ ಸಾರಿ ಸಮರ್ಪಿತನಾದನು" (ಇಬ್ರಿಯ 9:28). ಅವನು ಎರಡನೆಯ ಸಾರಿ ಬರುತ್ತಾನೆ (ಫಿಲಿಪ್ಪಿ 2:11). ಆ ಸಮಯದಲ್ಲಿ, ದೇವರು ಭಕ್ತಿಹೀನರಿಗೆ ನ್ಯಾಯ ತೀರಿಸುವನು ಕೊನೆಗೆ ದೇವರ ನ್ಯಾಯವು ಪ್ರಸರಿಸುವದು; ಆದರೆ ಆತನು ಬರುವವರೆಗೆ ಲೋಕದಲ್ಲಿ ಶೋಧನೆ ಇರುವದು. ಪೇತ್ರನ ಭರವಸೆ ಏನೆಂದರೆ, ಅವನು ತಿರುಗಿ ಬರುವ ಪೂರ್ವದಲ್ಲಿ ದೇವರು ಭಕ್ತಿವಂತರನ್ನು ವಿಮೋಚಿಸುತ್ತಾನೆ.

**ವಚನ 10.** ಹೊಸ ಒಡಂಬಡಿಕೆಯನ್ನು ಅಧ್ಯಾಯಗಳಾಗಿ ಮತ್ತು ವಚನಗಳಾಗಿ ವಿಂಗಡಿಸುವದನ್ನು ಪ್ರೇಂಚ್ ಪ್ರಕಾಶಕರಾದ ಸ್ತೇಫನಸ್ಸ್ ರವರು ಹದಿನಾರನೇ ಶತಮಾನದಲ್ಲಿ ಮಾಡಿದ್ದಾರೆ. ಅನೇಕ ಸಂದರ್ಭಗಳಲ್ಲಿ, ವಿಭಾಗಗಳು ತರ್ಕಬದ್ಧವಾಗಿದ್ದವು; ಅವು ಓದುಗರಿಗೆ ಉತ್ತಮವಾಗಿದೆ. ಕೆಲವೊಂದು ಸಂದರ್ಭದಲ್ಲಿ ಹಾಗೂ, ಅವನು ಕೆಲವು ವಚನಗಳನ್ನು ಮತ್ತು ಅಧ್ಯಾಯಗಳನ್ನು ಅಭಿಪ್ರಾಯಗಳ ಮಧ್ಯದಲ್ಲಿ ಗುರುತಿಸಿಲ್ಲ. 2 ಪೇತ್ರ 2:10 ಆಧ್ಯತೆಯನ್ನು ವಿಭಾಗಿಸಿದ ವಚನದ ಉದಾಹರಣೆಯಾಗಿದೆ. ನಾವು ವಚನದ ಮೊದಲನೆಯ ಭಾಗವನ್ನು ಇಲ್ಲಿ ಮತ್ತು ಉಳಿದ ಭಾಗವನ್ನು ಮುಂದಿನ ವಿಭಾಗದಲ್ಲಿ ಪೇತ್ರನು ದೇವರು, "ಅನೀತಿ ವಂತರಿಗೆ ಹೇಗೆ ಶಿಕ್ಷೆಯನ್ನು ನೀಡಬೇಕು" ಎಂಬುದನ್ನು ಬಲ್ಲಾತನಾಗಿದ್ದಾನೆ ಎಂಬುದನ್ನು ಈಗಾಗಳೆ ಸಾಮಾನ್ಯ ಪದಗಳಲ್ಲಿ ದೃಢಪಡಿಸಿದ್ದಾನೆ. ಈಗ ಆತನು ನಿರ್ಧಿಷ್ಟವಾಗಿ ಅಲ್ಲಿರುವ ಸುಳ್ಳುಬೋಧಕರ ಕಡೆಗೆ ತಿರುಗುತ್ತಿದ್ದಾನೆ. ಅವನು ಈ ಸುಳ್ಳು ಬೋಧಕರನ್ನು ಎರಡು ಆಧಾರದ ಮೇಲೆ ಸೂಚಿಸುತ್ತಾನೆ. (1) ಅವರು ದೇಹದ ಭ್ರಷ್ಟ ಆಶೆಗಳಲ್ಲಿ ತಮ್ಮನ್ನು ತೊಡಗಿಸುತ್ತಾನೆ, ಮತ್ತು (2) ಅವರು ಅಧಿಕಾರವನ್ನು ಕಡೆಗಣಿಸುತ್ತಾರೆ. ಅಪೊಸ್ತಲರು ಮೊದಲನೆಯ ವಾಕ್ಯಭಾಗಕ್ಕೆ ಬಲವಾದ ಪದಗಳನ್ನು ಉಪಯೋಗಿಸುತ್ತಾರೆ, ವಾಸ್ತವಿಕವಾಗಿ ಅನುವಾದಿಸುವಾಗ ಹೀಗಿದೆ. "ವಿಶೇಷವಾಗಿ ದೇಹದ ಆಶೆಯಿಂದ ಮಲೀನರಾಗಲು ಹೋಗುವವರು." ಸೊದೋಮ ಪೇತ್ರನ ವಿಷಯವಾಗಿದೆ. ಯೂದನಂತೆ ಪೇತ್ರನು ನೇರವಾಗಿ ಪಟ್ಟಣದಲ್ಲಿರುವ ಸಲಿಂಗರತಿಯನ್ನು ಉಲ್ಲೇಖಿಸುವದಿಲ್ಲ ಆದರೆ ಇಲ್ಲಿ ಉಪಯೋಗಿಸದ ಪದಗಳು ಸೊದೋಮರ ಎಲ್ಲಾ ಕಾರ್ಯಗಳನ್ನು ಗುರುತಿಸುತ್ತವೆ. ಈ ಪದಗಳು ಅಪೊಸ್ತಲರು ಸುಳ್ಳು ಬೋಧಕರ ಜೀವನ ಶೈಲಿಯ ಮೇಲೆ ಆಕ್ರಮಣ ಮಾಡುತ್ತವೆ.

ಸುಳ್ಳು ಬೋಧಕರು ಯಾವ "ಅಧಿಕಾರವನ್ನು" ಕಡೆಗಣಿಸಿದರು ಅದು ಒಟ್ಟಾರೆ ಸ್ಪಷ್ಟ ವಾಗಿಲ್ಲ. ಗ್ರೀಕ್ ಪದ ಕರ್ತನ ಅಧಿಕಾರವನ್ನು ಎಂದು ಸೂಚಿಸುತ್ತದೆ. ಬಹುಶಃ ದೇವರ ಅಧಿಕಾರವನ್ನು ಅಥವಾ ಆತನ ಪ್ರತಿನಿಧಿಗಳ, ದೇವದೂತರ. ಪೇತ್ರನು ಈಗಾಗಲೇ ಪಾಪಮಾಡಿದ ದೇವದೂತರ ಕುರಿತು (2:4) ರಲ್ಲಿ ಉಲ್ಲೇಖಿಸಿರುವಾಗ ಮತ್ತು ಆತನು ಕೆಳಗಿನ ವಚನದಲ್ಲಿ ತಿರುಗಿ ದೇವದೂತರಿಗೆ ಉಲ್ಲೇಖಿಸುತ್ತಾನೆ, ಸುಳ್ಳು ಬೋಧಕರು ದೇವದೂತರ ಅಥವಾ ದೇವದೂತರ ಅಧಿಕಾರದ ಮೇಲೆ ನಾಟಿಕೊಂಡಿದ್ದರು ಎಂಬುದಕ್ಕೆ ಯಾವ ಸೂಚನೆಯೂ ಇಲ್ಲ. ಮುಂದೆ ದೇವದೂತರ ಪ್ರಾಮುಖ್ಯತೆಯನ್ನು ಜ್ಞಾನ ಸಂಬಂಧವಾದ ವಿಚಾರದಲ್ಲಿ ತಿಳಿದುಕೊಂಡದ್ದರಿಂದ, ಊಹಿಸಿಕೊಳ್ಳುವವರು ಸುಳ್ಳು ಬೋಧಕರು ಜ್ಞಾನಸಂಬಂಧವಾದ ವರ್ತನೆಯ ಮೂಲಕ ದೇವದೂತರ ಆಧಾರವನ್ನು ತಿಳಿದುಕೊಳ್ಳಲು ಒಲವನ್ನು ತೋರಿಸುತ್ತಿದ್ದರು. ಪೇತ್ರನು ಸುಳ್ಳು ಬೋಧಕರು ತಮ್ಮ ಹಟಮಾರಿತನ ಮತ್ತು ಇಚ್ಛಾಪೂರಿತ ಮಾರ್ಗದಿಂದಾಗಿ (2:10, 18), ಅವರು ಸ್ವತಃ ಕ್ರಿಸ್ತನ ಅಧಿಕಾರವನ್ನು ಅಥವಾ ಕ್ರಿಸ್ತನು ತನ್ನ ಅಪೊಸ್ತಲರಿಗೆ ನಿಯೋಜಿಸಿದ ಅಧಿಕಾರವನ್ನು ಅಲ್ಲಗಳೆ ಯುತ್ತಿದ್ದರು ಎಂಬ ಅರ್ಥವನ್ನು ನೀಡುತ್ತದೆ. ಸುಳ್ಳು ಬೋಧಕರು ದೇವರು ಸಂದೇಶವಾಹಕರ ಮೂಲಕ ಕೊಡಲ್ಪಟ್ಟ ಆತ್ಮನಿಂದ ಪ್ರೇರಿತವಾದ ಬೋಧನೆಯನ್ನು ತೊರೆದುಬಿಟ್ಟಿದ್ದರು.

## ಸುಳ್ಳು ಬೋಧಕರ ಗುಣ ಲಕ್ಷಣಗಳು (2:10-16)

**[10]ಇವರು ಯಾರಿಗೂ ಹೆದರದೆ ಸ್ವೇಚ್ಛಪರರಾಗಿದ್ದು ಮಹಾಪದವಿಯವರನ್ನು ನಿರ್ಭಯವಾಗಿ ದೂಷಿಸುತ್ತಾರೆ. [11]ದೇವದೂತರು ಬಲದಲ್ಲಿಯೂ ಮಹತ್ತಿನಲ್ಲಿಯೂ ಶ್ರೇಷ್ಟ ರಾಗಿದ್ದರೂ ಕರ್ತನ ಮುಂದೆ ಮಹಾಪದವಿಯವರ ಮೇಲೆ ದೂಷಣಾಭಿಪ್ರಾಯವನ್ನು ಹೇಳುವದಿಲ್ಲವಲ್ಲಾ. [12]ಆದರೆ ಸ್ವಾಭಾವಿಕವಾಗಿ ಬೇಟೆಗೂ ಕೊಲೆಗೂ ಹುಟ್ಟಿರುವ ವಿವೇಕಶೂನ್ಯಪಶುಗಳಂತಿರುವ ಈ ದುರ್ಮಾಗಿಗಳು ತಮಗೆ ತಿಳಿಯದವುಗಳ ವಿಷಯವಾಗಿ ದೂಷಣೆಹೇಳುವವರಾಗಿದ್ದಾರೆ. ಇವರು ತಮ್ಮ ಕೆಟ್ಟತನದಿಂದ ತಾವೇ ಕೆಟ್ಟು ಹೋಗಿ ತಮ್ಮ ದುಷ್ಟವರ್ತನೆಗೆ ಸರಿಯಾದ ದುಷ್ಫಲವನ್ನು ಹೊಂದುವರು. [13]ದುಂದುಗಾರಿಕೆಯಲ್ಲಿ ಹಗಲನ್ನು ಕಳೆಯುವದೇ ಸುಖವೆಂದೆಣಿಸುತ್ತಾರೆ. ಇವರು ನಿಮ್ಮ ಸಂಗಡ ಸೇರಿ ಔತಣಮಾಡುತ್ತಿರುವಾಗ ವಂಚಕ ರಾಗಿದ್ದು ಉಂಡು ಕುಡಿದು ಕಳಂಕಕ್ಕೂ ಅವಮಾನಕ್ಕೂ ಕಾರಣರಾಗಿದ್ದಾರೆ. [14]ಇವರು ಜಾರತ್ವದಿಂದ ತುಂಬಿದ ಮತ್ತು ಪಾಪವನ್ನು ಬಿಡಲೊಲ್ಲದ ಕಣ್ಣುಳ್ಳವರೂ ಚಪಲ ಚಿತ್ತರನ್ನು ಮರುಳುಗೊಳಿಸುವವರೂ ಲೋಭದಲ್ಲಿ ತೇರ್ಗಡೆಹೊಂದಿದ ಮನಸ್ಸುಳ್ಳವರೂ ಶಾಪಕ್ಕೆ ಪಾತ್ರರೂ ಆಗಿದ್ದಾರೆ. [15]ಇವರು ನೀಟಾದ ಮಾರ್ಗವನ್ನು ಬಿಟ್ಟು ಬೆಯೋರನ ಮಗನಾದ ಬಿಳಾ ಮನ ಮಾರ್ಗವನ್ನು ಹಿಡಿದು ತಪ್ಪಿಹೋಗಿದ್ದಾರೆ. ಈ ಬಿಳಾಮನು ಅಧರ್ಮದಿಂದ ದೊರಕುವ ದ್ರವ್ಯವನ್ನು ಪ್ರೀತಿಸಿದನು; [16]ಆದರೆ ಅವನ ಅಕ್ರಮಕ್ಕೆ ಖಂಡನೆಯಾಯಿತು; ಮೂಕ ಪಶುವು ಮನುಷ್ಯಸ್ವರದಿಂದ ಮಾತಾಡಿ ಆ ಪ್ರವಾದಿಯ ಹುಚ್ಚುತನಕ್ಕೆ ಅಡ್ಡಿಮಾಡಿತು.**

ಸುಳ್ಳು ಬೋಧಕರಿಗೆ ದೇವರ ನ್ಯಾಯತೀರ್ಪು ಖಚಿತವಾಗಿದೆ ಎಂದು ತನ್ನ ಓದುಗರಿಗೆ ಭರವಸೆಯನ್ನು ನೀಡಿದ ನಂತರ ಅಪೊಸ್ತಲನು ಅವರ ಗುಣ ಲಕ್ಷಣದ ಮೇಲೆ ಒಟ್ಟಾರೆ ಆಕ್ರಮಣಮಾಡುತ್ತಿದ್ದಾನೆ. ಅವರು ಏನು ಬೋಧಿಸುತ್ತಿದ್ದರು ಎಂಬುದರ ಕುರಿತಾಗಿ ಆತನು ಇನ್ನೂ ಹೆಚ್ಚು ಹೇಳಿದ್ದರೆ ಚೆನ್ನಾಗಿತ್ತು ಎಂದು ನಾವು ಬಯಸುತ್ತೇವೆ. ಪಾಶ್ಚಿಮಾತ್ಯ ಸಂಸ್ಕೃತಿಯ ಮೇಲೆ ಬೆಳಕನ್ನು ಚೆಲ್ಲುವದರ ಮೂಲಕ, ರಹಸ್ಯವಾಗಿ ಕೊಲ್ಲಲ್ಪಟ್ಟ ವ್ಯಕ್ತಿಗಳನ್ನು ದೂರವಿರಿಸಿ, ಈ ವಿಷಯದ ಮೇಲೆ ಚರ್ಚೆಯನ್ನು ಮುಂದುವರೆಸಲು ಬಯಸುತ್ತಾನೆ. ಪ್ರಾಚೀನ ಲೋಕ ದಲ್ಲಿ ವ್ಯಕ್ತಿ ಮತ್ತು ಸಂದೇಶ ನಿಕಟವಾಗಿ ಹೆಣೆಯಲ್ಪಟ್ಟಿಲ್ಲ.

**ವಚನ 10.** ಪೇತ್ರನು ಕೈಗೆತ್ತಿಕೊಂಡ ಮೊದಲನೆಯ ಸಂಗತಿ ಸುಳ್ಳು ಬೋಧಕರು ತಮ್ಮಲ್ಲೇ ಅಧಿಕಾರಿಗಳಾಗಿ ನೋಡಿದರು ಬೇರೆಯವರನಲ್ಲ, ಅವರು ಧೈರ್ಯವಂತರೂ ಮತ್ತು ಸ್ವೇಚ್ಛೆಯುಳ್ಳವರೂ ಆಗಿದ್ದರು. ಸ್ವಯಂ ತೃಪ್ತಿಯ ಹೆಮ್ಮೆಯೇ ಪಾಪದ ಪ್ರಾರಂಭವಾಗಿದೆ. ಇತರ ಸಂಗತಿಗಳಲ್ಲಿ ಭಕ್ತಿವಂತಿಕೆ ತನ್ನ ಸಹೋದರ ಮತ್ತು ಸಹೋದರಿಯರಿಂದ ಕಲಿಯುವ ದೀನತೆಯ ಅವಶ್ಯತೆಯನ್ನು ಹೊಂದಿದೆ. 2 ಪೇತ್ರನಲ್ಲಿರುವ ಸುಳ್ಳು ಬೋಧಕರು ದೇವರಿಂದ ಬಂದ ತಮ್ಮ ಸ್ವಂತ "ಪ್ರಕಟನೆಗಳ" ಮೇಲೆ ಆತುಕೊಳ್ಳುವವರಲ್ಲಿ ಮತ್ತು ವಾಕ್ಯಭಾಗದ ಸೂಚನೆಗಳನ್ನು, ಜ್ಞಾನಿಗಳು ಮತ್ತು ಹೆಚ್ಚು ಪ್ರಭುದ್ಧರು ಆದ ಅವರನ್ನು ಸರಿಯಾದ ಮಾರ್ಗದಲ್ಲಿ ನಡೆಸುವದಕ್ಕೆ ಸಮರ್ಥರಾದ ಕ್ರೈಸ್ತರ ಮಾರ್ಗದರ್ಶನವನ್ನು ಅಲ್ಲಗಳೆಯುವವರಲ್ಲಿ ಕೊನೆಯವರೇನಲ್ಲ.

ಅವರ "ಎದೆಗಾರಿಕೆ" ಮತ್ತು "ಸ್ವೇಚ್ಛೆಯ" ಮಾರ್ಗದ, ಉದಾಹರಣೆಗಳಾಗಿ ಪೇತ್ರನು ಸುಳ್ಳು ಬೋಧಕರು **ದೇವದೂತರ ಮಹಿಮೆಯನ್ನು ಕಾಣುವಾಗ ಅವರು ಭಯದಿಂದ ನಡಗುವದಿಲ್ಲ** ಎಂದು ಹೇಳುತ್ತಾನೆ. ಈ ಕೊನೆಯ ವಾಕ್ಯಭಾಗದ ಅನುವಾದ ಗಣನೀಯವಾದ ವ್ಯತ್ಯಾಸವನ್ನು ಹೊಂದಿದೆ. NRSV ಹೀಗೆ ಹೇಳುತ್ತದೆ. "ಅವರು ಮಹಿಮಾಪ್ರಭಾವವುಳ್ಳವರನ್ನು ದೂಷಿಸಲು ಭಯಪಡುವದಿಲ್ಲ" NIV ಹೀಗೆ ಅನುವಾದಿಸುತ್ತದೆ. "ಈ ಜೀವಿಗಳು ಸ್ವರ್ಗೀಯ ಜೀವಿಗಳನ್ನು ದೂರುವದಕ್ಕೆ ಭಯಪಡುವದಿಲ್ಲ" ವಾಸ್ತವಿಕವಾಗಿ ಗ್ರೀಕ್‌ರು ಹೇಳುತ್ತಾರೆ. "ಅವರು ಭವ್ಯತೆಯ ದೇವದೂಷಣೆಯನ್ನು ಮಾಡುವಾಗ ಅವರು

ನಡುಗುವದಿಲ್ಲ.'' ಮಹಿಮೆಗಳು ಯಾವವು? ಮಹಿಮೆ *(doxa)* ಎಂಬ ಪದವು ಬಹುವಚನದಲ್ಲಿ ವಿರಳ ಇರಬಹುದು, ಆದರೆ ಸ್ವರ್ಗಿಯ ಜೀವಿಗಳನ್ನು ಉಲ್ಲೇಖಿಸುವ ಅವಶ್ಯಕತೆ ಇಲ್ಲ. ಕೆಲವೊಂದು ಸಂದರ್ಭದಲ್ಲಿ ಇದನ್ನು ಪ್ರಖ್ಯಾತ ಜನರಿಗೆ ಉಪಯೋಗಿಸಲಾಗುತ್ತದೆ. 1 ಪೇತ್ರ 1:11ರಲ್ಲಿ ಬಹುವಚನವೂ ಮಹಿಮೆಯ ಸಂಗತಿಗಳನ್ನು ಸೂಚಿಸಲು ಕಂಡುಬರುತ್ತದೆ. ಪೇತ್ರನು ಬಹುಶಃ ಸುಳ್ಳು ಬೋಧಕರು ಅಪೊಸ್ತಲರ ಮತ್ತು ಸಭೆಯ ಇನ್ನಿತರ ನಾಯಕರ ಅಧಿಕಾರವನ್ನು ದೂಷಿಸಿದರು ಎಂದು ಹೇಳುತ್ತಾನೆ. ಸನ್ನಿವೇಶವು "ಮಹಿಮೆ'' ಎಂಬ ಪದವು ಗೌರವಯುತವಾದ ಸ್ಥಾನದಲ್ಲಿದವರು ಮತ್ತು ಸಭೆಯ ನಾಯಕರನ್ನು, ದೇವದೂತರನಲ್ಲ ಉಲ್ಲೇಖಿಸುತ್ತದೆ ಎಂದು ವಾದಿಸುತ್ತದೆ. ಪೌಲನು ಹೇಳುತ್ತಾನೆ. ಸಭೆ "ಅಪೊಸ್ತಲರ ಮತ್ತು ಪ್ರವಾದಿಗಳ ಅಸ್ತಿವಾರದ ಮೇಲೆ ಕಟ್ಟಲ್ಪಟ್ಟಿದೆ, ಕ್ರಿಸ್ತನು ತಾನೇ ಅದರ ಮೂಲೆಗಲ್ಲಾಗಿದ್ದಾನೆ'' (ಎಫೆಸ 2:20). ಸುಳ್ಳು ಬೋಧಕರ ಸಮಸ್ಯೆ ಎಂದರೆ ಕ್ರಿಸ್ತನು ತನ್ನ ವಾಕ್ಯವನ್ನು ಒಪ್ಪಿಸಿಕೊಟ್ಟಿರುವ ಸಭೆಯ ನಾಯಕರು ಕುರಿತಾಗಿ ಅವರಿಗೆ ಗೌರವವಿರಲಿಲ್ಲ. ದೇವದೂತರು ಮುಂದಿನ ವಚನದಲ್ಲಿ 10ನೇ ವಚನದಲ್ಲಿ ಅಲ್ಲಾ.

**ವಚನ 11.** ಸುಳ್ಳು ಬೋಧಕರು ವಿಶೇಷ ಅಧಿಕಾರವನ್ನು ಹೊಂದಿರುವ ದೇವದೂತರನ್ನು ಸಹ ನಿರಾಕರಿಸುತ್ತಾರೆ. ಅವರು ಸಭೆಯ ಆತ್ಮೀಕ ನಾಯಕರನ್ನು ದೂಷಿಸುತ್ತಾರೆ, **ದೇವದೂತರು ಬಲದಲ್ಲಿಯೂ ಮಹತ್ತಿನಲ್ಲಿಯೂ ಶ್ರೇಷ್ಟರಾಗಿದ್ದರೂ ಕರ್ತನ ಮುಂದೆ ಮಹಾಪದವಿಯವರ ಮೇಲೆ ದೂಷಣಾಭಿಪ್ರಾಯವನ್ನು ಹೇಳುವದಿಲ್ಲವಲ್ಲಾ.** ಇಲ್ಲಿರುವ ವಾದವು ಕಡಿಮೆಯಿಂದ ಹೆಚ್ಚಿನ ಪದವಿಯವಾಗಿದೆ.[8] ಒಂದುವೇಳೆ ದೇವದೂತರು ದೋಷಾಸ್ಪದರಾಗಿದ್ದರೆ ಇಂಥಹ ದೂಷಣೆಯ ನ್ಯಾಯತೀರ್ಪನ್ನು ತರುತ್ತಿದ್ದರೋ, ಅಂದಮೇಲೆ ಸುಳ್ಳು ಬೋಧಕರ ಅಪರಾಧವು ಇನ್ನೂ ಎಷ್ಟು ಹೆಚ್ಚಾಗಿರಬಹುದು? 2:4ರಿಂದ ಇಲ್ಲಿಯವರೆಗೆ ಮೊದಲನೆಯ ಸಾರಿ ದೇವದೂತರ ಉಲ್ಲೇಖವನ್ನು ಕಾಣಬಹುದು. ಅಪೊಸ್ತಲರ ಅಧಿಕಾರವನ್ನು ವಿರೋಧಿಸಿದ ಅಧಿಕಾರವನ್ನು ವಿರೋಧಿಸಿದ ಸುಳ್ಳು ಬೋಧಕರ ಹಟಮಾರಿತನವನ್ನು ಉಲ್ಲೇಖಿಸಲು ಅವರನ್ನು ಪರಿಚಯಿಸಲಾಗಿದೆ. 2:10ರಲ್ಲಿ "ಮಹಾಪದವಿಯನ್ನು'' ಹೊಂದಿರುವದಿಲ್ಲ.

"ಶ್ರೇಷ್ಟ'' ಎಂಬುದು ಹೋಲಿಕೆಯ ಪದವಾಗಿದೆ. ಆದರೆ ಪೇತ್ರನು ದೇವದೂತರನ್ನು ತನ್ನ ಓದುಗರು ಯಾರಿಗೆ ಹೋಲಿಸಬೇಕೆಂದು ಬಯಸುತ್ತಾನೆ ಎಂಬುದು ಸ್ಪಷ್ಟವಾಗಿಲ್ಲ. ದೇವದೂತರು "ಮಹಾಪದಗಿಂತ'' "ಮಹಿಮೆ ಮತ್ತು "ಅಧಿಕಾರದಲ್ಲಿ'' ಹೆಚ್ಚಿನವರಾ ಗಿದ್ದಾರೋ? ಅವರು ಸಭೆಯ ನಾಯಕರಿಗಿಂತ ಶ್ರೇಷ್ಟರಾಗಿದ್ದಾರೋ ಅಥವಾ ಸುಳ್ಳು ಬೋಧ ಕರಗಿಂತ ಶ್ರೇಷ್ಟರಾಗಿದ್ದಾರೋ? ಅದೇ ಸಮಯದಲ್ಲಿ ಅವರು ಸುಳ್ಳು ಬೋಧಕರಿಗಿಂತ ಶ್ರೇಷ್ಟರಾಗಿದ್ದಾರೆಂದು ಕ್ವಚಿತ್ತಾಗಿ ಹೇಳಬಹುದು, ಪೇತ್ರನು ಇದನ್ನೇ ಬಹುಶಃ ಹೇಳಲು ಬಯಸಿರಬಹುದು. ಹೋಲಿಕೆಯು ಬಹುಶಃ ದೇವದೂಷಣೆಯಿಂದ ದೂರನ್ನು ಸಭೆಯ ನಾಯಕರ ಮೇಲೆ ತರುವಂತ ಸುಳ್ಳು ಬೋಧಕರ ಅಜಾಗರೂಕತೆಯನ್ನು ಹೀನೈಸುತ್ತದೆ.

ದೇವದೂತರು, "ಕರ್ತನ ಮುಂದೆ ದೂಷಣಾಭಿಪ್ರಾಯವನ್ನು ಹೇಳುವದಿಲ್ಲ'' ಎಂದು ಹೇಳುವಾಗ ಪೇತ್ರನು ಯಾರನ್ನು ಉಲ್ಲೇಖಿಸಿರಬಹುದು? 2:10 ರಲ್ಲಿರುವ "ಮಹಾಪದವಿಯ'' ವ್ಯಕ್ತಿತ್ವವನ್ನು ಆಧರಿಸಿ ಉಲ್ಲೇಖಿಸುವ ಸರ್ವನಾಮವು ವ್ಯತ್ಯಾಸವಾಗಿದೆ. ಒಂದು ವೇಳೆ ನಾವು NASB ಅನುವಾದವನ್ನು ಅನುಸರಿಸಿದರೆ. ನಾವು "ಮಹಾಪದವಿಯನ್ನು'' ದೇವದೂತರು ಎಂದು ಪರಿಗಣಿಸಿದರೆ ಮೊದಲು ತೋರಿಸಿದ "ಅವರ'' ಎಂಬ ಪದವು ಸುಳ್ಳು ಬೋಧಕರಾಗಿದೆ. ಇದರ ಅರ್ಥ, "ದೇವದೂತರು ದೂಷಣಾಭಿಪ್ರಾಯವನ್ನು ಕರ್ತನ ಮುಂದೆ ಹೇಳದಿದ್ದಾಗಲೂ ಸುಳ್ಳು ಬೋಧಕರು ದೇವದೂತರ ಮಹಾಪದವಿಯನ್ನು ದೂಷಿಸಲು ಹಿಂಜರಿಯುವದಿಲ್ಲ.'' ಹಾಗೂ, ಒಂದು ವೇಳೆ "ಮಹಾ ಪದವಿಯು'' ಸಭೆಯ ನಾಯಕರಾಗಿದ್ದಲ್ಲಿ ಅದು ಹಾಗಿದೆ ಎಂದು ನಾವು ನಂಬಿದ್ದರೂ ಸಹ, ಇದರ ಅರ್ಥ, "ದೇವ

ದೂತರು ಸಭೆಯ ನಾಯಕರ ಕುರಿತು ದೂಷಣಾಭಿಪ್ರಾಯವನ್ನು ಕರ್ತನ ಮುಂದೆ ಹೇಳ ದಿದ್ದಾಗಲೂ, ಸುಳ್ಳು ಬೋಧಕರು ಸಭೆಯ ನಾಯಕರನ್ನು ದೂಷಿಸಲು ಹಿಂಜರಿಯುವದಿಲ್ಲ."

**ವಚನ 12.** ಅಪೊಸ್ತಲರು ಸುಳ್ಳು ಬೋಧಕರ ವಿರುದ್ಧವಾಗಿ ಒರಟಾದ, ದೂಷಣೆಯ ಭಾಷೆಯ ಗುಂಡಿನ ಮಳೆಯನ್ನು ಸುರಿಸುವಂಥಹ ಭಾಷೆಯನ್ನು ಸುಳ್ಳು ಬೋಧಕರ ವಿರುದ್ಧವಾಗಿ ಹೇಳಿರುವದು ಸತ್ಯವೇದದಲ್ಲಿ ಯೂದನ ಪತ್ರಿಕೆಯ ಸಮಾನ ವಾಕ್ಯಭಾಗದ ಹೊರತಾಗಿ ಬೇರೆಯಲ್ಲಿಯೂ ಇಲ್ಲ. ಪೇತ್ರನು ಸುಳ್ಳು ಬೋಧಕರ ವಿಷಯದಲ್ಲಿ ಅವರು ಮಾಡಿದಂತೆಯೇ ಮಾಡುತ್ತಿದ್ದಾನೆ, ಅವರು ತನಗೆ ಮತ್ತು ಸಭೆಯ ಇತರ ನಾಯಕರನ್ನು ದೂಷಿಸಿರುವಂತೆಯೇ ಮಾಡುತ್ತಿದ್ದಾನೆ. ದೂಷಿಸಿರುವದಕ್ಕಾಗಿ ಅವರ ಮೇಲೆ ನ್ಯಾಯತೀರ್ಪು ಬರುತ್ತದೆಂದು ಹೇಳುತ್ತಿದ್ದಾನೆ ಈ ಸುಳ್ಳು ಬೋಧಕರು **ವಿವೇಕಶೂನ್ಯ ಪಶುಗಳಂತಿದ್ದಾರೆ. ಸೆರೆಹಿಡಿದು ಇವರು ಕೊಲ್ಲುವದಕ್ಕೆ ಯೋಗ್ಯರಾದ ಸಹಸಪವೃತ್ತಿಯುಳ್ಳ ಜೀವಿಗಳಾಗಿದ್ದಾರೆ.** ಪೇತ್ರನಿಗೆ ಸುಳ್ಳು ಬೋಧಕರ ಪ್ರೇರಣೆ, ಅವರು ತೋರಿಸುವ ನಡತೆ, ಅವರ ಬೋಧನೆಯ ತಿರುಳು ಪ್ರತ್ಯೇಕಿಸಲು ಅಸಾಧ್ಯವಾಗಿದೆ. ಅವರು ಯಾರಾಗಿದ್ದಾರೆ ಮತ್ತು ಅದರ ಪರಿಣಾಮ ವೇನು ಎಂಬುದರ ಮೇಲೆ ಆತನು ಅವರನ್ನು ಸಂಪೂರ್ಣವಾಗಿ ಮೌಲೀಕರಿಸಿದ್ದಾನೆ. ಗಟ್ಟಿ ತಲೆಯುಳ್ಳ ಅವರು ವಿವೇಚನೆಯನ್ನು ತೊರೆದು ಬಿಟ್ಟಿದ್ದಾರೆ. ದುಷ್ಟ ಜೀವಿಗಳಾದ ಅವರನ್ನು ನಿರ್ವಹಿಸುವ ಒಂದೇ ಮಾರ್ಗವೆಂದರೆ ಅವರನ್ನು ಎದುರಿಸುವದು. ಪ್ರಯೋಜನ ಪಡೆಯುವ ಕಾರಣವೇನಿಲ್ಲ. ಅವರು ಕ್ರೂರ ಪ್ರಾಣಿಗಳಂತಿದ್ದರೆ ಅವರು ಒತ್ತಾಯವನ್ನು ಮಾತ್ರ ಅರಿತುಕೊಳ್ಳುತ್ತಾರೆ ಅವರ ವಿಷಯದಲ್ಲಿ ಗೂಢತೆ ಏನೂ ಇಲ್ಲ, ಅವರು ತಮ್ಮ ಸುಖವನ್ನು ಮಾತ್ರ ನೋಡಿ ಕೊಳ್ಳುವವರಾಗಿದ್ದಾರೆ.

ಒಂದು ಸಮಯದಲ್ಲಿ ನಂಬಿಕೆಯಲ್ಲಿ ಇನ್ನೂ ಯೌವನಸ್ಥರಾಗಿರುವವರು ಮತ್ತು ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುವವರನ್ನು ಬೇಡಿಕೊಳ್ಳಬೇಕಾಗಿತ್ತು. ಹೆಚ್ಚು ಪ್ರಭುದ್ಧವಾದ ನಂಬಿಕೆಯನ್ನು ಹೊಂದಿದ ಕೆಲವರು ಅವರನ್ನು "ಬೆಂಕಿಯೊಳಗಿಂದ" ಎಳೆದುಕೊಳ್ಳುವಾಗ ರಕ್ಷಿಸಲ್ಪಡುತ್ತಿದ್ದರು (ಯೂದ 23). ಪೇತ್ರನು ಎದುರಿಸಿದ ಬೋಧಕರು ತಮ್ಮ ಕ್ರಾಂತಿಯಲ್ಲಿ ಬಲಿಷ್ಟನಾಗಿದ್ದನು. ಅವರು ನಂಬಿಕೆ ಪವಿತ್ರ ಬೇಡಿಕೆಗಳನ್ನು ಹಾಸ್ಯಮಾಡುತ್ತಿದ್ದರು, ತಮಗೆ ಜ್ಞಾನವಿಲ್ಲದೇ ಇರುವ ಸಂಗತಿಗಳನ್ನು ದೂಷಿಸುತ್ತಿದ್ದರು. ಅವರು ಹಟಮಾರಿತನದಿಂದ ನಿರ್ಭಂದಗಳಿಲ್ಲದ ಸ್ವತಂತ್ರ್ಯವಾದ ಜೀವಿತವನ್ನು ಪ್ರತಿಪಾದಿಸುತ್ತಿದ್ದರು. ಅವರಿಗೆ ಅವರು ಆಟವಾಡಲು ಆಯ್ದುಕೊಂಡ ಕ್ಷೇತ್ರದಲ್ಲಿ ಅವರನ್ನು ಎದುರಿಸುವದನ್ನು ಬಿಟ್ಟರೆ ಅವರಿಗೆ ಏನೂ ಮಾಡಲು ಸಾಧ್ಯವಿಲ್ಲ, ಅವರು ಆಟವಾಡುವ ಕ್ಷೇತ್ರದಲ್ಲಿ ವಿವೇಚನೆಯನ್ನು ತೊರೆದು ಬಿಟ್ಟಿದ್ದಾರೆ. ಕೊನೆಯ ದಿನಗಳಲ್ಲಿ, ಕರ್ತನು ತಿರುಗಿ ಬರುವಾಗ, "ದುಷ್ಟ ಜೀವಿಗಳು" ಅಥವಾ "ಕ್ರೂರಪಶುಗಳು" KJV ನಾಶವಾಗುತ್ತವೆ. ಅದೇ ಸಮಯದಲ್ಲಿ ಸುಳ್ಳು ಬೋಧಕರು ಆ ಜೀವಿ ಗಳ ನಾಶನದೊಂದಿಗೆ ಅವರು ಸಹ ನಾಶವಾಗುತ್ತಾರೆ. ಆ ಸಮಯದಲ್ಲಿ ಅವರು ಸಭೆಯ ವಿಧ್ವಂಸಕ್ಕೆ ಕಾರಣರಾಗಿರಬಹುದು, ಅವರ ಕೊನೆಯು ನಿಶ್ಚಿತ.

**ವಚನ 13.** ಈ ವಚನದಲ್ಲಿ ಪ್ರಾರಂಭದ ಪದವು ಗ್ರೀಕ್ ಹೊಸ ಒಡಂಬಡಿಕೆಯ ಪ್ರಾಚೀನ ಹಸ್ತಪ್ರತಿಗಳ ನಕಲಿನಲ್ಲಿ ಭಿನ್ನವಾಗಿ ಕಂಡುಬರುತ್ತದೆ. KJV ಓದುವದನ್ನು ಹೀಗೆ ಮುಂದುವರೆಸುತ್ತದೆ ಮತ್ತು *komioumenoi* ಅನುವಾದಿಸುತ್ತದೆ "ತಮ್ಮ ಅನೀಯವಂತಿಕೆಯ ದುಷ್ಟಲವನ್ನು ಹೊಂದುವರು" ಪರ್ಯಾಯ ಅನೇಕ ಪಂಡಿತರು *adikoumenoi* ಓದುವದಕ್ಕೆ ಉತ್ತಮವಾದ ಸಾಕ್ಷಿಗಳಿವೆ ಎಂದು ನಂಬುತ್ತಾರೆ. ಇದರ ನಂತರದ ಓದುವಿಕೆಯನ್ನು ಅನುಸರಿಸಿ, NASB ಸುಳ್ಳು ಬೋಧಕರು **ತಮ್ಮ ದುಷ್ಟವರ್ತನೆಗೆ ಸರಿಯಾದ ದುಷ್ಫಲವನ್ನು ಹೊಂದುವರು** ಎಂದು ದೃಢಪಡಿಸುತ್ತದೆ.[9] ದುಷ್ಟರಿಗೆ ದೊರೆಯುವ ಕಷ್ಟಸಂಕಟವು ಅವರ ದುಷ್ಟವರ್ತನೆಗೆ ಸಿಕ್ಕುವ ಸಂಬಂಳವಾಗಿದೆ ಎಂಬುದು ಆಸಕ್ತಿತರುವಂಥ ವಿಚಾರವಾಗಿದೆ. ಪಾಪಮಾಡಿ ಯಾರು ಈ ಜೀವಿತದಲ್ಲಿಯೂ ತಪ್ಪಿಸಿಕೊಳ್ಳಲಾರರು.

ಇತರರನ್ನು ಬಲಿಕೊಟ್ಟಾದರೂ ತಮ್ಮ ಸ್ವಾರ್ಥಕ್ಕಾಗಿ ಚಿಂತಿಸುತ್ತಾರೋ, ಯಾರಿಗೆ ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆ ಮತ್ತು ತತ್ವಗಳು ಹಗುರವಾಗಿ ತೋರಿಬರುತ್ತವೋ, ತಾವು ತಮ್ಮ ಜೀವಿತದಲ್ಲಿ ಮೊದಲ ಆಧ್ಯತೆಯಾಗಿ ಆಯ್ದುಕೊಂಡ ಉತ್ತಮವಾದ ಸಮಯದ ಹಕ್ಕನ್ನು ಕಳೆದುಕೊಳ್ಳುವ ಪ್ರವೃತ್ತಿಯವರಾಗಿರುತ್ತಾರೆ. ಬಹಳ ಚರ್ಚೆಗೆ ಒಳಗಾದ ಮೋಶೆಯ ಧರ್ಮಶಾಸ್ತ್ರದ ಭಾಗ ಹೀಗಿದೆ: "ನಿಮ್ಮ ಪಾಪವು ನಿಮ್ಮನ್ನು ಬಿಟ್ಟು ಹೋಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ" (ಅರಣ್ಯಕಾಂಡ 32:23). ವಚನವು "ಪಾಪವು ತನ್ನದೇ ಆದ ದಂಡನೆಯನ್ನು ಹೊಂದಿದೆ" ಎಂದು ಹೇಳುತ್ತಿರಬಹುದು - ಈ ವಿಚಾರವು ಪೇತ್ರನಿಂದ ಬಹಳ ದೂರವಾಗಿಲ್ಲ. ಲಗಾಮಿಲ್ಲದ ಪ್ರಯತ್ನ ಜನರನ್ನು ಸಂಕಟ ಮತ್ತು ನಾಶನದ ಮಾರ್ಗಕ್ಕೆ ಕೊಂಡೊಯ್ಯುತ್ತದೆ. ಪಾಪವು ಸ್ವ-ನಾಶನಕ್ಕೆ ಕಾರಣವಾಗಿದೆ. ದೇವರು ಆಜ್ಞಾಪಿಸುತ್ತಾನೆ ಅಥವಾ ನಡತೆಯು ಜೀವವನ್ನು ನೀಡುತ್ತದೋ ಅಥವಾ ಮರಣದ ಪರಿಣಾಮದತ್ತ ನಡೆಸುತ್ತದು ಅದರ ಆಧಾರದ ಮೇಲೆ ನಡತೆಯನ್ನು ನಿಷೇಧಿಸುತ್ತಾನೆ. ನಕಾರಾತ್ಮಕವಾಗಿ ಹೇಳಬೇಕಾದರೆ ಪಾಪವು ಚಂಚಲ ಸ್ವಭಾವದ ದೇವರಿಂದ ಬಂದ ನಿರಂಕುಶ ಅಪ್ಪಣೆಯ ಪರಿಣಾಮವಲ್ಲ. ಯಾರು ಪಾಪ ಮಾಡುತ್ತಾರೋ ಅವರು ಮಗುವಿನ ನಗುವಿನಲ್ಲಿ ಸ್ವಲ್ಪ ಆನಂದವನ್ನು ಕಂಡುಕೊಳ್ಳುತ್ತಾರೆ, ಅನುಕಂಪದ ಕಾರ್ಯಗಳನ್ನು ಮಾಡುವದರಲ್ಲಿ ಸ್ವಲ್ಪ ಸೃಪ್ತಿಯನ್ನು ಹೊಂದಿಕೊಳ್ಳುತ್ತಾರೆ, ಆನಂದವನ್ನು ಹುಡುಕುವ ಪ್ರಕ್ರಿಯೆಯಲ್ಲಿ ಅವರು ಸಂಪೂರ್ಣವಾಗಿ ನಿರ್ಗತಿಕರಾಗಿರುವ ಜನರಾಗುತ್ತಾರೆ, ತಮ್ಮಷ್ಟಕ್ಕೆ ಮತ್ತು ತಮ್ಮ ಸಂಪರ್ಕದಲ್ಲಿ ಬರುವ ಇತರರಿಗೆ, "ದುಷ್ಟತನದ ಕೊಡುವ ಸಂಬಳ ದುಷ್ಟತನ" ಎಂಬುದನ್ನು ಅವರು ಅನುಭವಿಸುತ್ತಾರೆ.

ಸುಳ್ಳು ಬೋಧಕರು ಮಾತ್ರ ತಮ್ಮ ಮೇಲೆ ನಾಶನವನ್ನು ಬರಿಮಾಡಿಕೊಳ್ಳುವದಿಲ್ಲ, ಅವರು ಕ್ರಿಸ್ತನ ದೇಹವನ್ನು ಭ್ರಷ್ಟಮಾಡುವ ಪ್ರವೃತ್ತಿಯನ್ನು ಹೊಂದಿರುತ್ತಾರೆ. ದೇವರು ವಿಮೋಚಿಸಿದ ಜನರೊಂದಿಗೆ ಹೊಕ್ಕು ಬಳಿಕೆ ಮಾಡುವದರ ಮೂಲಕ ಅವರು ಕಲಂಕ ಮತ್ತು ನ್ಯೂನತೆ ತಮ್ಮ ಮೋಸತನದಲ್ಲಿ ಆನಂದ ಪಡುತ್ತಾ ನಿಮ್ಮೊಂದಿಗೆ ಗಲಭೆ ಮಾಡುತ್ತಾರೆ. ಅಪೊಸ್ತಲನು ತನ್ನ ಓದುಗರು ಸುಳ್ಳು ಬೋಧಕರನ್ನು ಬಹಿರಂಗಪಡಿಸಲು ಮತ್ತು ಅವರನ್ನು ತಮ್ಮಿಂದ ಪ್ರತ್ಯೇಕಿಸಲು ವಿಫಲರಾಗಿರುವದಕ್ಕೆ ಗದರಿಸುತ್ತಿದ್ದಾನೆ. REB ಯಲ್ಲಿ ಓದುವದು ವರ್ಣಮಯವಾಗಿದೆ ಮತ್ತು ಗ್ರೀಕ್ ಮೂಲದ ಅರ್ಥಕ್ಕನುಗುಣವಾಗಿ ನಿಜವಾಗಿದೆ. "ಪ್ರಕಾಶಮಾನವಾದ ಬೆಳಕಿನಲ್ಲಿ ಗಲಬೆಯನ್ನು ಎಬ್ಬಿಸುವದರು ಅವರ ವಿಚಾರ; ಅದೇ ಸಮಯದಲ್ಲಿ ಅವರು ನಿಮ್ಮೊಂದಿಗೆ ಮೇಜಿನ ಮುಂದೆ ಕುಳಿತುಕೊಳ್ಳುವಾಗ ಅವರು ಅಸಹ್ಯಕರವಾದ ಕಲಂಕದಂತಿರುತ್ತಾರೆ ಯಾಕಂದರೆ ಅವರು ತಮ್ಮ ಮೋಸ ಕೃತ್ಯಗಳಲ್ಲಿ ಆನಂದಿಸುವವರಾಗಿರುತ್ತಾರೆ."

ಪಾಪವು ಕತ್ತಲೆಯ ರಾತ್ರಿಯಲ್ಲಿ ನಡೆಸಲಿ ಅಥವಾ ದಿನದ ಬೆಳಕಿನಲ್ಲಿ ನಡೆಸಲಿ ಅದು ನಾಶನಕರವಾಗಿಯೇ ಇರುತ್ತದೆ. ಆದರೆ ಹಾಡುಹಗಲಲ್ಲಿ ಮಾಡುವ ಪಾಪವು ನಾಚಿಕೆಯಿಲ್ಲದೇ ಮಾಡುವದನ್ನು ಸೂಚಿಸುತ್ತದೆ. ದಯದಾಕ್ಷಿಣ್ಯವಿಲ್ಲದೇ ಶರಣಾಗುವದಾಗಿದೆ. ಕುಡಿಕತನ ಮತ್ತು ಅದರೊಂದಿಗೆ ಇರುವ ಎಲ್ಲವೂ ಕತ್ತಲೆಯ ಜೀವಿಗಳ ವರ್ತನೆಗಳಾಗಿವೆ (1 ಥೆಸಲೋನಿಕ 5:7). ಇದಕ್ಕೆ ನಕಾರಾತ್ಮಕ ಮತ್ತು ಸಕಾರಾತ್ಮಕ ಅಂಶಗಳಿವೆ. ಪಾಪದಲ್ಲಿ ತೊಡಗಿರುವವನು ಅವಮಾನವನ್ನು ಪರಿಗಣಿಸುವವರೆಗೆ, ಅವನನ್ನು ಕ್ರೂಜೆಯ ಸಂದೇಶದೊಂದಿಗೆ ತಲುಪಬಹುದು. ಹಗಲಿನ ಬೆಳಕಿನಲ್ಲಿ ಮೋಸಕೃತ್ಯಗಳಲ್ಲಿ ಆನಂದಿಸುವವರು ಮತ್ತು ನಾಚಿಕೆಯನ್ನು ಬಿಟ್ಟುಬಿಟ್ಟವರಾಗಿರುತ್ತಾರೆ ಒಬ್ಬರ ಪ್ರೇರಣೆಯನ್ನು ಆಧಾರದ ಮೇಲೆ, ಮುಚ್ಚಿಟ್ಟುಕೊಂಡ ಪಾಪವು ನಿರೀಕ್ಷೆಯ ಬೆಳಕು ಮತ್ತು ಅವರ ಕಪಟತನದ ಸಂಕೇತ ವಾಗಬಹುದು. ಒಬ್ಬ ವ್ಯಕ್ತಿಯು ತನ್ನ ಪಾಪವನ್ನು ತನಗೆ ನಾಚಿಕೆಯಾಗುತ್ತದೆ ಮತ್ತು ನಾನು ಬದಲಾವಣೆ ಹೊಂದಬೇಕು ಎಂದು ಮುಚ್ಚಿಟ್ಟುಕೊಳ್ಳಬಹುದು. ಅವನಿಗೆ ನಿರೀಕ್ಷೆ

ಯಿರುತ್ತದೆ. ಇನ್ನೊಬ್ಬನು ಹೊಗಳಿಕೆಯನ್ನು ಹೊಂದಿಕೊಳ್ಳುವದಕ್ಕೆ ತನ್ನ ಪಾಪಗಳನ್ನು ಮುಚ್ಚಿಟ್ಟುಕೊಳ್ಳುತ್ತಾನೆ. ಅಂಥವನಿಗೆ ಕಪಟಿಗೆ ದೊರೆಯುವ ಸಂಬಳವಿದೆ.

ಅನೇಕ ಅನುವಾದಗಳು NASB ಯನ್ನು ಒಳಗೊಂಡು, ಈ ವಚನದಲ್ಲಿ ಪಠ್ಯದ ವ್ಯತ್ಯಾಸದಲ್ಲಿರುವ ಎರಡನೆಯ ಅಂಶವನ್ನು ತೆಗೆದುಕೊಳ್ಳುತ್ತವೆ. ಕೆಲವು ಹಸ್ತಪ್ರತಿಗಳು, "ಮೋಸತನ" *(apatias)* ಎಂದು ಓದುವದಕ್ಕೆ ಬದಲಾಗಿ "ಪ್ರೀತಿಯ ಔತಣ" *(agapais)* ಎಂದು ಓದುತ್ತವೆ. ಈ ಪತ್ರವು ಸ್ಪಷ್ಟವಾಗಿ ಯೂದನ ಪತ್ರಿಕೆ 12ನೇ ವಚನವನ್ನು ಓದಿದಂತಿದೆ. ನಾವು ವಚನದಲ್ಲಿ "ಮೋಸತನ" ಎಂದು ತೆಗೆದುಕೊಂಡರೂ, ಪೇತ್ರನು ಅನ್ಯೋನ್ಯ ಭೋಜನವನ್ನು ಆಚರಿಸುವ ಒಂದು ವಿಧಾನವೆಂದರೆ ಆಹಾರವನ್ನು ಹಂಚಿಕೊಳ್ಳುವದರ ಮೂಲಕ. ದುರ್ದೈವದಿಂದ ಇಂಥಹಾ ಅನ್ಯೋನ್ಯತೆಗಳು ಸದ್ಗುಣಭ್ರಷ್ಟರನ್ನಾಗಿಸಿ ದೂಷಣೆಯತ್ತ ನಡೆಸುತ್ತವೆ. ಪೌಲನು 1 ಕೊರಿಂಥ 11:20, 21ರಲ್ಲಿ ಒಂದು ವಿಧವಾದ ದೂಷಣೆಯನ್ನು ಸಂಬೋಧಿಸುತ್ತಾನೆ. ಪೇತ್ರನು ಇನ್ನೊಂದನ್ನು ಸಂಬೋಧಿಸುತ್ತಾನೆ. ದುಷ್ಟರು, ವ್ಯಭಿಚಾರಿಗಳು ಆದ ಜನರು ಮತ್ತು ಪ್ರಜ್ಞಾಪೂರ್ವಕವಾಗಿ ದೇವರನ್ನು ಗೌರವಿಸಲು ಬಯಸುವ ಜನರನ್ನು ಒಂದೇ ಮೇಜಿಗೆ ಆಹ್ವಾನಿಸಿದಾಗ, ಎಲ್ಲರನ್ನೂ ಒಂದೇ ಕುಂಚದಲ್ಲಿ ಚಿತ್ರಿಸಲಾಗುತ್ತದೆ. ಪಾಪವನ್ನು ಸ್ವೀಕರಿಸಲು, ಪ್ರತಿರೋಧದ ಧ್ವನಿಯನ್ನು ಎತ್ತದೇ ಇರುವದು, ಅದನ್ನು ಒಪ್ಪಿಕೊಳ್ಳುವದಾಗಿದೆ. ಸಭೆಯಲ್ಲಿ ಪಾಪವನ್ನು ಸಹಿಸಿಕೊಳ್ಳುವಾಗ, ಕ್ರಿಸ್ತನನ್ನು ಹೊಂದಿಕೊಂಡವರು ಲೋಕಕ್ಕೆ ಪರಿಶುದ್ಧತೆಯ ಯಾವ ಆಯ್ಕೆಯನ್ನು ನೀಡಲು ಸಾಧ್ಯವಿಲ್ಲ. ಕ್ರಿಸ್ತನಿಂದ ಹೊರಗೆ ಇರುವವರು ಹುಸಿನನಾಗುತ್ತಾರೆ; ಕ್ರಿಸ್ತನ ದೇಹದಲ್ಲಿ ನಂಬಿಕೆಯಲ್ಲಿ ಬಲಹೀನರಾಗಿರುವವರು ನಿಷ್ಟುರರಾಗಿರುತ್ತಾರೆ ಮತ್ತು ಪಾಪವು ತರುವ ಮರಣದೊಂದಿಗೆ ಪ್ರಣಯ ವಿಲಾಸ ನಡೆಸುತ್ತಾರೆ.

**ವಚನ 14.** ಪೇತ್ರನು ಈ ವಿಭಾಗವನ್ನು ಅವನು ವರ್ಣಿಸಿದ ಜನರನ್ನು "ಸುಳ್ಳು ಬೋಧಕರು" ಎಂದು ಕರೆಯುವದರ ಮೂಲಕ ಪ್ರಾರಂಭಿಸುತ್ತಾನೆ. ಆದಾಗ್ಯೂ ಅವರ ಗುಣಲಕ್ಷಣ ಮತ್ತು ಅವರ ನಡತೆ ಆತನ ಕೇಂದ್ರಬಿಂದುವಾಗಿದೆ, ಅವರ ಬೋಧನೆಯಲ್ಲ. ಅವರು ಸಂಪೂರ್ಣವಾಗಿ ಸದ್ಗುಣಭ್ರಷ್ಟರು **ಜಾರತ್ವದಿಂದ ತುಂಬಿತ ಮತ್ತು ಪಾಪವನ್ನು ಬಿಡಲೊಲ್ಲದ ಕಣ್ಣುಳ್ಳವರೂ** ಆಗಿದ್ದಾರೆ. ಅನುವಾದವಿದ್ದಾಗ್ಯೂ ಅಪೊಸ್ತಲನು "ವ್ಯಭಿಚಾರ" *(moicheia)* ಎಂಬ ಪದಕ್ಕೆ ಅದೇ ಅರ್ಥವನ್ನು ನೀಡುತ್ತಿದ್ದರು ಸಾಮಾನ್ಯ ಪದವನ್ನು ಉಪಯೋಗಿಸಿಲ್ಲ. ವಾಸ್ತವಿಕವಾಗಿ "ಅವರ ಕಣ್ಣುಗಳು ವ್ಯಭಿಚಾರದಿಂದ ತುಂಬಿದ್ದವು" *(moichalis).*

ಒಂದು ವೇಳೆ ನಾವು ಪೇತ್ರನು ಉಪಯೋಗಿಸಿದ ಪದಗಳನ್ನು ಗಂಭೀರವಾಗಿ ಪರಿಗಣಿಸಿದ್ದಲ್ಲಿ, ಅವನು ಖಂಡಿತವಾಗಿಯೂ ಈ ಬೋಧಕರು ಸ್ತ್ರೀಯರನ್ನು ಲೈಂಗಿಕ ತೃಪ್ತಿಯ ವಸ್ತುವಾಗಿ ನೋಡುವದನ್ನು ಮಾತ್ರ ಅರಿತಿದ್ದರು. ಇಂದಿನ ದಿನಗಳಲ್ಲಿ ಕೆಲವರು ಆಶ್ಲೀಲ ಚಿತ್ರಗಳನ್ನು ತಯಾರಿಸುವಂತೆ ಅಥವಾ ಅಶ್ಲೀಲ ಚಿತ್ರಗಳಲ್ಲಿ ಆನಂದಿಸುವವರು ಸ್ತ್ರೀಯರನ್ನು ಅರ್ಥಪೂರ್ಣವಾದ ಸಂಬಂಧವನ್ನು ಹಂಚಿಕೊಳ್ಳುವ ವ್ಯಕ್ತಿ ಎಂದು ದೃಷ್ಟಿಸುವದಿಲ್ಲ. ಬದಲಾಗಿ ಆಕೆಯು ಉಪಯೋಗಿಸಿ ಚೆಲ್ಲುವಂತ ಒಂದು ವಸ್ತು ಎಂದು ಪರಿಗಣಿಸುತ್ತಾರೆ. ಸುಳ್ಳು ಬೋಧಕರಂತೆ ಇರುವವರು ಸ್ತ್ರೀಯರನ್ನು ಪ್ರೀತಿಸಲು, ನೀಡಲು ಮತ್ತು ಸಂಬಂಧಗಳನ್ನು ಹೊಂದಿಕೊಳ್ಳಲು ಅಸಮರ್ಥರಾಗುವ ಹಂತಕ್ಕೆ ಬರುತ್ತಾರೆ. "ಅವರು ಎಂದಿಗೂ ಪಾಪಮಾಡುವದನ್ನು ನಿಲ್ಲಿಸುವದಿಲ್ಲ."

ಅದು ಇಷ್ಟವಾಗುವ ಒಂದು ಹಂತದವರೆಗೆ ಪಾಪವು ಶೋಧನೆಯಲ್ಲ, ಅನೇಕ ಜನರು ಪುರುಷರು ಸ್ತ್ರೀಯರು ತಮ್ಮಷ್ಟಕ್ಕೆ ತಾವೇ ಪರಿಶುದ್ಧವಾದ ಮತ್ತು ಸರಳವಾದ ತಮಗೆ ಇಷ್ಟವಾಗುವ ಲೈಂಗಿಕ ತೃಪ್ತಿಯನ್ನು ಹೊಂದಿಕೊಳ್ಳಬಹುದು. ಇಲ್ಲಿ ಆಶ್ಚರ್ಯಕರವಾದದ್ದೆಂದರೆ ಸುಳ್ಳು ಬೋಧಕರು ಅಸ್ಥಿರವಾದ ಆತ್ಮಗಳನ್ನು ಆಕರ್ಷಿಸುತ್ತಾರೆ. "ಆಕರ್ಷಿಸು" *(deleazō)* ಎಂದು ಅನುವಾದಿಸಿದ ಪದ ಹೊಸ ಒಡಂಬಡಿಕೆಯಲ್ಲಿ 2:18ರಲ್ಲಿ ಮತ್ತು ಯಾಕೋಬ 1:14ರಲ್ಲಿ

ಇಲ್ಲಿ ಮಾತ್ರ ಉಪಯೋಗಿಸಲಾಗಿದೆ. ಇದರ ಅರ್ಥ "ಗಾಳದ ಹುಳುವಿನಿಂದ ಪಾಶ." ಬೆಸ್ತನು ತನ್ನ ಬೇಟೆಗೆ ಆ ನಿಮಿಷವನ್ನು ನೀಡುವಂತೆ ಸುಳ್ಳು ಬೋಧಕರು ಆತ್ಮೀಕವಾಗಿ ಅಪ್ರಭುದ್ಧರಾದವರನ್ನು ಆಕರ್ಷಿಸುತ್ತಾರೆ. ಕೆಲವು ಹಂತದಲ್ಲಿ ಈ ರೀತಿಯಾಗಿ ಆಮಿಷಕ್ಕೆ ಒಳಗಾದವರು ಇಂಥಹ ಜೀವಿತದ ಬಲೆಯಲ್ಲಿ ಬಿದ್ದು ಅದರೊಳಗಿಂದ ಹೊರಗೆ ಬರುವ ಇಚ್ಛೆಯನ್ನು ತೊರೆದು ಬಿಡುತ್ತಾರೆ. ಅನೈತಿಕತೆಯನ್ನು ಸರಳವಾಗಿ ತಾಳಿಕೊಳ್ಳುವಾಗ "ಅದು ಕೊಳಕು ಹುಣಿನಂತೆ ಹರಡುತ್ತದೆ" (2 ತಿಮೋಥೆ 2:17). ದೇಹದಲ್ಲಿ ಕ್ರೈಸ್ತರು ತಮ್ಮಷ್ಟಕ್ಕೆ ಕಂಡು ಕಾಣದಂತೆ ಇದ್ದು ತಮ್ಮ ತಲೆಗಳನ್ನು ಅಲುಗಾಡಿಸಿ ಮತ್ತು ಸಮಸ್ಯೆಯನ್ನು ಅಲಕ್ಷಿಸು ವಾಗ ಇದು ಸಂಭವಿಸುತ್ತದೆ. ಬದಲಾಗಿ ಲೋಕಕ್ಕೆ ಲೈಂಗಿಕ ಅನೈತಿಕತೆ ಮತ್ತು ಪಾಪಕ್ಕೆ ಬದಲಾಗಿ ಕ್ರಿಸ್ತನಂತ ಜೀವಿತದ ಶೈಲಿಯನ್ನು ಪ್ರದರ್ಶಿಸುವದರಿಂದ ಸಭೆಯು ಬೆಲೆಯಿಲ್ಲದ ಮುದ್ರೆಯಾಗುತ್ತದೆ, ತಪ್ಪಾದ ಸಂಗತಿಗಳನ್ನು ನ್ಯಾಯಸಮ್ಮತವಾಗಿಸುವದು.

ಸುಳ್ಳು ಬೋಧಕರು ತಮ್ಮ ಸ್ವಾರ್ಥತೆಯ ಸ್ವಭಾವವನ್ನು ಇನ್ನೊಂದು ರೀತಿಯಲ್ಲಿ ಸಹಜ ವಾಗಿಸಿ ಕೊಂಡಿದ್ದಾರೆ. ಅವರು ಹೃದಯಗಳು ದುರಾಶೆಯಲ್ಲಿ ತರಬೇತಿಯನ್ನು ಹೊಂದಿವೆ. ಯೋಸೆಫಸ್ಸ್ ಕಾಯೀನನ ತೂಕ ಮತ್ತು ಅಳತೆಯ ಸಂಶೋಧನೆಗೆ ಕೊಡುಗೆಯನ್ನು ನೀಡುತ್ತಾನೆ. ಅವರ ಮೂಲಕ ಆತನು ತನ್ನ ಸಹವಯಸ್ಕರಲ್ಲಿ ದುರಾಶೆಯನ್ನು ಉತ್ತೇಜಿ ಸಿದ್ದಾನೆ.[10] ತಮ್ಮ ದುರಾಶೆಯಿಂದಾಗಿ, ಕ್ರಿಸ್ತನ ಮಾರ್ಗದಿಂದ ದೂರವಾಗಿ, ಸುಳ್ಳು ಬೋಧಕರು ಶಾಪಗ್ರಸ್ತ ಮಕ್ಕಳಾದರು. ಪ್ರಾಚೀನ ಲೋಕದಲ್ಲಿ ಮತ್ತು ಆಧುನಿಕ ಲೋಕದಲ್ಲಿ ಸಹ ಲೈಂಗಿಕತೆ ಮತ್ತು ಹಣ ದಬ್ಬಾಳಿಕೆ ಮಾಡುವ ಮತ್ತು ದೂಷಿಸುವ ನಡತೆಗೆ ಮುಖ್ಯ ಪ್ರೇರಣೆಯಾಗಿದೆ ಎಂದು ತೋರಿಬರುತ್ತದೆ. "ಗರಡಿಮನೆ" ಎಂಬ ಇಂಗ್ಲೀಷ್ ಶಬ್ದ ಗ್ರೀಕ್ ಪದದಿಂದ ಅನುವಾ ದವಾದ "ತರಬೇತಿ" *(gumnazō).*

**ವಚನ 15.** ಪೇತ್ರನು ಅವರು ನೀಟಾದ ಮಾರ್ಗವನ್ನು ಬಿಟ್ಟು ತಪ್ಪಿಹೋಗಿದ್ದಾರೆ ಎಂದು ಹೇಳುವಾಗ ಸುಳ್ಳು ಬೋಧಕರು ಕ್ರಿಸ್ತೀಯ ಪ್ರಯಾಣವನ್ನು ಯೋಗ್ಯವಾದ ಉದ್ದೇಶಗಳಿಗಾಗಿ ಪ್ರಾರಂಭಿಸಿದ್ದಾರೆ ಎಂದು ಸಲಹೆ ನೀಡುತ್ತಾನೆ. ಹುಮೆನಾಯನೂ ಮತ್ತು ಅಲೆಕ್ಸಾಂದರಂತೆ ಅವರು ಕ್ರಿಸ್ತ ನಂಬಿಕೆಯೆಂಬ ಹಡಗು ಒಡೆದು ನಷ್ಟಪಟ್ಟವರಂತೆ ಇದ್ದಾರೆ (1 ತಿಮೋಥೆ 1:19, 20). ಕ್ರಿಸ್ತನನ್ನು ಅಪ್ಪಿಕೊಂಡು, ದೀಕ್ಷಾಸ್ನಾನ ತೆಗೆದುಕೊಂಡು ವಿಮೋಚನೆಯನ್ನು ಹೊಂದಿದವರ ಪಟ್ಟಿಯಲ್ಲಿದ್ದರೆ ಅಷ್ಟೇ ಸಾಲದು. ದೃಢವಾದ ಪ್ರಯತ್ನದ ಜೀವಿತದೆಡೆಗೆ ನಡೆಸುತ್ತದೆ. ನಿಶ್ಚಿಯವಾಗಿಯೂ ಈ ಸುಳ್ಳು ಬೋಧಕರು ಸಂಪತ್ತಿನ ಈ ಮೋಸವನ್ನು ವಾಕ್ಯವನ್ನು ನಂದಿಸುವದಕ್ಕೆ ಅನುಮತಿಸಿದ್ದಾರೆ; ಅವರು ಫಲಕೊಡದೆ ಇರುತ್ತಾರೆ (ಮತ್ತಾಯ 13:22 ನೋಡಿರಿ). ವಾಸ್ತವಿಕವಾಗಿ, ಅವರು "ನೇರವಾದ ಮಾರ್ಗವನ್ನು" ಬಿಟ್ಟು ಬಿಟ್ಟಿದ್ದಾರೆ ಎಂದು ಗ್ರೀಕ್‌ರು ಹೇಳುತ್ತಾರೆ. ನಿತ್ಯಜೀವಕ್ಕೆ ನಡೆಸುವ ಮಾರ್ಗವು ಇಕ್ಕಟ್ಟು ದಾರಿ ಬಿಕ್ಕಟ್ಟು ಎಂದು ಯೇಸು ಎಚ್ಚರಿಸಿದ್ದಾನೆ (ಮತ್ತಾಯ 7:14). ಸುಳ್ಳು ಬೋಧಕರು ವಿಶಾಲವಾದ ಮಾರ್ಗವನ್ನು ಆಯ್ದುಕೊಳ್ಳುತ್ತಾರೆ. ಅವರು ದುರಾಶೆಯ ಉರಲಿಗೆ ಸಿಕ್ಕಿಕೊಂಡು **ಬೆಯೋರನ ಮಗನಾದ ಬಿಳಾಮನ ಮಾರ್ಗವನ್ನು ಅನುಸರಿಸಿದ್ದಾರೆ.** ಅದು ನೀಟಾದ ಮಾರ್ಗವಾಗಿದೆ.

ಬಿಳಾಮನ ಕಥೆಯು ಅರಣ್ಯಕಾಂಡ 22ರಲ್ಲಿ ಪ್ರರಂಭವಾಗುತ್ತದೆ. ಮೋವಾಬ್ಯರ ಅರಸನಾದ ಬಾಲಾಕನು ತನ್ನ ಮುಂದಿನ ಬಾಗಲಿನ ಬಳಿ ಬೀಡುಬಿಟ್ಟಿರುವ ಇಸ್ರಾಯೇಲ್ಯರ ದಂಡನ್ನು ನೋಡಿ ಭಯಪಟ್ಟನು. ಅವನು ಪ್ರವಾದಿಯಾದ ಬಿಳಾಮನನ್ನು ಇಸ್ರಾಯೇಲ ರನ್ನು ಶಪಿಸುವದಕ್ಕಾಗಿ ಕರೆಸುತ್ತಾನೆ. ತಾನು ದೇವರ ಆಶೀರ್ವಾದವಿಲ್ಲದೆ ಏನನ್ನೂ ಮಾಡಲು ಸಾಧ್ಯವಿಲ್ಲ ಎಂದು ಬಿಳಾಮನು ಹೇಳುತ್ತಾನೆ, ದೇವರು ಆತನಿಗೆ ಇಸ್ರಾಯೇಲರನ್ನು ಆಶೀರ್ವದಿಸದೇ ಅವನು ಅಲಿಂದ್ದ ಹೋಗಬಾರದು ಎಂದು ಹೇಳುತ್ತಾನೆ. ಇದು ವಿಷಯದ ಸಮಾಪ್ತಿ ಎಂದು ತೋರುತ್ತದೆ, ಆದರೆ ಬಾಲಾಕನು ಪರಿಸ್ಥಿತಿಯನ್ನು ವಿಭಿನ್ನವಾಗಿ ಮೌಲಿಕರಿಸುತ್ತಾನೆ. ಜನರನ್ನು ಒಲಿಸಿಕೊಳ್ಳಬೇಕೆಂದರೆ ಏನು ಮಾಡಬೇಕು ಎಂಬುದನ್ನು

ಬಲ್ಲವನಾಗಿದ್ದನು; ಹಣ ಮತ್ತು ಅಧಿಕಾರ. ಬಿಳಾಮನು ಇನ್ನೂ ಹೆಚ್ಚಿನ ಆಶೆಯನ್ನು ಹಿಡಿದಿಟ್ಟುಕೊಂಡಿದ್ದನು, ಮೊದಲಿನದಕ್ಕಿಂತ ಹೆಚ್ಚು ಗೌರವಯುತವಾದದ್ದನ್ನು ಹೆಚ್ಚು ಹಣದ ವಾಗ್ದಾನದೊಂದಿದೆ. ಪ್ರವಾದಿಯು ಪ್ರತಿಕ್ರಿಯಿಸಿರಬಹುದಿತ್ತು. "ನಿನಗೆ ನನ್ನ ಉತ್ತರ ಗೊತ್ತಿದೆ, ದೇವರು ನನಗೆ ಹೋಗಬಾರದೆಂದು ಹೇಳಿದ್ದಾನೆ." ಬದಲಾಗಿ ಆತನು ಚಂಚಲನಾದನು. ಬಿಳಾ ಮನು ಪ್ರಭಾವಿತನಾದನು. ಹಣವು ಆತನಿಗೆ ಉತ್ತಮವಾಗಿ ಕಂಡುಬಂತು. ಬಹುಶಃ ಆತನು ದೇವರನ್ನು ಬೇಡಿಕೊಂಡಿರಬಹುದು. ಅವನು ಇನ್ನೊಂದು ಬೇಡಿಕೆಯೊಂದಿಗೆ ಹಿಂತಿರುಗಿ ಹೋದನು. ದೇವರು ಅವನಿಗೆ "ಮುಂದಕ್ಕೆ ಹೋಗು" ಎಂದು ಅಪ್ಪಣೆ ಕೊಟ್ಟನು. ಸುಳ್ಳು ಬೋಧಕರನ್ನು ಪೇತ್ರನು ಸಂಬೋಧಿಸಿದಂತೆ. ಬಿಳಾಮನು ದುರಾಶಗೆ ಒಳಗಾದನು. ಬಿಳಾಮನು ಧರ್ಮವನ್ನು ತಮ್ಮ ಲೌಕಿಕ ಲಾಭಕ್ಕೆ ಉಪಯೋಗಿಸಿಕೊಳ್ಳುವವರ ಮಾದರಿಯಾಗಿದ್ದಾನೆ.

ಬಿಳಾಮನು ಇನ್ನೊಂದು ರೀತಿಯಲ್ಲಿ ಸುಳ್ಳು ಬೋಧಕರ ಸಮಂಜಸವಾದ ಮಾದರಿಯಾಗಿದ್ದಾನೆ. ಬಿಳಾಮನ ಇಸ್ರಾಯೇಲರನ್ನು ಶಪಿಸಲು ವಿಫಲನಾದನು. ಅವನಿಗೆ ಸಾಧ್ಯವಾಗಲಿಲ್ಲ ಯಾಕೆಂದರೆ ದೇವರು ಅವರನ್ನು ಆಶೀರ್ವದಿಸಿದ್ದನು. ಆದಾಗ್ಯೂ ಬಿಳಾಮನು ಒಟ್ಟಾರೆ ವಿಫಲನಾಗಲಿಲ್ಲ. ಅವನು ಬಾಲಕನಿಗೆ ಸಲಹೆ ನೀಡಿದನು. ಒಂದು ವೇಳೆ ಇಸ್ರಾಯೇಲರನ್ನು ಬಾಲಕನು ಮೋವಾಬ್ಯರ ವಿಗ್ರಹಾರಾಧನೆಯ ಮಾರ್ಗಕ್ಕೆ ನಡೆಸುವವದಾದರೆ, ದೇವರು ಅವರ ಮೇಲೆ ಕೋಪಗೊಳ್ಳುತ್ತಾನೆ, ಬಾಲಕನು ಅವರನ್ನು ದುರ್ಮಾಗಕ್ಕೆ ಎಳೆಯಬಹುದು. ಬಾಲಕನು ಬಿಳಾಮನು ಸಲಹೆಯನ್ನು ಅನುಸರಿಸಿದನು ಇದರ ಪರಿಣಾಮವಾಗಿ ಇಸ್ರಾಯೇಲರು ಪೆಗೋರದ ಬಾಳನನ್ನು ಆರಾಧಿಸಿ ಪಾಪಮಾಡಿದರು. ಅವರಲ್ಲಿ ಅನೇಕರು ಸತ್ತು ಹೋದರು (ಅರಣ್ಯಕಾಂಡ 25:1-9). ಮುಂದೆ ಸ್ತ್ರೀಯರನ್ನು ಯುದ್ಧದಲ್ಲಿ ಅಪಹರಿಸಿ ವಸ್ತುವಿನಂತೆ ಇಟ್ಟುಕೊಳ್ಳಲು ಸೂಚಿಸಿದರು, ಮೋಶೆ ಇದನ್ನು ವಿರೋಧಿಸಿದನು, "ಬಿಳಾಮನ ಆಲೋಚನೆಯನ್ನು ಅನುಸರಿಸಿ ಇಸ್ರಾಯೇಲ್ಯರನ್ನು ಯೆಹೋವನಿಗೆ ದ್ರೋಹಿಗಳನ್ನಾಗಿ ಮಾಡಿ ಸಮೂಹದವರಲ್ಲಿ ಘೋರವ್ಯಾದಿಯುಂಟಾಗುವದಕ್ಕೆ ಇದು ಕಾರಣವಾಯಿತು" (ಅರಣ್ಯಕಾಂಡ 31:16). ಬಿಳಾಮನು ಇಸ್ರಾಯೇಲ್ಯರನ್ನು ನೈತಿಕ ಅದಃಪತನಕ್ಕೆ ನಡೆಸುವದರಲ್ಲಿ ಯಶಸ್ವಿಯಾದನು, ಇವೆರಡೂ ಪೇತ್ರನು ಎದುರಿಸಿದ ಸುಳ್ಳು ಬೋಧಕರನ್ನು ವರ್ಗಿಕರಿಸುತ್ತವೆ.

ಬಿಳಾಮನ ಆಕರ್ಷಕ ಗುಣಲಕ್ಷಣಗಳನ್ನು ಹೊಂದಿದ್ದಾನೆ. ಇವನು ಅನೇಕಾವರ್ತಿ ಹೊಸ ಒಡಂಬಡಿಕೆಯ ಅವಧಿಯಲ್ಲೂ ಯೆಹೂದ್ಯರ ಚರ್ಚೆಯಲ್ಲಿ ಬರುತ್ತಾನೆ. ಬಿಳಾಮನು ಯೆಹೂದ್ಯನಾಗಿರಲಿಲ್ಲ; ಅವನು ದೇವರು ಒಡಂಬಡಿಕೆಯನ್ನು ಮಾಡಿಕೊಂಡಿದ್ದ ಐಗುಪ್ತದಿಂದ ಬಂದವರ ಸಹವಾಸದಲ್ಲಿ ಇರಲಿಲ್ಲ. ಆದಾಗ್ಯೂ ಬಿಳಾಮನು ದೇವರನ್ನು ಆರಾಧಿಸುತ್ತಿದ್ದನು ಮತ್ತು ಅವನನ್ನು ಯೆಹೋವಾ ಎಂದು ಕರೆಯುತ್ತಿದ್ದನು, ಅವರನ್ನು ಇಸ್ರಾಯೇಲರಿಗೆ ತನ್ನನ್ನು ಪರಿಚಯಿಸಿಕೊಂಡ ಒಡಂಬಡಿಕೆಯ ಹೆಸರು ಇದಾಗಿತ್ತು. ಇಸ್ರಾಯೇಲರನ್ನು ಹೊರತು ಪಡಿಸಿ ಒಬ್ಬನೇ ನಿಜವಾದ ದೇವರನ್ನು ಆರಾಧಿಸಿದವರಲ್ಲಿ ಬಿಳಾಮನಂತೆ ಎಷ್ಟು ಜನ ಇದ್ದಾರೆ ಎಂದು ಆಶ್ಚರ್ಯಪಡಿಸುತ್ತದೆ.

ಕೊನೆಯಲ್ಲಿ, ಬಿಳಾಮನು, ಚಿರಪರಿತನಾಗಿದ್ದನು, ದೇವರ ಪ್ರವಾದಿ ಎಂದಲ್ಲ, ಹೆಚ್ಚಿನ ಬೆಲೆಗೆ ತನ್ನನ್ನು ಮಾರಿಕೊಂಡವನು ಎಂಬುದಾಗಿ. ಐಗುಪ್ತದ ಅಲೆಕ್ಸಾಂಡರಿನಲ್ಲಿ ವಾಸಿಸುತ್ತಿದ್ದ ಫಿಲೋ ಪ್ರವಾದಿಯ ಬಾಯಿಂದ ಬಂದ ಈ ಮಾತುಗಳ ಮೂಲಕ ಬಿಳಾಮನ ಅವಿವೇಕವನ್ನು ಹೀಗೆ ಸ್ಪಷ್ಟಪಡಿಸುತ್ತಾನೆ:

> ದೇವರು ತಾನು ಮನುಷ್ಯನಾಗಿರುವಂತೆ ನಟಿಸುತ್ತಾ ಸುಳ್ಳು ಮಾತನಾಡಲು ಶಕ್ತನಲ್ಲ, ಮತ್ತು ಆತನು ಮನುಷ್ಯರಂತೆ ತನ್ನ ಉದ್ದೇಶವನ್ನು ಬದಲಾಯಿಸುವದಿಲ್ಲ.

> ಅವನು ಒಮ್ಮೆ ಮಾತನಾಡಿದ ಮೇಲೆ, ಅವನು ತನ್ನ ಮಾತಿನಂತೆ ನಡೆಯುವದಕ್ಕೆ ಶಕ್ತನಾಗಿಲ್ಲವೋ? ಆತನು ಸಂಪೂರ್ಣವಾಗಿ ಸಂಭವಿಸುವ ವಿಷಯವನ್ನೇ ಹೇಳುತ್ತಾನೆ. ಯಾಕಂದರೆ ಆತನ ಮಾತುಗಳೇ ಆತನ ಕಾರ್ಯಗಳಾಗಿವೆ. ನಾನು, ನಿಜವಾಗಿಯು ದೇಶವನ್ನು ಆಶೀರ್ವದಿಸಲಿಕ್ಕೆ ಬಂದಿದ್ದೇನೆ ಶಪಿಸುವದಕ್ಕೆ ಅಲ್ಲ.[11]

ಪೆರ್ಗಮದ ಸಭೆಗೆ ಯೇಸು ಹೇಳುತ್ತಾನೆ,

> ಆದರೂ ಕೆಲವು ವಿಷಯಗಳಲ್ಲಿ ನಿನ್ನ ಮೇಲೆ ತಪ್ಪು ಹೊರಿಸಬೇಕಾಗುತ್ತದೆ; ವಿಗ್ರಹಕ್ಕೆ ನೈವೇದ್ಯಮಾಡಿದ ಪದಾರ್ಥಗಳನ್ನು ತಿನ್ನುವದರಲ್ಲಿಯೂ ಜಾರತ್ವ ಮಾಡುವದರಲ್ಲಿಯೂ ಇಸ್ರಾಯೇಲ್ಯರು ಮುಗ್ಗರಿಸಿ ಬೀಳಬೇಕೆಂದು ಬಿಳಾಮನು ಬಾಲಾಕನು ಬಾಲಾಕನಿಗೆ ಹೇಳಿದ ಬೋಧನೆಯನ್ನು ಅವಲಂಭಿಸಿರುವವರು ನಿನ್ನಲ್ಲಿದ್ದಾರೆ (ಪ್ರಕಟನೆ 2:14).

**ವಚನ 16.** 2:12ರಲ್ಲಿ ಪೇತ್ರನು ಸುಳ್ಳು ಬೋಧಕರನ್ನು ಧ್ವನಿಯಿಲ್ಲದವರಿಗೆ ಹೋಲಿಸುತ್ತಾನೆ. "ವಿವೇಕಶೂನ್ಯ ಪಶುಗಳು." ಇಲ್ಲಿ ಕನಿಷ್ಟ ಒಂದು ಮೂಕ ಪಶು ಬಿಳಾಮನ ಮಾತನಾಡುವ ಕತ್ತೆ ಇದ್ದಂತೆ ತೋರಿಬರುತ್ತದೆ. ಅದು ಬಿಳಾಮನು ಅಥವಾ ಆತನ ಆತ್ಮೀಕ ಸಂತತಿ ಹೆಚ್ಚಾಗಿ ಉತ್ತಮವಾದ ಜ್ಞಾನವನ್ನು ಪ್ರದರ್ಶಿಸುತ್ತದೆ. ಬಿಳಾಮನ ಕತ್ತೆಯು ಮಾತನಾಡುವ ಕತ್ತೆ ಮೇಲಿಂದ ಮೇಲೆ ಹೇಳುವ ಸತ್ಯವೇದದ ಕಥೆಯಾಗಿದೆ. ಸಂತತಿಯಿಂದ ಮಕ್ಕಳು ಈ ಕಥೆಯನ್ನು ಭಾನುವಾರ ಪಾಠಶಾಲೆಯಲ್ಲಿ ಕಲಿಯುತ್ತಿದ್ದಾರೆ. ಪೇತ್ರನಿಗೆ ಮಾತನಾಡುವ ಕಥೆ ವಿಷಯಲಂಪಟತನ ಮತ್ತು ಲಾಭಕ್ಕಾಗಿ ದೇವರಿಗೆ ಬೆನ್ನು ತೋರಿಸುವ ಜನರ ಮೂರ್ಖತನದ ಸಂಕೇತವಾಗಿದೆ.

ಮಾತನಾಡುವ ಕಥೆ ಜ್ಞಾನೋದಯವನ್ನು ಹೊಂದಿರುವ ಹೊಸ ಒಡಂಬಡಿಕೆಯ ಅವಧಿಯ ಪಾಶ್ಚಿಮಾತ್ಯ ಲೋಕದಲ್ಲಿ ವಾಸಿಸುವವರಿಗೆ ಸ್ವಲ್ಪ ಸಮಸ್ಯೆಯನ್ನು ಉಂಟುಮಾಡಿತು ಅವರು ಜೀವಿಸಿರುವ ಸಿದ್ಧಾಂತದ ಭಾಗವಾಗಿದೆ. ಮಾತನಾಡುವ ಕಥೆಗಿಂತ ವಿಚಿತ್ರವಾದ ಕಥೆಯನ್ನು ಪ್ರಾಚೀನ ಇತಿಹಾಸದಲ್ಲಿ ಕಾಣುವದು ಕಠಿಣ. ಯೋಸೆಫಸ್‌ನಂತರ ಸುಶಿಕ್ಷಿತ ರೀತಿಯಲ್ಲಿ ಗ್ರೀಕ್ ಮಾತನಾಡುವ ಯೆಹೂದ್ಯನು ಒಬ್ಬ ಬರಲಿಕ್ಕಿರುವ ಯೆರೂಸಲೇಮಿನ ದುರ್ಲಕ್ಷಣದ ನಾಶನದ ಕುರಿತಾಗಿ ಯಾಜಕನು ಯಜ್ಞ ಅರ್ಪಿಸಲು ಒಂದು ಕುರಿಮರಿಗೆ ಜನ್ಮವನ್ನು ನೀಡಿತು.[12] ಇತಿಹಾಸತಜ್ಞರು ಸಹಜವಾಗಿ ಕಥೆಯನ್ನು ಅದರ ಮುಖಬಲೆಯ ಮೇಲೆ ತೆಗೆದುಕೊಳ್ಳುತ್ತಾರೆ.

## ಭ್ರಷ್ಟತೆಯ ಗುಲಾಮರಾಗಿರುವಾಗ ಸ್ವತಂತ್ರದ ವಾಗ್ದಾನ (2:17-22)

**[17]ಇವರು ನೀರಿಲ್ಲದ ಬಾವಿಗಳೂ ಬಿರುಗಾಳಿಯಿಂದ ಬಡಿಸಿಕೊಂಡು ಹಾರಿಹೋಗುವ ಮಂಜೂ ಆಗಿದ್ದಾರೆ; ಇಂಥವರ ಪಾಲಿಗೆ ಕಾರ್ಗತ್ತಲೆ ಇಟ್ಟಿರುವದು. [18]ತಪ್ಪಾದ ಮಾರ್ಗದಲ್ಲಿ ನಡೆಯುವವರ ಸಹವಾಸದಿಂದ ಹೊಸದಾಗಿ ತಪ್ಪಿಸಿಕೊಂಡವರ ಸಂಗಡ ಇವರು ಹುರುಳಿಲ್ಲದ ದೊಡ್ಡ ದೊಡ್ಡ ಮಾತುಗಳನ್ನಾಡಿ ಬಂಡುಬಂಡಾದ ದುರಾಶೆಗಳನ್ನು ಹುಟ್ಟಿಸಿ ಅವರನ್ನು ಮರುಳುಗೊಳಿಸುತ್ತಾರೆ. [19]ಸ್ವಾತಂತ್ರ್ಯ ಕೊಡುತ್ತೇವೆಂದು ಅವರಿಗೆ ವಾಗ್ದಾನ ಮಾಡುತ್ತಾರೆ, ಆದರೆ ತಾವೇ ಕೆಟ್ಟತನದ ದಾಸತ್ವದೊಳಗಿದ್ದಾರೆ. ಒಬ್ಬನು ಯಾವದಕ್ಕೆ ಸೋತು ಹೋಗಿರುವನೋ ಅದರ ದಾಸತ್ವದೊಳಗಿರುವನಷ್ಟೆ.**

**[20]ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ವಿಷಯವಾದ ಜ್ಞಾನ ಹೊಂದಿ ಲೋಕದ ಮಲಿನತ್ವಗಳಿಗೆ ತಪ್ಪಿಕೊಂಡವರು ತಿರಿಗಿ ಅವುಗಳಲ್ಲಿ ಸಿಕ್ಕಿಕೊಂಡು ಸೋತುಹೋದರೆ ಅವರ ಅಂತ್ಯಸ್ಥಿತಿಯು ಮೊದಲಿಗಿಂತ ಕೆಟ್ಟದ್ದಾಗಿದೆ. [21]ಅವರು ನೀತಿ ಮಾರ್ಗವನ್ನು ತಿಳಿದು ತಮಗೆ ಕೊಡಲ್ಪಟ್ಟ ಪರಿಶುದ್ಧ ಆಜ್ಞೆಯಿಂದ ತೊಲಗಿಹೋಗುವದಕ್ಕಿಂತ**

**ಆ ಮಾರ್ಗವನ್ನು ತಿಳಿಯದಿದ್ದರೆ ಮೇಲಾಗಿತ್ತು. [22]ನಾಯಿ ತಾನು ಕಕ್ಕಿದ್ದನ್ನು ನೆಕ್ಕುವದಕ್ಕೆ ತಿರುಗಿಕೊಂಡಿತು ಮತ್ತು ತೊಳೆದ ಹಂದಿ ಕೆಸರಿನಲ್ಲಿ ಹೊರಳುವದಕ್ಕೆ ಹೋಯಿತು ಎಂಬ ನಿಜವಾದ ಗಾದೆಗೆ ಸರಿಯಾಗಿ ನಡೆಸಿದ್ದಾರೆ.**

ಅಪೊಸ್ತಲನು ಸುಳ್ಳು ಬೋಧಕರ ಮೇಲೆ ತನ್ನ ಆಕ್ರಮಣವನ್ನು ಭಾವಾವೇಶದಿಂದ ನವೀಕರಿಸುತ್ತಾನೆ. ಅವನು ಕ್ರಿಸ್ತನ ಹೊಸ ವಿಶ್ವಾಸಿಗಳ ಕುರಿತಾಗಿ ಕಳಕಳಿಯುಳ್ಳವನಾಗಿದ್ದಾನೆ. ಸುಳ್ಳು ಬೋಧಕರಿಂದ ಅತ್ತಿತ್ತ ಓಲಾಡುತ್ತಾ ಹೊಸದಾಗಿ ಹುಟ್ಟಿದ ಕ್ರೈಸ್ತರು ತಾವು ಕ್ರಿಸ್ತನನ್ನು ಸ್ವೀಕರಿಸಿದ ಜೀವಿತಕ್ಕಿಂತ ಪೂರ್ವದಲ್ಲಿ ಇದ್ದ ಜೀವಿತಕಿಂತ ಆತ್ಮೀಕವಾಗಿ ಕೆಟ್ಟದ್ದಾಗಿರುವ ಸ್ಥಿತಿಯಲ್ಲಿ ತಮ್ಮನ್ನು ತಾವು ಕಂಡುಕೊಳ್ಳಬಹುದು. ಈ ವಚನಗಳಲ್ಲಿ ಪೇತ್ರನು ಸುಳ್ಳು ಬೋಧಕರ ಸಂದೇಶದ ವಿಷಯದಲ್ಲಿ ನಮಗೆ ಸ್ವಲ್ಪ ಜ್ಞಾನವನ್ನು ನೀಡುತ್ತಾನೆ. ಸಹಜವಾಗಿ, ಸ್ವಾತಂತ್ರ ಅವರ ಮುಖ್ಯವಿಷಯವಾಗಿತ್ತು - ನೈತಿಕ ನಿರ್ಭಂದಗಳಿಂದ ಮತ್ತು ಧರ್ಮಶಾಸ್ತ್ರದಿಂದ ಸ್ವಾತಂತ್ರ ಇಲ್ಲಿ ಹಾಸ್ಯವೆಂದರೆ ಸ್ವಾತಂತ್ರದ ಹೆಸರಿನಲ್ಲಿ ಅವರು ಗುಲಾಮತನದ ನಡತೆಯ ಬಲೆಯಲ್ಲಿ ಸಿಕ್ಕಿಕೊಳ್ಳುತ್ತಿದ್ದಾರೆ. ಪಾಪದ ಬಂಧನ ಕ್ರಿಸ್ತನಿಂದ ಎಂದಿಗೂ ಸಾಧ್ಯವಾಗದ ಜಡಿಸು ವಸೂಲಿಮಾಡುವ ಯಜಮಾನಿಕೆ ಇದೆ.

**ವಚನ 17.** ನೀರಿನ ಕೊರತೆಯಿರುವ ಕಾನಾನನ್ನು ಗಣನೆಗೆ ತೆಗೆದುಕೊಳ್ಳುವಾಗ ಅತೀಯಾದ ಒತ್ತಡದಿಂದ ಬರುತ್ತದೆ. ವಸಂತ ಋತುವಿನ ಕುರಿತು ಸತ್ಯವೇದದಲ್ಲಿ ಮೇಲಿಂದ ಮೇಲೆ ಬರುತ್ತದೆ. ಯೆರೂಸಲೇಮಿನ ಗೋಡೆಯ ಹೊರಗೆ ಕಿದ್ರೋನ್ ಹಳ್ಳದ ಹತ್ತಿದ ಗೀಹೋನ್ ಬುಗ್ಗೆ ಇದೆ ಅಲ್ಲಿ ಸೊಲೊಮೋನನು ಇಸ್ರಾಯೇಲರ ಅರಸನಾಗಿ ಅಭಿಷೇಕವನ್ನು ಹೊಂದಿದ್ದನು (1 ಅರಸುಗಳು 1:33-35) ಮುಂದೆ ಹಿಜ್ಕೀಯನು ಒಂದು ಕೊಳವೆಯನ್ನು ಕಟ್ಟಿದನು ಮತ್ತು ನೀರನ್ನು ಬುಗ್ಗೆಯಿಂದ ಗೋಡೆಯ ಒಳಗೆ ಸಿಲೋವಾ ಕೊಳ್ಳ ಎಂದು ಹೆಸ ರಾಗಿರುವ ಕೊಳ್ಳದೊಳಗೆ ತಿರುಗಿಸಿದನು (2 ಅರಸುಗಳು 20:20; 2 ಪೂರ್ವಕಾಲವೃತ್ತಾಂತ 32:30). ಮಳೆಗಾಲದಲ್ಲಿ ಬುಗ್ಗೆಯು ತುಂಬಿ ಹರೆಯುತಿತ್ತು ಮತ್ತು ಒಣ ಹವಾಮಾನ ಬರುವಾಗ ತಾನು ಪ್ರಯೋಜನವಿಲ್ಲದ್ದು ಎಂದು ತೋರಿಸುತ್ತಿತ್ತು. ನೀರು ಮತ್ತು ಮಂಜಿಲ್ಲದ ಇರುವ ವಸಂತಕಾಲ ಬಿರುಗಾಳಿಗೆ ಬಡಿಸಿಕೊಂಡ ಹಾಗಿರುತ್ತದೆ. ಅದರಂತೆ ಸುಳ್ಳು ಬೋಧ ಕರು ಬಹಳವಾಗಿ ವಾಗ್ದಾನ ಮಾಡುತ್ತಿದ್ದರು ಆದರೆ ಏನನ್ನೂ ಮಾಡುತ್ತಿರಲಿಲ್ಲ.

ಪೇತ್ರನು "ಬಿರುಗಾಳಿಯಿಂದ ಬಡಿಸಿಕೊಂಡು ಹಾರಹೋಗುವ ಮಂಜು ಆಗಿದ್ದಾರೆ" ಎಂದು ಉಲ್ಲೇಖಿಸುವಾಗ ಆತನು ಭಾಷಾಲಂಕಾರವನ್ನು ಸ್ವಲ್ಪ ಮಟ್ಟಿಗೆ ಸ್ಥಳಾಂತರಿಸುತ್ತಾನೆ. ಸುಳ್ಳುಬೋಧಕರು ಪಶ್ಚಿಮ ದಿಕ್ಕಿನಿಂದ ಬೀಸುವ, ಮಳೆಯನ್ನು ವಾಗ್ದಾನ ಮಾಡುವ ಗಾಳಿಯಂತಿದ್ದಾರೆ ಆದರೆ ಹಗಲಿನ ಬಿಸಿಲಿನಲ್ಲಿ ಚದುರಿಹೋಗುತ್ತವೆ. ಎರಡು ಉದಾಹರಣೆಗಳು ಮೊದಲನೆಯ ಪ್ರಭಾವವನ್ನು ನೀಡುವದರ ಅವಿವೇಕತನವನ್ನು ಪ್ರದರ್ಶಿಸುವದಾಗಿದೆ. ಸುಳ್ಳುಬೋಧಕರು ಅಚ್ಚರಿಗೊಳಿಸುವ ಪ್ರಭಾವವನ್ನು ಬೀರುತ್ತಾರೆ ಎಂಬುದರಲ್ಲಿ ಸಂಶಯವಿಲ್ಲ; ಅವರು ಮನದಟ್ಟುಮಾಡುವ ಪದಗಳಿಂದ ಮತ್ತು ಜಯದ ಮಾರ್ಗಗಳಿಂದ ತುಂಬಿರುತ್ತಾರೆ. ಕ್ರೈಸ್ತರು ಸೂಕ್ಷ್ಮವಾದ ಪದಗಳಿಂದ ಉತ್ತಮವಾಗಿ ನಿರ್ವಹಿಸುವ ಬೋಧಕರಿಗೆ ಒಳಗಾಗುತ್ತವೆ. ಕ್ರಿಸ್ತನ ಹಿಂಬಾಲಕರು ಉತ್ತಮ ಜನರಾಗಿರುವದನ್ನು ಕಲಿಯಬೇಕು. ಅದರಂತೆ, ಅವರು ನಂಬುತ್ತಾರೆ ಮತ್ತು ತಮ್ಮನ್ನು ಸಹ ನಂಬಬೇಕೆಂದು ಬಯಸುತ್ತಾರೆ.

ದೇವರ ರಾಜ್ಯದ ಒಂದು ದೊಡ್ಡ ಬೇಡಿಕೆ ಎಂದರೆ ಅದು ಸಮಾಧಾನ - ಪ್ರೀತಿ ಮತ್ತು ಕಾಳಜಿವಹಿಸುವ ಜನರಿಂದ ಕೂಡಿದ ಸಮಾಜವಾಗಿದೆ. ಅದು ಎಲ್ಲಾ ಜನರಿಗೆ ಸಂದೇಹದ ಲಾಭವನ್ನು ನೀಡುವಂತದ್ದಾಗಿದೆ. ಪೇತ್ರನು ತನ್ನ ಓದುಗರನ್ನು ಎಚ್ಚರಿಸುತ್ತಾನೆ, ದೇವರರಾಜ್ಯಕ್ಕಾಗಿ ಒಂದೊಂದು ಸಮಯದಲ್ಲಿ ನಾವು ಹುಬ್ಬೇರಿಸಿ ಪ್ರಶ್ನೆಗಳನ್ನು ಕೇಳಬೇಕು. ಯೋಹಾನನು ಬರೆಯುತ್ತಾನೆ. "ಪ್ರೀಯರೇ, ಅನೇಕ ಮಂದಿ ಸುಳ್ಳು ಪ್ರವಾದಿಗಳು

ಲೋಕದೊಳಗೆ ಬಂದಿರದಲಿಂದ ನೀವು ಆತ್ಮದ ಎಲ್ಲಾ ನುಡಿಗಳನ್ನು ನಂಬದೆ ಆಯಾ ನುಡಿಗಳು ದೇವಲಿಂದ ಪ್ರೇಲಿತವಾದವುಗಳೋ ಅಲ್ಲವೋ ಎಂದು ಅವುಗಳನ್ನು ಪಲೀಕ್ಷಿಸಬೇಕು" (1 ಯೋಹಾನ 4:1). ಪೌಲನು "ಇದಲ್ಲದೆ ನಿಮ್ಮಲ್ಲಿಯೂ ಕೆಲವರು ಎದ್ದು ವ್ಯತ್ಯಾಸ ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವರು" (ಅಪೊಸ್ತಲರ ಕೃತ್ಯಗಳು 20:30). ದೇವದೂತರು ಪಾಪ ಮಾಡಿದಾಗ ದೇವರು ಅವರನ್ನು ಸುಮ್ಮನೆ ಬಿಡದೆ ನರಕಕ್ಕೆ ದೊಬ್ಬಿ ನ್ಯಾಯತೀರ್ಪನ್ನು ಹೊಂದುವದಕ್ಕೆ ಇಡಲ್ಪಟ್ಟರಾಗಿರಬೇಕೆಂದು ಕತ್ತಲೇ ಗುಂಡಿಗಳಿಗೆ ಒಪ್ಪಿಸಿದನು (2:4). ಅಂತ್ಯದಲ್ಲಿ, ಸುಳ್ಳು ಬೋಧಕರು ಅವರಿಗಾಗಿ ಕಾಯ್ದಿರಿಸಿರುವ ಕತ್ತಲೇ ಗುಂಡಿಗಳಿಗೆ ಒಪ್ಪಿಸಿಕೊಡುವರು ಆದರೆ ಅದೇ ಸಮಯದಲ್ಲಿ ವಿಶ್ವಾಸಿಗಳು ಗಾಬರಿಹುಟ್ಟಿಸುವ ಹೊಸ ಸಂದೇಶದೊಂದಿಗೆ ಬಂದ ಜನರಿಗೆ ನ್ಯಾಯತೀರ್ಪನ್ನು ಕಾಯ್ದಿರಿಸುವರು. ಅವರ ಮೊದಲನೆಯ ಪ್ರಭಾವದ ಆಧಾರದ ಮೇಲೆ ನ್ಯಾಯತೀರ್ಪುನ್ನು ನೀಡುವದಲ್ಲ. ಮಳೆ ಗಾಲದಲ್ಲಿ ಬುಗ್ಗೆಗಳು ಅಥವಾ ಮಂಜು ಬಿರುಗಾಳಿಯಿಂದ ಹೊಡೆದುಕೊಂಡು ಹೋದ ಹಾಗೆ, ವಾಗ್ದಾನದಂತೆ ತೋರುವ ಸಂಗತಿಯ ಭಯಂಕರವಾದ ನಾಶನಕ್ಕೆ ಹೊಂದಾಣಿಕೆ ಮಾಡಿಕೊಳ್ಳುವಂತೆ ತೋರಿಬರುತ್ತದೆ.

**ವಚನ 18.** ಪಲಿಣಾಮಕಾರಿಯಾದ ಉಪದೇಶಕ ಸಭೆಗೆ ಆಶೀರ್ವಾದವಾಗಿರಬಹುದು. ಆದರೆ ಸುಳ್ಳು ಬೋಧಕರು ಸಹ ಉತ್ತಮವಾದ ಭಾಷಾ ಶೈಲಿಯನ್ನು ಜನರನ್ನು ದಾಲಿತಪ್ಪಿಸುವದಕ್ಕಾಗಿ ಉಪಯೋಗಿಸುತ್ತಾರೆ. ಪಲಿಣಾಮಕಾರಿಯಾಗಿ ಮಾತನಾಡುವದು ಅದರೊಟ್ಟಿಗೆ ನಿರ್ಭಂದಗಳನ್ನು ಕಿತ್ತೆಸೆಯುವ ಬೇಡಿಕೆ, ಅನೇಕ ಜನರ ಮೇಲೆ ಪ್ರಭಾವ ಬೀರುತ್ತದೆ. ಸುಳ್ಳು ಬೋಧಕರು ವ್ಯರ್ಥವಾದ ಗರ್ವದ ಮಾತುಗಳನ್ನು ಆಡುತ್ತಾರೆ, ಅವರು ದೇಹದ ಆಶೆಗಳ ಆಕರ್ಷಣೆಗೆ ಬೀಳುತ್ತಾರೆ. ಇದೇ "ಆಕರ್ಷಣೆ" ಎಂಬ ಪದವನ್ನು 2:14ರಲ್ಲಿ ಉಪಯೋಗಿಸಲಾಗಿದೆ. ಗ್ರೀಕ್ ಪದವು ಗಾಳದ ಹುಳು ಮತ್ತು ಕೊಕ್ಕೆ ಎಂಬ ಅರ್ಥವನ್ನು ನೀಡುತ್ತದೆ, ಮೊದಲನೆಯ ನೋಟದಲ್ಲಿ ಆಕರ್ಷಕವಾಗಿ ಕಾಣುವಂಥದ್ದು, ಮರಣದ ಸಾಧನವಾಗಬಹುದು.

ಪೇತ್ರನ ಮಾತುಗಳು ವರ್ಣಮಯವಾಗಿವೆ ಮತ್ತು ವಿರಳವಾಗಿವೆ. ಅವುಗಳಲ್ಲಿ ಕೆಲವು ಹೊಸ ಒಡಂಬಡಿಕೆಯಲ್ಲಿ ಕಂಡುಬರುವದಿಲ್ಲ. "ಮಾತನಾಡುವದು" *(phthengomai)* ಎಂಬ ಪದ ಬಿಳಾಮನ ಕತ್ತೆ ಮಾತಾಡುವದು ಈಗಾಗಲೇ ಉಪಯೋಗಿಸಲಾಗಿದೆ (2:16). ಹೊಸ ಒಡಂಬಡಿಕೆಯಲ್ಲಿ ಬೇರೆಕಡೆ ಎಂದರೆ ಅಪೊಸ್ತಲರ ಕೃತ್ಯಗಳು 4:18ರಲ್ಲಿ ಮಾತ್ರ ಉಪಯೋಗಿಸಲಾಗಿದೆ. ಇದು ಕ್ರಮವಾಗಿ ಗಟ್ಟಿಯಾದ ಆಡಂಬರದ ವಾಕ್ಚಾತುರ್ಯವನ್ನು ಹೊಂದಿದೆ. ತನ್ನನ್ನು ತಾನು ಸ್ಪಷ್ಟಪಡಿಸಿಕೊಳ್ಳಲು, ಪೇತ್ರನು ಸುಳ್ಳು ಬೋಧಕರ ಮಾತುಗಳು "ಅಹಂಕಾರದ" ಮಾತುಗಳಾಗಿವೆ ಎಂದು ಹೇಳುತ್ತಾನೆ. ಇದರ ನಾಮ ವಿಶೇಷಣ ಅನೇಕಾವರ್ತಿ ಸರಿಯಾದ ಅಳತೆಗಿಂತ ಹೆಚ್ಚಾಗಿ ಊದಿಕೊಂಡಿರುವದನ್ನು ಸೂಚಿಸುತ್ತದೆ. ಅವರ ಮಾತುಗಳು ಬಹಳ ಗಂಭೀರವಾದ ಮತ್ತು ಬಡಾಯಿಕೊಚ್ಚುವ ಮಾತುಗಳಾಗಿವೆ, ಅದೇ ಸಮಯದಲ್ಲಿ ಅಯೋಗ್ಯವಾಗಿವೆ.

ಅದೇ ಸಮಯದಲ್ಲಿ ಕ್ರಿಸ್ತನಲ್ಲಿ ಹೆಚ್ಚು ಪ್ರಭುದ್ಧರಾದವರು ಸುಳ್ಳು ಬೋಧಕರನ್ನು ಅವರು ಏನಾಗಿದ್ದಾರೆ ಎಂಬುದರಿಂದ ಗುರುತಿಸಬಹುದು. ಅವರಲ್ಲಿರುವ "ಶರೀರದ ಆಶೆಗಳಿಂದ" ಮತ್ತು ವಿಷಯಲಂಪಟನದಿಂದ ಸುಳ್ಳು ಬೋಧಕರು ಆಕರ್ಷಿಸುವದರಲ್ಲಿ ಮತ್ತು ತಪ್ಪಾದ ಮಾರ್ಗದಲ್ಲಿ ನಡೆಯುವವರ ಸಹವಾಸದಿಂದ ತಪ್ಪಿಸಿಕೊಳ್ಳುವವರಿಗೆ ಉರುಲನ್ನು ಒಡುತ್ತಾರೆ. "ವಿಷಯಲಂಪಟನ" ಹೇಗೆ ಕಾರ್ಯಮಾಡುತ್ತದೆ ಎಂಬುದು ಈ ವಾಕ್ಯದಲ್ಲಿ ಗೊತ್ತಾಗುವದಿಲ್ಲ. ಸುಳ್ಳು ಬೋಧಕರು "ಶರೀರದ ಆಶೆ" ಮತ್ತು "ವಿಷಯಲಂಪಟತನ" ಎರಡರ ಆಮಿಶವನ್ನು ಹೊಸ ವಿಶ್ವಾಸಿಗಳಿಗೆ ನೀಡುತ್ತಾರೆ ಎಂದು ಇದರ ಅರ್ಥ. ಇನ್ನೊಂದು ರೀತಿಯಲ್ಲಿ, ಪೇತ್ರನು ಸುಳ್ಳು ಬೋಧಕರು ತಮ್ಮಲ್ಲಿರುವ "ವಿಷಯಲಂಪಟತೆ"

ಯನ್ನೇ ಹೊಸ ವಿಶ್ವಾಸಿಗಳನ್ನು ಮರುಳುಗೊಳಿಸಲು ಉಪಯೋಗಿಸುತ್ತಾರೆ. ಇಷ್ಟಂತೂ ಸ್ಪಷ್ಟವಾಗಿದೆ. ಪ್ರಾಚೀನ ಮತ್ತು ಆಧುನಿಕ ಲೋಕವು, ಯಾರು ಯೌವನಸ್ಥರಾಗಿದ್ದಾರೋ ಮತ್ತು ನಂಬಿಕೆಯಲ್ಲಿ ಅನುಭವವಿಲ್ಲದವರಾಗಿದ್ದಾರೋ ಅವರ ಮೇಲೆ ಪರಿಣಾಮ ಬೀರುತ್ತದೆ. ಅದರಲ್ಲು ವಿಶೇಷವಾಗಿ ಸುಳ್ಳುಬೋಧಕರು ಅವರ ಮೇಲೆ ಆಕ್ರಮಣ ಮಾಡುತ್ತಾರೆ.

**ವಚನ 19.** ವಿಮರ್ಶನಾಗ್ರಂಥಗಳು ಎರಡನೇ ಶತಮಾನದ ಜ್ಞಾನಸಂಬಂಧವಾದ ವಾದವು ಬಹುಬೇಗನೆ ಪೇತ್ರನು ತನ್ನ ವಿರೋಧಿಗಳ ವರ್ಣನೆಯನ್ನು ನೀಡುದ್ದರೆಡೆಗೆ ಹೋಗುತ್ತದೆ. ಜ್ಞಾನವಾದವು ಜಟಿಲವಾದ ಯೋಚನೆಗಳ ವ್ಯವಸ್ಥೆಯಾಗಿದೆ, ಅದು ಈ ಹಂತದಲ್ಲಿ ಪರೀಕ್ಷಿಸಲು ನಮಗೆ ಅಸಾಧ್ಯವಾಗಿದೆ.[13] ಕೆಲವು ಜ್ಞಾನವಾದಿಗಳು ನೈತಿಕ ನಿರ್ಭಂದಗಳಿಂದ ದೂರವಿರುವ ನೀತಿತತ್ವದ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಾರೆ, ಪೇತ್ರನ ಉಲ್ಲೇಖಗಳಿಂದ ಜ್ಞಾನವಾದದ ನೀತಿತ್ವದ ಸ್ವಾತಂತ್ರದ ವಾಗ್ದಾನದಲ್ಲಿ ಹಾಲಿಮುಂದಕ್ಕೆ ಹೋಗುವಾಗ ಅದು ಸಾಕ್ಷಿಗಳಿಂದಾಚೆಗೆ ಹೋಗುತ್ತದೆ. ಒಂದು ವೇಳೆ, ನಾವು ಪ್ರಸ್ತಾವನೆಯಲ್ಲಿ ಸೂಚಿಸಿದ ಹಾಗೆ 2 ಪೇತ್ರನ ಪತ್ರಿಕೆ ಮತ್ತು ಯೂದನ ಗ್ರಂಥ ಯೆಹೂದಿ - ಕ್ರೈಸ್ತರ ಕ್ಷೇತ್ರಗಳಾದ ಪಾಲೇಸ್ತಿನ ಮತ್ತು ಸಿರಿಯಾ ಕ್ಷೇತ್ರದಿಂದ ಉದ್ಭವಿಸುತ್ತವೆ, ಎರಡು ಪತ್ರಗಳು ನಾವು ಸ್ವಲ್ಪ ಮಟ್ಟಿಗೆ ತಿಳಿದಿರುವ ಯೆಹೂದಿ ಕ್ರೈಸ್ತತ್ವದಿಂದ ಕ್ರಿ.ಶ. 66-70ರಲ್ಲಿ ಯೆಹೂದ್ಯರ ಯುದ್ಧದ ವರೆಗೆ ನಡೆಸುತ್ತವೆ.

ಪೌಲನ ಪ್ರಯಾಣ ದಮಸ್ಕದಲ್ಲಿ ಯೆಹೂದ್ಯರು ಎಂಬ ಗ್ರಹಿಕೆ (ಅಪೊಸ್ತಲರ ಕೃತ್ಯಗಳು 9:1, 2) ಕ್ರೈಸ್ತರ ಸಂದೇಶ ಆ ಕ್ಷೇತ್ರದಲ್ಲಿರುವ ಯೆಹೂದ್ಯರ ಸಮುದಾಯದಲ್ಲಿ ಆದಿಯಿಂದ ಒಳಮಾರ್ಗಗಳನ್ನು ಮಾಡಿಕೊಂಡಿತ್ತು ಎಂಬುದನ್ನು ಸೂಚಿಸುತ್ತದೆ. ಮುಂದೆ ಯಾಕೋಬ, ಕ್ರೈಸ್ತತ್ವ, ಸಿರಿಯಾ ಮತ್ತು ನಾಗಾ ಹಮದಿ ಸಲಕರಣೆಗಳಿಂದ ಬೆಳೆಯುತ್ತಿರುವ ಜ್ಞಾನವಾದ ಇವುಗಳ ಮಧ್ಯದಲ್ಲಿ ಸಂಬಂಧವಿದೆ.[14] ಕ್ರೈಸ್ತತ್ವವನ್ನು ಪರಿಚಯಿಸಿದ ನಂತರದ ಮೊದಲಿನ ಹಲವು ಶತಮಾನಗಳಲ್ಲಿ ಸಿರಿಯಾ/ಪಾಲೇಸ್ತಿನದಲ್ಲಿ ನಂಬಿರುವ ಕೆಲವು ಯೆಹೂದ್ಯರು ಸುನ್ನತಿಯಿಂದ ಮತ್ತು ಮೋಶೆಯ ಧರ್ಮಶಾಸ್ತ್ರದ ಇತರ ಆಚರಣೆಗಳಿಂದ ಸ್ವಾತಂತ್ರವನ್ನು ತೆಗೆದುಕೊಂಡು ಹೋದರು, ಅವರು ಕ್ರೈಸ್ತರನ್ನು ನಿರ್ಭಂಧಿಸುವಂತ ಯಾವುದೇ ಧರ್ಮಶಾಸ್ತ್ರವಿಲ್ಲ ಎಂದು ನಿರ್ವಹಿಸುವ ಅತಿರೇಕಕ್ಕೆ ತಲುಪಿದರು. ಅವರು ಬಹುಶಃ ಆ ಅವಧಿಯಲ್ಲಿ ಸಾಮಾನ್ಯವಾಗಿದ್ದ ವಿಗ್ರಹಾರಾಧನೆಯ ತತ್ವಕ್ಕೆ ಒಳಗಾಗಿರಬಹುದು. ಆ ಸಮಯದಲ್ಲಿ ಅವರ ಬೋಧನೆ ಜ್ಞಾನವಾದದ ವ್ಯವಸ್ಥೆಗೆ ಕೊಡುಗೆಯನ್ನು ನೀಡಿತು. ಆದರೆ ಪೇತ್ರನು ಬರೆಯುವಾಗ ಇದ್ದ ಸನ್ನಿವೇಶವು ಆ ಪ್ರಕ್ರಿಯೆಯ ಪ್ರಾರಂಭ ಮಾತ್ರವಾಗಿತ್ತು.

ಸುಳ್ಳು ಬೋಧಕರು ಹೊಸ ಕ್ರೈಸ್ತರನ್ನು **ಸ್ವಾತಂತ್ರ್ಯ ಕೊಡುತ್ತೇವೆಂದು ಅವರಿಗೆ ವಾಗ್ದಾನ ಮಾಡುತ್ತಾ** ಅವರನ್ನು ಆಕರ್ಷಿಸುತ್ತಾರೆ. "ಸ್ವಾತಂತ್ರ್ಯ" ಹೊಸ ಒಡಂಬಡಿಕೆಯಲ್ಲಿ ಒಂದು ಪ್ರಾಮುಖ್ಯವಾದ ಪದವಾಗಿದೆ. ಸತ್ಯವು ತನ್ನ ಜನರನ್ನು ಬಿಡುಗಡೆಗೊಳಿಸುತ್ತದೆ ಎಂದು ಯೇಸು ಹೇಳಿದ್ದಾನೆ (ಯೋಹಾನ 8:32, 33). ಪೌಲನು ಧೈರ್ಯವಾಗಿ "ನಾವು ಸ್ವತಂತ್ರ್ಯರಾಗಬೇಕೆಂದು ಯೇಸು ನಮ್ಮನ್ನು ಬಿಡುಗಡೆಗೊಳಿಸಿದ್ದಾನೆ" (ಗಲಾತ್ಯ 5:1). ಗುಲಾಮಗಿರಿಯನ್ನು ಒತ್ತಾಯ ಪೂರ್ವಕವಾಗಿ ಹೇಳಿರಬಹುದು, ಆದರೆ ಜನರು ಸ್ವಾತಂತ್ರ್ಯವನ್ನು ಕಳೆದು ಕೊಳ್ಳಲು ಅದೊಂದೇ ಮಾರ್ಗವಲ್ಲ. ಕೆಲವರು ಅಜ್ಞಾನದಿಂದ, ಇತರರು ಕೃತಿಮವಾದ ಕಾನೂನುಗಳು ಮತ್ತು ನಿಯಮಗಳಿಂದ ಮತ್ತು ಇನ್ನೂ ಕೆಲವರು ಸ್ವಯಂ ತೃಪ್ತಿಯಿಂದಾಗಿ ಮತ್ತು ಶರೀರದ ಆಶೆಗಳನ್ನು ಅನುಸರಿಸುವದರಿಂದಾಗಿ ಗುಲಾಮರಾಗುತ್ತಾರೆ. ಪೇತ್ರನು ಹೇಳುತ್ತಾನೆ ಸ್ವಾತಂತ್ರ್ಯವನ್ನು ವಾಗ್ದಾನಮಾಡಿದ ಅದೇ ಬೋಧಕರು ತಾವೇ ... ಭ್ರಷ್ಟತನಕ್ಕೆ ಗುಲಾಮರಾಗಿದ್ದಾರೆ.

ಅಪೊಸ್ತಲನು ಅದ್ಭುತವಾದ ಮಾನಸಿಕ ಅಂತರ್ಜ್ಞಾನವನ್ನು ಓದುಗರಿಗೆ ನೀಡಿದ್ದಾನೆ **ಒಬ್ಬನು ಯಾವುದಕ್ಕೆ ಸೋತು ಹೋಗಿರುವನೋ ಅದರ ದಾಸತ್ವದೊಳಗಿರುವನಷ್ಟೆ.**

ಪೇತ್ರನ ಗಂಭೀರವಾದ ದಾಸತ್ವ ಮತ್ತು ಪಾಪವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನು. ಲೈಂಗಿಕ ಸ್ವಂಚಂದ ಪ್ರವೃತ್ತಿ ಸಹ ಗುಲಾಮತನಕ್ಕೆ ನಡೆಸುತ್ತದೆ. ಇದು ಜನರನ್ನು ಕುಟುಂಬದ ಸುರಕ್ಷಿತತೆಯಿಂದ ಮತ್ತು ತಮ್ಮ ಮಕ್ಕಳು ಯೌವನಾವಸ್ಥೆಗೆ ಬೆಳೆದುಬರುವದನ್ನು ನೋಡುತ್ತಾ ಆನಂದವನ್ನು ಕದ್ದುಕೊಳ್ಳುತ್ತದೆ, ತಮ್ಮ ಲೈಂಗಿಕ ಹವ್ಯಾಸಗಳಿಗೆ ಗುಲಾಮರಾದ ಜನರು ತಮ್ಮ ಜೀವನ ಶೈಲಿಯಿಂದಾಗಿ ಕೆಲವೊಮ್ಮೆ ನಿರೀಕ್ಷೆಯಿಲ್ಲದ ನಾಶನದ ಪರಿಣಾಮವನ್ನು ಹೊಂದುತ್ತಾರೆ. ಅವರು ಹೊರಗೆ ಬರಲು ಪ್ರಯತ್ನಿಸುತ್ತಾರೆ, ಆದರೆ ಅವರು ಎಷ್ಟರಮಟ್ಟಿಗೆ ಸಿಕ್ಕಿಕೊಂಡಿರುತ್ತಾರೆಂದರೆ ಅವರಿಗೆ ಹೊರಗೆ ಬರುವ ಮಾರ್ಗವು ತಿಳಿಯುವದಿಲ್ಲ. ಇದನ್ನೇ ದುರಾಶೆ, ಮಧ್ಯವ್ಯಸನಿ ಅಥವಾ ಮಾದಕದ್ರವ್ಯಗಳ ಸೇವನೆ ಮತ್ತು ಕಹಿಭಾವನೆಗೆ ಸಹ ಹೇಳಬಹುದು. ಜನರ ಮೇಲೆ ಯೇಸು ಹಾಕುವ ನಿರ್ಭಂದನೆಗಳು ಅವರ ಉತ್ತಮವಾದ, ಸಂತೋಷಕರವಾದ ಮತ್ತು ತೃಪ್ತಿಯ ಜೀವಿತಕ್ಕಾಗಿ.

**ವಚನ 20.** ಕ್ರಿಸ್ತನ ಹೊಸ ವಿಶ್ವಾಸಿಗಳ ಮೇಲೆ ಸುಳ್ಳುಬೋಧಕರ ಪ್ರಭಾವದ ಕುರಿತು ಕಾಳಜಿ ತೋರಿಸುವದನ್ನು ಪೇತ್ರನು ಮುಂದುವರೆಸುತ್ತಾನೆ. ಈ ವಾಕ್ಯಭಾಗದಲ್ಲಿ ವ್ಯಾಕರಣಕ್ಕೆ ಅನುಸಾರವಾಗಿ ಸರ್ವನಾಮಗಳು **ತಪ್ಪಿಸಿಕೊಂಡ ಮೇಲೆ** ಮತ್ತು **ತಿರುಗಿ ಅವುಗಳಲ್ಲಿ ಸಿಕ್ಕಿಕೊಂಡರೆ** ಇವುಗಳನ್ನು ಸುಳ್ಳು ಬೋಧಕರಾದ ಅವರಿಗೆ ಅಥವಾ ಆತ್ಮೀಕವಾಗಿ ಪ್ರಬುದ್ಧರಾಗಿರುವವರ ಮೇಲೆ ಅವರು ಪ್ರಭಾವಬೀರುವಂತವರನ್ನು ಉಲ್ಲೇಖಿಸುತ್ತವೆ. ಅಪೊಸ್ತಲನು ಹೇಳಿರುವದು ಅಪೊಸ್ತಲರಿಗೆ ಸಹ ಸಮಾನವಾಗಿ ಅನ್ವಯಿಸುತ್ತದೆ, ಅವರು ತಮ್ಮ ಕ್ರಾಂತಿಯಲ್ಲಿ ಸ್ಥಾಪನೆಯಾಗಿದ್ದಾರೆ ಅಥವಾ ತಪ್ಪಾಗಿ ನಡೆಸಲ್ಪಟ್ಟ ಮತ್ತು ತಪ್ಪಾದ ಮಾಹಿತಿಯನ್ನು ಹೊಂದಿದ ಹೊಸ ಕ್ರೈಸ್ತರಿಗೆ ಸಂಬಂಧಿಸಿದ್ದಾಗಿದೆ. ಎರಡು ಸಂಗತಿಗಳಲ್ಲಿ, **ಅವರ ಅಂತ್ಯ ಸ್ಥಿತಿಯು ಮೊದಲಿಗಿಂತ ಕೆಟ್ಟದ್ದಾಗಿದೆ.** ಆದಾಗ್ಯೂ, ಈ ವಚನವು ಎಚ್ಚರಿಕೆಯನ್ನು ನೀಡುತ್ತದೆ; ಇದು ಕಳಕಳಿಯನ್ನು ವ್ಯಕ್ತಪಡಿಸುತ್ತದೆ. ಸುಳ್ಳು ಬೋಧಕರಾದ ಇವರಿಗೆ ಈ ಎಚ್ಚರಿಕೆಯು ಬಹಳ ತಡವಾಗಿದೆ. ಅವರು "ನಾಸವಾಗುತ್ತಾರೆ" (2:12). ಅವರು ಕಲೆಗಳನ್ನು ಮತ್ತು ಕಳಂಕವನ್ನು ಹೊಂದಿದವರಾಗಿದ್ದಾರೆ (2:13, 14). ಈ ವಚನದಲ್ಲಿ ಅಸ್ಥಿರವಾದ ಆತ್ಮಗಳಿಗೆ ಬರುವ ಎಚ್ಚರಿಕೆ (2:14), ವಿಶೇಷವಾಗಿ ಹೊಸ ವಿಶ್ವಾಸಗಳಿಗೆ. ಒಂದು ವೇಳೆ ಈ ಕ್ರೈಸ್ತರು ಅಪೊಸ್ತಲರನ್ನು ವಿರೋಧಿಸುವ ಬೋಧಕರ ನಡೆಸುವಿಕೆಯನ್ನು ಅನುಸರಿಸಿದ್ದಲ್ಲಿ, ಅವರು ಸುವಾರ್ತೆಯನ್ನು ಕೇಳುವ ಪೂರ್ವದಲ್ಲಿದ್ದ ಸ್ಥಿತಿಗಿಂತ ಕೆಟ್ಟದ್ದಾಗಿರುವ ಸ್ಥಿತಿಯನ್ನು ಅವರು ಹೊಂದಿಕೊಳ್ಳುತ್ತಾರೆ.

ಪೇತ್ರನಿಗೆ ಕ್ರೈಸ್ತರಾಗಿರುವದೆಂದರೆ ಲೋಕದ **ಮಲಿನತ್ವದಿಂದ** ದೂರವಾಗಿರುವದು. "ಮಲಿನತ್ವ" *(miasma)* ಹೊಸ ಒಡಂಬಡಿಕೆಯಲ್ಲಿ ಮಾತ್ರ ಕಂಡುಬರುತ್ತದೆ. ಇದು ನೈತಿಕ ಮಲೀತ್ವವನ್ನು, ನಾಚಿಕೆತರುವ ಕಾರ್ಯಗಳನ್ನು, ಸ್ವತಃ ಮತ್ತು ಇತರರಿಗೆ ನಾಶನ ತರುವ ಕಾರ್ಯಗಳನ್ನು ಉಲ್ಲೇಖಿಸುತ್ತದೆ. "ಲೋಕ" ಅಸಂಖ್ಯಾತ ಜನರ ನಡತೆ, ಭ್ರಷ್ಟತನದಲ್ಲಿ ನಡೆಯುವ ಪ್ರವೃತ್ತಿಯನ್ನು ಹೊಂದಿದೆ. ಲೋಕವು ವೇದನೆ, ದೇವರ ಮತ್ತು ಸಮಾನವಯಸ್ಕರ ದೃಷ್ಟಿಯಲ್ಲಿ ಅಗೌರವನ್ನು ಎದುರಿಸುತ್ತಿದೆ. ಒಬ್ಬನ ತನ್ನ ಆತ್ಮದ ಮೇಲೆ ಕೇಂದ್ರಿಕರಿಸಿ ಜೀವಿಸುವ ಅಭಿರುಚಿಯನ್ನು ನಾಶಮಾಡುತ್ತಿದೆ. ಒಬ್ಬ ವ್ಯಕ್ತಿ ಕ್ರಿಸ್ತನನ್ನು ಆಲಿಸುವಾಗ ಅವನು ಆತನನ್ನು ಪಾಪದ ಭಯಂಕರತೆಯಿಂದ ಎತ್ತುತದೆ. ಅವನು ದೇವರೊಂದಿಗೆ ಮರುಸಂಧಾನಮಾಡಿಕೊಳ್ಳುತ್ತಾನೆ. ಆತನು ಅದು ವಾಗ್ದಾನಮಾಡುವ ತಮಾಷೆಯಿಂದ ಅವರ ಸ್ವಾರ್ಥದ ಮಾರ್ಗಗಳಿಂದ ಅದರ ಪರಿಶುದ್ಧತೆಯ ಅವಮಾನದಿಂದ, ಭ್ರಷ್ಟತನದಿಂದ ಮತ್ತು ಯೋಜನೆಗಳಿಂದ ತಪ್ಪಿಸಿಕೊಳ್ಳುತ್ತಾನೆ. ಕ್ರಿಸ್ತನಲ್ಲಿ ನಂಬಿಕೆಯಿಡುವದೆಂದರೆ ಅವರ ಅವಮಾನದಿಂದ ತಪ್ಪಿಸಿಕೊಳ್ಳುವದಾಗಿದೆ.

ಲೋಕದ ಭ್ರಷ್ಟೆಯಿಂದ ತಪ್ಪಿಸಿಕೊಳ್ಳುವ ಮಾರ್ಗವೆಂದರೆ ಪೇತ್ರನು ನೀಡಿದ ಸಂದೇಶ ಮತ್ತು ಇತರ ಅಪೊಸ್ತಲರ ಸಾಕ್ಷಿ "ಜ್ಞಾನವಾಗಿದೆ" ಅದರ ಮೂಲವು ಕ್ರಿಸ್ತನಾಗಿದ್ದಾನೆ.

ಇತರರು ಜ್ಞಾನವನ್ನು ಕೇಳುತ್ತಾರೆ ಆದರೆ ಅವರ ಜ್ಞಾನವು ಸ್ವಾರ್ಥ ಸೇವೆಯ ಜಾಣತನವಾಗಿ ವಾಗಿದೆ. ಯೋಹಾನ ಮಾತಿನಲ್ಲಿ ವಿಶ್ವಾಸಿಗಳು "ಆತ್ಮಗಳನ್ನು ಪರೀಕ್ಷಿಸಬೇಕು" (1 ಯೋಹಾನ 4:1). ಬೋಧಕರನ್ನು ಆಲಿಸುವ ಮತ್ತು ಅವರಿಂದ ಕಲಿಯುವ ಸಮಯ ಒಂದಿದೆ, ಆದರೆ ವಿಮರ್ಶಿಸದೇ, ಆಲಿಸುವದು ಒಬ್ಬನನ್ನು "ಮತ್ತೇ ತೊಡಕಿನಲ್ಲಿ" ಸಿಕ್ಕಿಸುತ್ತದೆ ಮತ್ತು ಅವರ ತಪ್ಪಿಸಿಕೊಂಡಿರುವ ಅದೇ ಮಲಿನತ್ವವು ಅವರನ್ನು ಜಯಿಸಲು ಸಹಾಯಮಾಡುತ್ತದೆ. ಲೋಕ ದಿಂದ ಕ್ರಿಸ್ತನು ನಿರ್ದೇಸಿಸುವ ಜೀವಿತಕ್ಕೆ ಆಗತಾನೇ ಪರಿವರ್ತನೆಯನ್ನು ಹೊಂದಿದವರು ಸುಳ್ಳು ಬೋಧಕರ ಮಾತುಗಳಿಗೆ ಬಲಿಯಾಗುವ ಸಂಬವ ಇರುತ್ತದೆ. ವಿಶೇಷವಾಗಿ ಬೇಡಿ ಕೆಗಳು ಇಲ್ಲದೇ ಇರುವ ಸರಳವಾದ ರಕ್ಷಣೆನ್ನು ವಾಗ್ದಾನ ಮಾಡುವವನಿಗೆ.

ಪೇತ್ರನು ಅನಿರೀಕ್ಷಿತವಾಗಿ ಲೋಕಕಕ್ಕೆ ಹಿಂತಿರುಗುವವರ ವಿಚಾರದಲ್ಲಿ ಮಾತನಾಡುತ್ತಾನೆ. "ಅವರ ಕೊನೆಯ ಸ್ಥಿತಿಯು ಮೊದಲನೆಯ ಸ್ಥಿತಿಗಿಂತ ಕೆಟ್ಟದ್ದಾಗಿದೆ." ಅವರು ಕ್ರೈಸ್ತರಾಗುವ ಪೂರ್ವದಲ್ಲಿ ಅವರು ತಪ್ಪಿಹೋಗಿದ್ದರು, ಕೋಪಕ್ಕೆ ಗುರಿಯಾದ ಮಕ್ಕಳಾಗಿದ್ದರು, ನಿರೀಕ್ಷೆಯಿಲ್ಲದವರಾಗಿದ್ದರು. ಅವರು ಲೋಕಕಕ್ಕೆ ಹಿಂತಿರುಗಬೇಕೋ, ಸಂಗತಿಗಳು ಹೇಗೆ ಕೆಟ್ಟದ್ದಾಗುತ್ತವೆ? ಅವರ ಎರಡನೆಯ ಸ್ಥಿತಿ ಹೇಗೆ ಕೆಟ್ಟದ್ದಾಗುತ್ತದೆ ಎಂಬುದನ್ನು ನಾವು ಕೇವಲ ಊಹಿಸಬಹುದು. ಯೇಸು, "ಯಾವನಿಗೆ ಬಹಳವಾಗಿ ಕೊಟ್ಟಿದೆಯೋ ಅವನ ಕಡೆಯಿಂದ ಬಹಳವಾಗಿ ನಿರೀಕ್ಷಿಸಲ್ಪಡುವದು, ಇದಲ್ಲದೆ ಯಾವನ ವಶಕ್ಕೆ ಬಹಳವಾಗಿ ಒಪ್ಪಿಸಿದೆಯೋ ಅವನ ಕಡೆಯಿಂದ ಇನ್ನೂ ಹೆಚ್ಚಾಗಿ ಕೇಳುವದು" (ಲೂಕ 12:48). "ಯಾರೂ ಕರ್ತನು ಮತ್ತು ರಕ್ಷಕನೂ ಆದ ಯೇಸು ಕ್ರಿಸ್ತನ ಜ್ಞಾನದಲ್ಲಿ ಬರುತ್ತಾರೋ ಅವರಿಗೆ ಬಹಳವಾಗಿ ಕೊಡಲ್ಪಡುವದು" (ಇಬ್ರಿಯ 6:4). ಕರ್ತನು ತಿರುಗಿ ಬರುವಾಗ ಆಗುವ ನ್ಯಾಯತೀರ್ಪಿನಲ್ಲಿ, ಆತನು ತಪ್ಪಿಹೋದ ಅವಕಾಶಗಳು ಮತ್ತು ಮುರಿದುಹೋದ ವಾಗ್ದಾನಗಳ ವಿಷಯದಲ್ಲಿ ಮಾತನಾಡುತ್ತಾನೆ. ಅವನ ಶಿಕ್ಷೆಯೂ ಯೇಸುವಿನ ಬಳಿಗೆ ಬರಲಿಕ್ಕೆ ಅವಕಾಶವನ್ನು ಹೊಂದಿರುವ ಕೆಲವರಿಗಿಂತ ಹೇಗೂ ಬಹಳ ಗಂಭೀರವಾಗಿರುತ್ತದೆ. ಆತನ ಶಿಕ್ಷೆಯು ಹೇಗೆ ಬಹಳ ಗಂಭೀರವಾಗಿರುತ್ತದೆ ಎಂಬುದನ್ನು ಕೇವಲ ಊಹಿಸದೇ ಇರುವದು ನಮಗೆ ಉತ್ತಮ ವಾಗಿದೆ.

ಯೇಸುವಿನ ಮತ್ತು ಅಪೊಸ್ತಲರ ಬೋಧನೆಯಿಂದ ಯಾವುದು ಸ್ಪಷ್ಟವಾಗಿದೆ, ಕ್ರಿಸ್ತನಲ್ಲಿರುವವರು, ತಾವು ಆಯ್ಕೆ ಮಾಡಿಕೊಳ್ಳುತ್ತಿರುವ ಹಾಗೆ ರಕ್ಷಕನಿಗೆ ಬೆನ್ನು ಹಾಕುತ್ತಾರೋ, ಕ್ರಿಸ್ತನಲ್ಲಿರುವದು ಅವರು ಕ್ರಿಸ್ತನಲ್ಲಿ ನೆಲೆಗೊಳ್ಳುತ್ತಾರೆ ಎಂಬುದಕ್ಕೆ ಭರವಸೆಯನ್ನು ನೀಡುವದಿಲ್ಲ. ಜನಪ್ರಿಯವಾಗಿರುವ ಒಂದು ಸಿದ್ಧಾಂತ ಈ ರೀತಿಯಾಗಿದೆ "ಒಮ್ಮೆ ರಕ್ಷಿಸಲ್ಪಟ್ಟವರು ಯಾವಾಗಲೂ ರಕ್ಷಿಸಲ್ಪಟ್ಟವರೆ" ಇದು ಸತ್ಯವೇದದ ಬೋಧನೆಯಲ್ಲಿ. ಪೌಲನು ಇತರರಿಗೆ ಬೋಧಿಸಿದ ನಂತರ ತಾನೇ "ತೊರೆದುಬಿಟ್ಟವನಾಗವನೋ" ಎಂದು ತನ್ನ ಕಳಕಳಿಯನ್ನು ವ್ಯಕ್ತಪಡಿಸಿ (1 ಕೊರಿಂಥ 9:27; KJV). ಯೇಸು ದುರಾತ್ಮನನ್ನು ಹೊಂದಿದ್ದ ಒಬ್ಬ ಮನುಷ್ಯನ ಕುರಿತಾಗಿ ಮಾತನಾಡುತ್ತಾನೆ. ಆ ಆತ್ಮವು ಹೊರಟು ಹೋಗಿ ಅದಕ್ಕೆ ಸರಿಯಾದ ವಾಸಸ್ಥಾನವು ಸಿಗದೇ ಇರುವ ಕಾರಣ ಅದು ಈ ಮನುಷ್ಯನು ತನ್ನ ಜೀವಿತದಲ್ಲಿ ಉತ್ತಮವಾದದ್ದೇನನ್ನು ಸಂಗ್ರಹಿಸಿರಲಿಕ್ಕಿಲ್ಲ ಎಂದು ಭಾವಿಸಿ ನೋಡುವದಕ್ಕಾಗಿ ತಿರುಗಿ ಬಂತು. ಆ ಮನುಷ್ಯನು ಈ ಆತ್ಮವು ತಿರುಗಿ ಬರುತ್ತದೆಂದು ಸಿದ್ಧತೆಯನ್ನು ಮಾಡಿಕೊಂಡು ಅದನ್ನು ಸ್ವೀಕರಿಸುವದಕ್ಕೆ ಕಾದಿರುವದನ್ನು ನೋಡಿ ಅದು ತನ್ನೊಂದಿಗೆ ಕರೆ ತಂದಿದ್ದ ಏಳು ದುರಾತ್ಮಗಳೊಂದಿಗೆ ಆತನನ್ನು ಪ್ರವೇಶಿಸಿತು. ಸಾಮ್ಯವು ಹೇಳುತ್ತದೆ ಒಬ್ಬನು ಶುದ್ಧನಾಗಿರಬಹುದು ಮತ್ತು ನಂತರ ಆತನು ತನ್ನ ಪೂರ್ವದ ಪಾಪಗಳಿಗೆ ಹಿಂತಿರುಗಬಹುದು (ಮತ್ತಾಯ 12:43-45).

**ವಚನ 21.** ಮುಂದಿನ ವಚನದಲ್ಲಿ ಅಪೊಸ್ತಲನು ಅಂತಿಮ ವಾಕ್ಯಭಾಗವನ್ನು ವಿಸ್ತರಿಸಿದ್ದಾನೆ ಮತ್ತು ಸ್ಪಷ್ಟೀಕರಿಸಿದ್ದಾನೆ. ಆತನು ಅದನ್ನು ಅರಿತಿರುವದರ ಕುರಿತಾಗಿ ಎರಡು

ಸಾರಿ ಮಾತನಾಡುತ್ತಾನೆ. ಆತನ ಕಳಕಳಿ "ಯಾರು ಸರಳವಾಗಿ ತಪ್ಪಿಸಿಕೊಳ್ಳುತ್ತಾರೋ ಅವರಿಗಿಂತ ಯಾರು ಪಾಪದಲ್ಲಿ ಜೀವಿಸುತ್ತಾರೋ ಅವರ ಕುರಿತಾಗಿದೆ" (2:18). ಕ್ರಿಸ್ತನನ್ನು ತಿಳಿದುಕೊಳ್ಳುವದೆಂದರೆ ನಮ್ಮ ನಂಬಿಕೆಯನ್ನು ಆತನ ಮೇಲೆ ಇಡುವದು, ಆತನ ಬಳಿಗೆ ಬರುವದು, ಆತನಿಗೆ ವಿಧೇಯರಾಗುವದು, ಆತನಲ್ಲಿ ಜೀವಿತವನ್ನು ಕಂಡುಕೊಳ್ಳುವದಾಗಿದೆ. ಸುಳ್ಳು ಬೋಧಕರನ್ನು ಅನುಸರಿಸುವವರು, **ನೀತಿ ಮಾರ್ಗವನ್ನು ತಿಳಿದು ತಮಗೆ ಕೊಡಲ್ಪಟ್ಟ ಪರಿಶುದ್ಧ ಆಜ್ಞೆಯಿಂದ ತೊಲಗಿಹೋಗುವದಕ್ಕಿಂತ ಆ ಮಾರ್ಗವನ್ನು ತಿಳಿಯದಿದ್ದರೆ ಮೇಲಾಗಿತ್ತು.** ಅಪೊಸ್ತಲರ ಕೃತ್ಯದಲ್ಲಿ ಆತನ ಎರಡನೆಯ ಪ್ರಬಂಧವನ್ನು, ಲೂಕನು ಅನೇಕಾವರ್ತಿ ಯೇಸು ಕ್ರಿಸ್ತನ ಸಭೆ ಸರಳವಾಗಿ "ಮಾರ್ಗವಾಗಿದೆ" ಎಂದು ಕರೆಯುತ್ತಾನೆ (ಅಪೊಸ್ತಲರ ಕೃತ್ಯಗಳು 9:2; 19:9, 23; 22:4; 24:22). ಪೇತ್ರನಿಗೆ ಅದು "ಸತ್ಯದ ಮಾರ್ಗಮಾಗಿದೆ" (2 ಪೇತ್ರ 2:2). "ಸರಿಯಾದ ಮಾರ್ಗ" (2 ಪೇತ್ರ 2:15) ಮತ್ತು "ನೀತಿಯ ಮಾರ್ಗವಾಗಿದೆ."

"ಪವಿತ್ರ ಆಜ್ಞೆಗಳು" ಸೂಚನೆಗಾಗಿ ಇವೆ, ಆಜ್ಞೆಗಳನ್ನೊಳಗೊಂಡು ಮತ್ತು ಪರಿಶುದ್ಧ ಜೀವಿತಕ್ಕೆ ಅವಶ್ಯವಿರುವ ಸಂಗತಿಗಳು ಅವು ಸುವಾರ್ತೆಯಲ್ಲಿ ಸ್ವಾಭಾವಿಕವಾಗಿವೆ. ಪೇತ್ರನು ಸುವಾರ್ತೆಗೆ ಬದಲಾಗಿ "ಆಜ್ಞೆ" ಎಂಬ ಪದವನ್ನು ಉಪಯೋಗಿಸುತ್ತಾನೆ ಯಾಕೆಂದರೆ ಸುಳ್ಳು ಬೋಧಕರು ಎಬ್ಬಿಸಿದ ವಿಷಯ ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ್ದಾಗಿದೆ. ಅವರು "ಸ್ವಾತಂತ್ರ್ಯದ" ವಾಗ್ದಾನವನ್ನು ಹೊಂದಿದ್ದರು ಆದರೆ ಅವರು "ಭ್ರಷ್ಟತನದ ಗುಲಾಮರಾಗಿದ್ದರು" (2:19). ಕ್ರಿಸ್ತನಿಂದ ಹಿಂತಿರುಗುವದು ಮತ್ತು ತಮ್ಮ ಮೊದಲ ಪ್ರೀತಿಯನ್ನು ಬಿಟ್ಟು ಬಿಡುವದರ ಮೊದಲ ಹೆಜ್ಜೆ (ಪ್ರಕಟನೆ 2:4). ಧರ್ಮಶಾಸ್ತ್ರದ ನಿರ್ಬಂದಗಳನ್ನು ಗೇಲಿಮಾಡುವದು. ಸುವಾರ್ತೆಯ ಬೇಡಿಕೆಗಳು ನಿರಂಕುಶವಾದವುಗಳಲ್ಲ, ದೇವರು ತನ್ನ ಜನರು ತಮ್ಮ ಪ್ರಾಮಾಣಿಕತೆಯನ್ನು ಸಿದ್ಧಪಡಿಸಲು ಕೆಲವು ಕಠಿಣ ಪರಿಸ್ಥಿತಿಗಳನ್ನು ದಾಟಿಬರಬೇಕು ಎಂದು ನಿರ್ಧರಿಸುವದಿಲ್ಲ. ಹಿಂದಿನ ಕಾಲದಲ್ಲಿದ್ದಂತೆ ದೇವರು ಧರ್ಮಶಾಸ್ತ್ರವನ್ನು "ನಮ್ಮ ಒಳ್ಳೆದಕ್ಕಾಗಿ" ನೀಡಿದ್ದಾನೆ (ಧರ್ಮೋಪದೇಶಕಾಂಡ 6:24). ಅವರು ನಮಗೆ ಭಾರವಲ್ಲ (1 ಯೋಹಾನ 5:3); ಅವು ನಮ್ಮ ಜೀವಿತವನ್ನು ಆನಂದ ಮತ್ತು ಸಮಾಧಾನದತ್ತ ನಡೆಸುತ್ತವೆ.

ಯಾರು ಒಳ್ಳೇತನ, ನಿರೀಕ್ಷೆ ಮತ್ತು ಕ್ರೈಸ್ತ ಜೀವಿತದ ಅನ್ಯೋನ್ಯತೆಯನ್ನು ಅನುಭವಿಸಿ ನಂತರ ಬೆನ್ನು ಹಾಕಿ ಶರೀರದಾಶೆಯಲ್ಲಿ ತೊಡಗಿಸಿಕೊಳ್ಳುತ್ತಾರೋ ಅವರು "ನೀತಿವಂತಿಕೆಯ ಮಾರ್ಗವನ್ನು" ಅರಿತುಕೊಳ್ಳುವದಕ್ಕಿಂತ ಪೂರ್ವದಲ್ಲಿ ಸ್ಥಿತಿಗಿಂತ ಪಾಪದಿಂದ ಕಠಿಣಪಟ್ಟು ಹೋಗುತ್ತಾರೆ. ಅವರಿಗೆ ಕ್ರಿಸ್ತನಂತೆ ಜೀವಿಸುವದು ಮತ್ತು ವಿಷಯಲಂಪಟತನದಲ್ಲಿ ತೊಡಗಿಸಿಕೊಳ್ಳುವದರ ವ್ಯತ್ಯಾಸ ತಿಳಿದಿರುತ್ತದೆ. ಎರಡನ್ನೂ ಅನುಭವಿಸಿದ ನಂತರ, ಅವರು ಪ್ರಜ್ಞಾಪೂರ್ವಕವಾಗಿ ನಂತರದ್ದನು ಆಯ್ಕೆ ಮಾಡಿಕೊಳ್ಳುತ್ತಾರೆ ಅವರು ಕ್ರಿಸ್ತನನ್ನು ಅರಿತುಕೊಳ್ಳುವ ಪೂರ್ವದಲ್ಲಿ ಮತ್ತು "ಪವಿತ್ರ ಆಜ್ಞೆಗಳಿಂದ" ಹಿಂದಕ್ಕೆ ಹೋದ ನಂತರ ಎರಡನ್ನೂ ತಿಳಿದುಕೊಂಡಿರುತ್ತಾರೆ ಅವರು ಪಾಪದಲ್ಲಿ ಮುಳುಗಿಹೋಗಿ ತಪ್ಪಿಹೋಗಿದ್ದಾರೆ ಆದರೆ ಅವರನ್ನು ಸುವಾರ್ತೆಯ ಸಂದೇಶದೊಂದಿಗೆ ಎರಡನೆಯ ಸಾರಿ ತಲುಪುವದು ನಿಜ ವಾಗಿಯೂ ಬಹಳ ಕಷ್ಟಕರವಾಗಿದೆ. "ಅವರು ನೀತಿಯ ಮಾರ್ಗವನ್ನು ಅರಿಯದೇ ಇದ್ದರೆ ಅವರಿಗೆ ಒಳ್ಳೇದಾಗುತಿತ್ತು."

ಪೇತ್ರನು ಹೇಳುತ್ತಾನೆ, "ಪವಿತ್ರ ಆಜ್ಞೆ" ಅವರಿಗೆ ಕೊಡಲ್ಪಟ್ಟಿದೆ. ಅಪೊಸ್ತಲರು ಸತ್ಯದ ಮಾರ್ಗವನ್ನು ಹಳೆ ಒಡಂಬಡಿಕೆ, ಯೇಸುವಿನ ಬೋಧನೆಯ ಮತ್ತು ಪವಿತ್ರಾತ್ಮನ ಪ್ರಕಟನೆಯ ಮೂಲಕ ಕಂಡುಕೊಂಡಿದ್ದಾರೆ. ಇನ್ನಿತರವುಗಳು ಅವರಿಗೆ ಸಂತತಿಯಿಂದ ಸಂತತಿಯವರಿಗೆ ಕೊಡಲ್ಪಟ್ಟಿವೆ. ಕ್ರಿಸ್ತನನ್ನು ಅರಿತವರ ಜವಾಬ್ದಾರಿ ಸುವಾರ್ತೆಯನ್ನು ಮುಂದಿನ ಸಂತತಿಗೆ ನೀಡಬೇಕು. ತಂದೆತಾಯಿಗಳು ತಮ್ಮ ಮಕ್ಕಳಿಗೆ ಬೋಧಿಸಬೇಕು. ಮನೆ ಮತ್ತು ಸಭೆ ಯಾರು ಸತ್ಯವನ್ನು ಅರಿತಿದ್ದಾರೋ ಅವರು "ನೀತಿಯ ಮಾರ್ಗಕ್ಕೆ" ಇತರರನ್ನು ನಡೆಸಲು ತಮ್ಮ ಶಕ್ತಿ

ಮೀರಿ ಪ್ರಯತ್ನಿಸಬೇಕು. ದೇವರು ಲೋಕದ ಜನರಿಗೆ ಶಾಶ್ವತವಾದ ಜೀವಿತಕ್ಕೆ ವಾಕ್ಯವನ್ನು ಹಸ್ತಾಂತಿರುಸುವದು ಮತ್ತು ನೀಡುವದು ಇದನ್ನು ಬಿಟ್ಟರೆಯಾವುದೇ ಯೋಜನೆಯನ್ನು ನೀಡಿಲ್ಲ. ಜನರಿಗೆ ಇದ್ದಂತೆ, ಸಭೆಯು ಸಹ ಸುವಾರ್ತೆಯನ್ನು ಎಲ್ಲಾ ದೇಶಗಳಿಗೆ ಸಾರಬೇಕು, ಅದು ಆ ಕಾರ್ಯದಲ್ಲಿ ವಿಫಲವಾಗದೇ ಇರಲಿ.

**ವಚನ 22.** ಒಂದು ಆತ್ಮವು ಕ್ರಿಸ್ತನಿಗೆ ಬೆನ್ನು ಹಾಕಿ ಮತ್ತೇ ಶರೀರದ ಇಚ್ಛೆಗೆ ಒಳಗಾಗುತ್ತದೋ, ಅದು ಸುಂದರವಾದ ದೃಶ್ಯವೇನಲ್ಲ. ಪರಿಶುದ್ಧತೆಗೆ ಬದಲಾಗಿ ಪಾಪವನ್ನು ಆಯ್ಕೆಮಾಡಿಕೊಳ್ಳುವವನು ನಾಯಿ ತಾನು ಕಕ್ಕಿದ್ದನ್ನು ನೆಕ್ಕುವದಕ್ಕೆ ತಿರುಗಿಕೊಂಡಿತು ಮತ್ತು ತೊಳೆದ ಹಂದಿ ಕೆಸರಿನಲ್ಲಿ ಹೊರಳುವದಕ್ಕೆ ಹೋಯಿತು ಎಂಬಂತೆ ನಡೆದಿದ್ದಾನೆ. ಪೇತ್ರನು ಯೆಹೂದದ್ಯ ಧರ್ಮದಿಂದ ಎರಡು ಜನಪ್ರಿಯ ಗಾದೆಗಳನ್ನು ಉಪಯೋಗಿಸುತ್ತಾನೆ ಅದರಲ್ಲಿ ಒಂದನ್ನು ನೇರವಾಗಿ ಸತ್ಯವೇದದಿಂದ ತೆಗೆದುಕೊಂಡಿದ್ದಾಗಲೂ "ನಾಯಿ ತಾನು ಕಕ್ಕಿದ್ದನ್ನು ನೆಕ್ಕುವದಕ್ಕೆ ತಿರುಗಿಕೊಂಡಿತು ಮತ್ತು ತೊಳೆದ ಹಂದಿ ಕೆಸರಿನಲ್ಲಿ ಹೊರಳುವದಕ್ಕೆ ಹೋಯಿತು" ಎಂಬಂತೆ ನಡೆದಿದ್ದಾನೆ. ಪೇತ್ರನು ಯೆಹೂದ್ಯ ಧರ್ಮದಿಂದ ಎರಡು ಜನಪ್ರಿಯ ಗಾದೆಗಳನ್ನು ಉಪಯೋಗಿಸುತ್ತಾನೆ ಅದರಲ್ಲಿ ಒಂದನ್ನು ನೇರವಾಗಿ ಸತ್ಯವೇದದಿಂದ ತೆಗೆದುಕೊಂಡಿದ್ದಾಗಲೂ "ನಾಯಿ ತಾನು ಕಕ್ಕಿದ್ದನ್ನು ನೆಕ್ಕುವದಕ್ಕೆ ತಿರುಗಿಕೊಂಡಿತು" (ಜ್ಞಾನೋಕ್ತಿ 26:11). ನಾಯಿ ಮತ್ತು ಹಂದಿ ಎರಡು ಧರ್ಮಶಾಸ್ತ್ರದ ಪ್ರಕಾರ ಅಶುದ್ಧವಾದ ಪ್ರಾಣಿಗಳಾಗಿವೆ ಪೇತ್ರನಂತೆ ಯೇಸು ಒಂದು ಪಾಠವನ್ನು ಸ್ಪಷ್ಟೀಕರಿಸಲು ಎರಡು ಪ್ರಾಣಿಗಳನ್ನು ಉಪಯೋಗಿಸುತ್ತಾನೆ (ಮತ್ತಾಯ 7:6).

ಸುಳ್ಳು ಬೋಧಕರ ಈ ವರ್ತನೆಯ ಕುರಿತು ಪೇತ್ರನು ಏಕೆ ಇಷ್ಟೊಂದು ಉಗ್ರನಾಗಿದ್ದಾನೆ? "ಒಬ್ಬನನ್ನು ರಕ್ಷಿಸಲು, ಬೆಂಕಿಯಿಂದ ಅವನನ್ನು ಎಳೆದುಕೊಳ್ಳಲು" ನಿರೀಕ್ಷಿಸುವಾಗ ಮೃದುವಾಗಿರುವದು ಉತ್ತಮವಲ್ಲವೋ (ಯೂದ 23)? "ಮೃದು" 2 ಪೇತ್ರ 2ನೇ ಅಧ್ಯಾಯ ಓದುವಾಗ ಈ ಪದವು ಮನಸ್ಸಿನಲ್ಲಿ ಬರುವದು ವಿರಳ. ಖಂಡಿತವಾಗಿಯೂ ಮೃದುವಾಗಿ ಇರಬೇಕಾದ ಸಮಯವಿದೆ, ಆದರೆ ಒಂದು ಸಮಯ ಬರುತ್ತದೆ ಆಗ ನಾವು ನೇರವಾಗಿ ಮಾತನಾಡಬೇಕು. ಯೇಸುವಿಗೆ ವೈರಿಗಳಿದ್ದರು ಏಕೆಂದರೆ ಆತನು ಸತ್ಯವನ್ನು ವಿರೋಧಿಸುವವರೊಂದಿಗೆ ನೇರವಾಗಿ ಮಾತನಾಡುತ್ತಿದ್ದನು (ಮತ್ತಾಯ 23). ಕ್ರೈಸ್ತರು ಯೇಸು ಉಪಯೋಗಿಸಿದ ಪದಗಳನ್ನಾಗಲಿ ಪೇತ್ರನು ಉಪಯೋಗಿಸಿದ ಪದಗಳನ್ನಾಗಲಿ ವೈಯಕ್ತಿಕ ನಿರ್ಭಯವಾದ ಆಕ್ರಮಣಗಳನ್ನು ನಿರ್ಣಯಿಸಲು ಉಪಯೋಗಿಸಬಾರದು. ಇನ್ನೊಂದು ರೀತಿಯಲ್ಲಿ, ಯಾರು ಕರ್ತನನ್ನು ಪ್ರೀತಿಸುತ್ತಾರೋ, ಆತನ ಆಜ್ಞೆಗಳು ಪರಿಶುದ್ಧವಾದವುಗಳು ಎಂದು ನಂಬುತ್ತಾರೋ, ಯೋಜನೆಯನ್ನು ರಚಿಸಿದ ಜನರು ಕರ್ತನ ಮಾರ್ಗಕ್ಕೆ ಬದಲಾಗಿ ತಮ್ಮದೇ ಆದ ಮಾರ್ಗವನ್ನು ಪ್ರತಿನಿಧಿಸುವಾಗ ಅವರು ಮಾತ್ರ ನೀತಿವಂತಿಕೆಯೆಂಬ ಕೋಪದಿಂದ ತುಂಬಿದವರಾಗಿರಬೇಕು ಪೇತ್ರನು ಸುಳ್ಳು ಬೋಧಕರನ್ನು ಎದುರಿಸಿದನು ಅದು ಪ್ರತ್ಯೇಕಿಸಲ್ಪಟ್ಟ ಸಂಸರ್ಗ ದೋಷವನ್ನು ಸೇರಿಸಿಕೊಂಡದಲ್ಲ. ಅವರು ರೋಗವನ್ನು ಹರಡುತ್ತಾರೆ ಅದು ವಿಮೋಚನೆ ಹೊಂದಿದ ಪಾಪಿಗೆ ತಾನು ಆಗತಾನೇ ತಪ್ಪಿಸಿಕೊಂಡು ಬಂದ ಜೀವಿತದಲ್ಲಿ ಮತ್ತೇ ಸೇರುವ ಭಯವನ್ನು ಹುಟ್ಟಿಸುತ್ತದೆ. ಕ್ರಿಸ್ತನ ಹೆಸರಿನಲ್ಲಿ ಭಕ್ತಿಹೀನ ಮನುಷ್ಯರು ಕ್ರಿಸ್ತನ ಮಾರ್ಗವನ್ನು ದೂಷಿಸುವಾಗ ಪೇತ್ರನಿಗೆ ಕೋಪ ಬರುತ್ತದೆ. ಲೋಕಕ್ಕೆ ಹಿಂದಕ್ಕೆ ಜಗ್ಗಿದವರ, ಕುರಿತು ಆತನು ದುಃಖಪಡುತ್ತಾನೆ, ನಾಯಿ ತಾನು ಕಕ್ಕಿದ್ದನ್ನು ನೆಕ್ಕುವ ರೀತಿಯಲ್ಲಿ. ಸಭೆಗೆ ಆತನ ಎಚ್ಚರಿಕೆಯು ನಿಷ್ಟುರವಾಗಿತ್ತು ಆದರೆ ನೇರವಾಗಿ ಹೇಳಲ್ಪಟ್ಟಿತು. ಅದು ಹಾಗೇ ಆಗಬೇಕು.

## ಅಳವಡಿಸುವಿಕೆ

**ಕ್ರಿಸ್ತನ ಮಾರ್ಗವನ್ನು ಅಪಕೀರ್ತಿಪಡಿಸಿದಾಗ (ಅಧ್ಯಾಯ 2)**

ಎದುರಿಸುವದು ಆನಂದದಾಯಕವಲ್ಲ. ನಮ್ಮಲ್ಲಿ ಅನೇಕರು ಎಲ್ಲಿ ಸಾಧ್ಯವೋ ಅಲ್ಲಿ ಅದನ್ನು ದೂರವಿರುಸುತ್ತೇವೆ. ದುರ್ದೈವದಿಂದ, ಕೆಲವು ಸನ್ನಿವೇಶಗಳಲ್ಲಿ ಎದುರಿಸುವದನ್ನು ದೂರವರಿಸುವದು ಹೇಡಿತನಕ್ಕೆ ಸಮಾನ ಅರ್ಥವನ್ನು ನೀಡುತ್ತದೆ. ಉತ್ತಮ ಪುರುಷರು ಮತ್ತು ಸ್ತ್ರೀಯರು, ಸುಮ್ಮನೆ ಕೂತುಕೊಂಡು ಯಾರು ಸ್ವಾರ್ಥನೆಯಿಂದ ಪಶುವಿನಂತೆ ಮತ್ತು ಸ್ವ-ಸೇವೆ ಯನ್ನು ಮಾಡಿಕೊಳ್ಳುವ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತಾರೋ ಅವರನ್ನು ಅನುಮತಿಸುತ್ತಾರೆ. "ದುಷ್ಟನಿಂದ ಸೋತ ಶಿಷ್ಯನು ಹಾಳು ಬಾವಿ; ತಿಳಿದಾಡಿದ ಒರತೆ" ಯಂತಿದ್ದಾರೆ (ಜ್ಞಾನೋಕ್ತಿ 25:26). ಒಂದು ವೇಳೆ ಸಭೆಯು ದೇವರನ್ನು ಗೌರವಿಸಬೇಕಾಗಿದ್ದಲ್ಲಿ, ಅದರ ಸಿದ್ಧಾಂತಗಳು ಪವಿತ್ರವಾಗಿ, ಉತ್ತಮವಾಗಿ ಮತ್ತು ಜ್ಞಾನದಿಂದ ಕೂಡಿದವುಗಳಾಗಿ ಇಡಲ್ಪಡಬೇಕಾಗಿದ್ದಲ್ಲಿ ಜನರಿಗೆ ಮಾತನಾಡುವ ಧೈರ್ಯವಿರಬೇಕು. ಸುಳ್ಳು ಬೋಧಕರು ಪೇತ್ರನು ಸಂಭೋಧಿಸಿರುವ ಈ ಕೆಲವುಗಳನ್ನು ಹೊಂದಿಕೊಂಡಿದ್ದಾರೆ, ಆದರೆ ಇನ್ನೂ ಇತರರಿದ್ದಾರೆ ಅವರು ಕೇವಲ ನಿಷ್ಕ್ರೀಯರಾಗಿದ್ದಾರೆ. ಅಪೊಸ್ತಲರು ಸಭೆಗೆ ನಂಬಿಗಸ್ತರಾಗಿರಲು ಪಟ್ಟಿಮಾಡುತ್ತಾರೆ.

**ಅವರು ತಮ್ಮನ್ನು ವ್ಯಾಪಾರದ ಸರಕನ್ನಾಗಿ ಮಾಡಿಕೊಳ್ಳುತ್ತಾರೆ (2:1-3)**

ನ್ಯೂಯಾರ್ಕ್ ಪಟ್ಟಣದ ಕೊಲಂಬಿಯೋ ವಿಶ್ವವಿದ್ಯಾಲಯದ ವಿಶಾಲವಾದ ರಸ್ತೆ ಬದಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಿಕ್ಷುಕರಿರುತ್ತಾರೆ. ನಾನು ಒಂದು ಬೇಸಿಗೆಯ ಕಾಲದಲ್ಲಿ ಹಲವು ಸಂಶೋಧನೆಯನ್ನು ಮಾಡಲು ಅಲ್ಲಿರುವಾಗ ಬಹಳ ಮಟ್ಟಿಗೆ ಪ್ರತಿದಿನ ಅವರ ಬಳಿಯಿಂದ ಹಾದು ಹೋಗುತ್ತಿದೆ. ಒಂದು ದಿವಸ ನಾನು ಯಾವಾಗಲೂ ಬಿಕ್ಷೆಬೇಡುತ್ತಿದ್ದ ಸ್ತ್ರೀ "ಒಣಗಿದ ತುದಿಯಿರುವ ಪೆನ್ನುಗಳು" ಪೆನ್ನುಗಳನ್ನು ಮಾರಾಟ ಮಾಡುವದನ್ನು ಗಮನಿಸಿದೆ. ಅವಳು ಕೇವಲ ಕೈ ಒಡ್ಡುವದಕ್ಕಿಂತ ಕೊನೆಗೆ ಏನಾದರು ಕೆಲಸವನ್ನು ಮಾಡುತ್ತಿದ್ದಾಳಲ್ಲಾ ಎಂದು ನಾನು ಪ್ರಭಾವಿತನಾದೆ. ನಾವು ಅವಳು ಹೇಳಿದ ಬೆಲೆಯನ್ನು ನೀಡಿದೆ ಮತ್ತು ಅದಕ್ಕಿಂತ ಸ್ವಲ್ಪ ಹೆಚ್ಚು ನಂತರ ಪೆನ್ನುಗಳನ್ನು ತೆಗೆದುಕೊಂಡು ನನ್ನ ನಿವಾಸಕ್ಕೆ ಬಂದೆನು ಅವುಗಳನ್ನು ತೆಗೆದು ನೋಡಿದೆನು. ಪ್ರತಿಯೊಂದು ಎಲುಬಿನಂತೆ ಒಣಗಿಹೋಗಿದವರು. ಅದನ್ನು ನೋಡಿ ನಾನು ಈಗ ನಗುತ್ತೇನೆ ಆಗ ಅಲ್ಲ. ನಾನು ಮೋಸ ಹೋಗಿರುವದು ಇದು ಮೊದಲನೆಯ ಬಾರಿ ಅಲ್ಲ (ಇಂತಹ ಸಂಗತಿಗಳು, ಕೊನೆಯು ಅಲ್ಲಿ). ನಮ್ಮಲ್ಲಿ ಅನೇಕರಿಗೆ ಇರುವ ಒಂದು ತೊಂದರೆ ಎಂದರೆ ಉತ್ತಮವಾದ ಕರುಣೆಯುಳ್ಳ ನಡತೆಯನ್ನು ತೋರಿಸುವಾಗ ನಮ್ಮನ್ನು ಹಗುರವಾಗಿ ತೆಗೆದುಕೊಳ್ಳುತ್ತಾರೆ.

ಪೇತ್ರನು ಸಭೆಯಲ್ಲಿ ಬೇಧವನ್ನು ಹುಟ್ಟಿಸುವ ಸುಳ್ಳು ಬೋಧಕರನ್ನು ವರ್ಣಿಸುವಾಗ, ಆತನು ತನ್ನ ಓದುಗರಿಗೆ, ಇದರ ಪರಿಣಾಮವಾಗಿ "ನಿಮ್ಮಲ್ಲಿ ಕೆಲವರನ್ನು ಬುಟ್ಟಿಗೆ ಹಾಕಿಕೊಳ್ಳುತ್ತಾರೆ" ಎಂದು ಹೇಳುತ್ತಾನೆ. ಯಾವ ವಿಧದ "ಒಣಗಿದ ತುದಿಯಿರುವ ಪೆನ್ನುಗಳು" ಅವರು ಮಾರುತ್ತಿದ್ದರು ಎಂಬುದನ್ನು ತಿಳಿಯಲು ನೀವು ಕೂತುಹಲವುಳ್ಳವರಾಗಿರಬಹುದು. ಸಂತತಿಯಿಂದ ಸಂತತಿಯವರೆಗೆ ಬದಲಾಗುತ್ತಿರುವ ಮೋಸಕರವಾದ ಸಿದ್ಧಾಂತಗಳು. ಮೋಸತನ ಸ್ಥಿರವಾಗಿದೆ. ಫಲಗಳು ಮತ್ತು ಬೋಧಕರ ಜೀವನ ಶೈಲಿ ಹೆಚ್ಚು ಈ ಅಂಶದ ಮೇಲಿದೆ. ಪೇತ್ರನು ಅವರ ಸಿದ್ಧಾಂತವನ್ನು ವರ್ಣಿಸಿದ್ದರೆ ಇನ್ನೂ ಆಸಕ್ತಿಕರವಾಗಿರುತಿತ್ತು ಆದರೆ ಸೂಚನೆಗಳನ್ನು ಹೊಂದಿಕೊಳ್ಳುವದು ಇನ್ನೂ ಲಾಭದಾಯಕವಾಗಿದೆ ಇದರಿಂದಾಗಿ ನಾವು ಪಾಖಂಡವಾದ ಬೋಧನೆಗಳನ್ನು ನಿರ್ವಹಿಸಲು ಶಕ್ತರಾಗುತ್ತೇವೆ. ಯೇಸು ಹೇಳಿದ್ದು ಸುಳ್ಳುಬೋಧಕರು ಅವರ ಫಲಗಳಿಂದ ಗುರುತಿಸಲ್ಪಡುತ್ತಾರೆ (ಮತ್ತಾಯ 7:15, 16).

ಯೇಸು ಹೇಳಿದಂತೆ ಪೇತ್ರನು ಸುಳ್ಳುಬೋಧಕರ ನಿರ್ಧಿಷ್ಟವಾದ ಸಿದ್ಧಾಂತಗಳಿಗಿಂತ ಅವರು ಉತ್ಪಾದಿಸುವ ಫಲಗಳ ಕುರಿತು ಹೆಚ್ಚು ಕಳಕಳಿಯುಳ್ಳವನಾಗಿದ್ದಾನೆ.

### ಸುಳ್ಳು ಬೋಧಕರ ವಿಷಯಲಂಪಟತನ (2:2, 18)

ಪ್ರಾಚೀನ ಲೋಕದಲ್ಲಿ ಮತ್ತು ಆಧುನಿಕ ಲೋಕದಲ್ಲಿ, ಅವರು ಸರಿಯಾದ ಸಂಗತಿಗಳನ್ನು ಮಾಡುತ್ತಿದ್ದಾರೆ ಎಂಬ ಭರವಸೆಯೊಂದಿಗೆ ಜನರನ್ನು ವಿಷಯಲಂಪಟತನದ ಇಚ್ಛೆಗಳನ್ನು ಅನುಸರಿಸಲು ಉತ್ತೇಜಿಸುವಾಗ ಈ ಲಾಭಗಳನ್ನು ಹೊಂದುವದು ಸರಳವಾಗಿದೆ. ಇದು 2006 ರಲ್ಲಿ ಜನಪ್ರಿಯ ಕಾದಂಬರಿಯಾಗಿದ್ದ ಡಾ ವಿನಸ್ಸಿ ಕೋಡ್‌ನ ಸಂದೇಶವಾಗಿದೆ. ಪುಸ್ತಕದ ಲೇಖಕನು ಸಭೆಯು ಆರೋಗ್ಯಕರವಾದ ಲೈಂಗಿಕತೆಯನ್ನು ಅನಾವಶ್ಯಕವಾಗಿ ನಿಗ್ರಹಿಸುತ್ತಿದೆ. ಯಾವುದು ಸತ್ಯದಿಂದ ದಾರವಾಗಿಲ್ಲ. ಡಾ. ವಿನಸ್ಸಿ ಕೋಡ್‌ನ ವಿಶ್ಲೇಷಣೆಯಲ್ಲಿ James L. Garlow ಮತ್ತು Peter Jones, C. S. Lewis ರವರು ಹೀಗೆ ಬರೆಯುತ್ತಾರೆ:

> ನಾವು ಹೀಗೆ ಹೇಳುವಾಗ ಒಂದು ಅತ್ಯಂತ ದುರ್ದೈವದ ಗಾದೆಯನ್ನು ಉಪಯೋಗಿಸುತ್ತೇವೆ: ದುರಾಶೆಯಿಂದ "ತನಗೆ ಒಬ್ಬ ಸ್ತ್ರೀ ಬೇಕು" ಎಂದು ಮಾರ್ಗದಲ್ಲಿ ಅಲೇದಾಡುತ್ತಿರುವ ಮನುಷ್ಯ "ಖಂಡಿತವಾಗಿ ಹೇಳಬೇಕಾದರೆ ಅವನಿಗೆ ಬೇಕಾದದ್ದು ಸ್ತ್ರೀಯಲ್ಲ." ಅವನಿಗೆ ಬೇಕಾದ ಆನಂದಕ್ಕೆ ಸ್ತ್ರೀ ಅವಶ್ಯವಿರುವ ವಸ್ತುವಾಗಿದ್ದಾಳೆ. ಅವನ ವರ್ತನೆಯಿಂದ ಅವನು ತನ್ನ ಇಷ್ಟಪ್ರಾಪ್ತಿಯಾದ ಕೆಲವು ನಿಮಿಷಗಳ ನಂತರ ಆ ಸ್ತ್ರೀಯ ವಿಷಯದಲ್ಲಿ ಎಷ್ಟು ಕಳಕಳಿಯುಳ್ಳವನಾಗಿದ್ದಾನೆ (ಒಬ್ಬನು ಸಿಗರೇಟನ್ನು ಸೇದಿದ ನಂತರ ಪೆಟ್ಟಿಗೆಯನ್ನು ಇಟ್ಟುಕೊಳ್ಳುವದಿಲ್ಲ).[15]

### ಸ್ವಾತಂತ್ರ್ಯ ಮತ್ತು ನಿರ್ಭಂಧಗಳು (2:19)

ಸ್ವಾತಂತ್ರ್ಯ ಆಶೀರ್ವಾದವಾಗಬೇಕಾದಲ್ಲಿ ನಿರ್ಭಂದಗಳ ಸನ್ನಿವೇಶದೊಳಗೆ ಕಾರ್ಯಪ್ರವೃತ್ತರಾಗಬೇಕು. ಇದು ದೈಹಿಕ ಮತ್ತು ಆತ್ಮೀಕ ಎರಡು ಸಂಗತಿಗಳಲ್ಲಿ ಸತ್ಯವಾಗಿದೆ. ಗುರುತ್ವಾಕರ್ಷಣೆಯ ನಿರ್ಭಂದಗಳಿಲ್ಲದೆ, ಉದಾಹರಣೆಗೆ, ಜೀವನ ಅಸಾಧ್ಯವಾಗಿದೆ. ಒಂದು ರೀತಿಯಲ್ಲಿ ಗುರುತ್ವಾಕರ್ಷಣೆ ನಮ್ಮ ಸ್ವಾತಂತ್ರ್ಯವನ್ನು ಮಿತಿಗೊಳಿಸುತ್ತದೆ. ಒಂದು ಅರ್ಥದಲ್ಲಿ, ಆದರೆ ಅದಿಲ್ಲದೇ ನಾವು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ಮಾಳಿಗೆಯ ಮೇಲೆ ತೇಲುತ್ತಾ ಇರುವದನ್ನು, ಕೆಳಗೆ ಇಳಿಯುವದಕ್ಕೆ ಸಾಧ್ಯವಾಗದೆ ಇರುವದನ್ನು ಊಹಿಸಿರಿ. ಪಕ್ಷಿಗಳು ಮತ್ತು ವಿಮಾನಗಳು ಹಾರಲು ಶಕ್ಯವಾಗಿವೆ ಆದರೆ ಅವು ಭೂಮಿಯ ಮೇಲೆ ಕೆಳಗೆ ಇಳಿಯಬೇಕಾದರೆ ಗುರುತ್ವಾಕರ್ಷಣೆ ಇರುತ್ತದೆ. ಅದೇ ರೀತಿಯಾಗಿ ನೈತಿಕ ಕ್ಷೇತ್ರದಲ್ಲಿ ನಿರ್ಭಂದವಿಲ್ಲದ ಸ್ವಾತಂತ್ರ್ಯವೆಂದರೆ ಜನರಿಗೆ ಜೀವಿತದಲ್ಲಿ ಯಾವುದೇ ರೀತಿಯ ಮಾರ್ಗದರ್ಶನವಿಲ್ಲ. ಸರಿ ಮತ್ತು ತಪ್ಪು ತಮಗೆ ಮತ್ತು ಇತರರಿಗೆ ಯಾವ ಅರ್ಥವನ್ನೂ ನೀಡುವದಿಲ್ಲ. ನೀವು ಯಾರ ಮೇಲೆಯೂ ಭರವಸವನ್ನು ಇಡಲು ಸಾಧ್ಯವಿಲ್ಲ ಎನ್ನುವಂತೆ ನಿಮ್ಮನ್ನು ನೀವು ಚಿತ್ರಿಸಿಕೊಳ್ಳಿರಿ ನಿಮಗೆ ಸತ್ಯವನ್ನು ಹೇಳುತ್ತೇನೆ ಜನರು ತಮಗೆ ತೋಚಿದ್ದನ್ನು ಹೇಳುವ ಸ್ವಾತಂತ್ರ್ಯವನ್ನು ಹೊಂದಿದ್ದಾರೆ. ನೀವು ಹೊಂದಿಕೊಂಡಿರುವ ಪ್ರತಿಯೊಂದು ಸ್ವತ್ತಿನ ಯಾವಾಗಲೂ ನಿಮ್ಮ ಮೇಲೆ ದೃಷ್ಟಿಯನ್ನು ಇರಿಸಬೇಕಾದ ಸಂದರ್ಭವನ್ನು ಊಹಿಸಿರಿ ಯಾಕೆಂದರೆ ಕಳ್ಳತನ ಮಾಡುವದು ತಪ್ಪಲ್ಲ.

ಕ್ರೈಸ್ತರು ಸ್ವತಂತ್ರ ವ್ಯಕ್ತಿಗಳು, ಆದರೆ ಅವರು ದೇವರು ಹಾಕಿದ ನಿರ್ಭಂದಗಳ ಒಳಗೆ ತಮ್ಮ ಸ್ವಾತಂತ್ರ್ಯವನ್ನು ಉಪಯೋಗಿಸುತ್ತಾರೆ. ಪೇತ್ರನು ಸಂಬೋಧಿಸಿದ ಸಭೆಗಳಲ್ಲಿ ಭಯವನ್ನು ಹುಟ್ಟಿಸಿದ ಸುಳ್ಳುಬೋಧಕರು ಕೆಲವು ಕ್ರೈಸ್ತ ಕಲ್ಪನೆಗಳನ್ನು ಸೆರೆಹಿಡಿದು ಅವರಿಗೆ ಅಪೊಸ್ತಲರು ವಾಗ್ದಾನ ಮಾಡಿದ ಸ್ವಾತಂತ್ರ್ಯಕ್ಕಿಂತ ಹೆಚ್ಚಿನ ಸ್ವಾತಂತ್ರ್ಯವನ್ನು ವಾಗ್ದಾನ ಮಾಡಿದರು. ಪೇತ್ರನು ಹೇಳುತ್ತಾನೆ, ಅವರು ಸ್ವಾತಂತ್ರ್ಯವನ್ನು ವಾಗ್ದಾನ

ಮಾಡಿದ ಸಮಯದಲ್ಲಿಯೇ, "ಅವರು ತಾವೇ ಸ್ವತಃ ಭ್ರಷ್ಟರಾಗಿದ್ದರು." ನಂತರ ಆತನು ಜಾಗತಿಕವಾದ ಸತ್ಯವನ್ನು ಸೇರಿಸುತ್ತಾನೆ. "ಒಬ್ಬನು ಯಾವುದಕ್ಕೆ ಸೋತುಹೋಗಿರುವನೋ ಅದರ ದಾಸತ್ವದೊಳಗಿರುವನಷ್ಟೆ" (2 ಪೇತ್ರ 2:19). ಪೌಲನು ಇದೇ ರೀತಿಯಾಗಿ ಹೇಳುತ್ತಾನೆ, "ನೀವು ಯಾವನಿಗೆ ದಾಸರಂತೆ ವಿಧೇಯರಾಗುತ್ತೇವೆಂದು ನಿಮ್ಮನ್ನು ಒಪ್ಪಿಸಿಕೊಡುತ್ತೀರೋ ಆ ಯಜಮಾನನಿಗೆ ದಾಸರಾಗಿಯೇ ಇರುವಿರೆಂದು ನಿಮಗೆ ಗೊತ್ತಿಲ್ಲವೋ? ಪಾಪಕ್ಕೆ ದಾಸ ರಾದರೆ ಮರಣವೇ ಫಲ; [ನಂಬಿಕೆಯೆಂಬ] ವಿಧೇಯತ್ವಕ್ಕೆ ದಾಸರಾದರೆ ನೀತಿಯೇ ಫಲ" (ರೋಮಾಪುರ 6:16). ಬಹುಶಃ ಪಾಪದ ದೊಡ್ಡ ಅಪಾಯ ಗುರುತಿಸದೇ ಹೋಗುತ್ತದೆ. ಕೆಲವೊಮ್ಮೆ ವ್ಯಕ್ತಿಯು ತನ್ನ ಪಾಪವನ್ನು ಬಿಟ್ಟುಬಿಡಲು ಸಿದ್ಧನಾದಾಗಲು ಪಾಪವು ಅವನಲ್ಲಿ ಕೊನೆಗೊಳ್ಳುವದಿಲ್ಲ. ಒಬ್ಬ ಪ್ರಾಚೀನ ಜ್ಞಾನಿಯು ಹೀಗೆ ಹೇಳುತ್ತಾನೆ; ಯುದ್ಧ ಕಾಲದಲ್ಲಿ ಹೇಗೆ ವಿರಾಮ ದೊರೆಯುವದಿಲ್ಲವೋ ಹಾಗೆ ಅಧರ್ಮಕ್ಕೊಳಪಟ್ಟವನಿಗೆ ಬಿಡುಗಡೆಯಿಲ್ಲ (ಪ್ರಸಂಗಿ 8:8).

**ಲೋಕದ ಮಲೀನತ್ವ (2:20-22)**

ಸಾಹಿತ್ಯದಲ್ಲಿ ಹಿಂದೆಂದು ಸೃಷ್ಟಿಸದ ಅತ್ಯಂತ ಪ್ರಭಾವೀ ಕಾರ್ಯವು ಹದಿನಾಲ್ಕನೇ ಶತಮಾನದ ಆದಿಯಲ್ಲಿ ಇಟಾಲಿಯನ್ ಲೇಕದ Dante ನಿಂದ ರಚಿಸಲ್ಪಟ್ಟಿತು. *Divine Comedy* ಆತನ ಜನಪ್ರಿಯ ಕೃತ್ಯವಾಗಿದೆ. ಇದರಲ್ಲಿ ಆತನು ತನ್ನನ್ನು ತಾನೇ ಪರಲೋಕ ಯಾತ್ರೆಗೆ ಮರಣಾನಂತರದ ಸ್ಥಳಕ್ಕೆ ಮತ್ತು ನರಕಕ್ಕೆ ಒಯ್ಯಲ್ಪಟ್ಟವನಂತೆ ಚಿತ್ರಿಸಿದ್ದಾನೆ, ನರಕದ ಪ್ರಯಾಣವನ್ನು "The Inferno" ಎಂದು ಕರೆದಿದ್ದಾರೆ. Dante ಯವರ ದರ್ಶನದಲ್ಲಿ ನರಕಕ್ಕೆ ಹೋಗುವ ಬಾಗಿಲಿನಲ್ಲಿ ಈ ಕೆಳಗಿನ ಸಾಲುಗಳನ್ನು ಕಂಡರು:

> ಶೋಕದ ಪಟ್ಟಣಕ್ಕೆ ನಾನೇ ಮಾರ್ಗವಾಗಿದ್ದೇನೆ
> ಕೈಬಿಡಲ್ಪಟ್ಟ ಜನರಿಗೆ ನಾನೇ ಮಾರ್ಗವಾಗಿದ್ದೇನೆ
> ಶಾಶ್ವತವಾದ ದುಃಖಕ್ಕೆ ನಾನೇ ಮಾರ್ಗವಾಗಿದ್ದೇನೆ.
> ಪವಿತ್ರವಾದ ನ್ಯಾಯವು ನನ್ನ ಕಟ್ಟಡಗಳನ್ನು ಚಲಿಸಿಬಿಟ್ಟಿತು
> ನಾನು ಇಲ್ಲಿ ದೈವೀಕ ಸರ್ವಶಕ್ತತೆಯಲ್ಲಿ ಎಬ್ಬಿಸಲ್ಪಟ್ಟಿದ್ದೇನೆ
> ಪ್ರಥಮ ಸೃಷ್ಟಿಯ ಪ್ರೀತಿ ಮತ್ತು ಅಂತಿಮ ಜ್ಞಾನ
> ಈ ಸಂಗತಿಗಳನ್ನು ಮಾತ್ರ ಸಮಯವು ಧರಿಸಲು ಸಾಧ್ಯವಿಲ್ಲ.
> ಅವು ನನ್ನ ಎದುರಿನಲ್ಲಿ ಮಾಡಲ್ಪಟ್ಟವು ಮತ್ತು ನಾನು ನಿಂತಿರುವ
> ಸಮಯದಿಂದ ಆಚೆಗೆ ಇಲ್ಲಿ ಯಾರು ಪ್ರವೇಶಿಸುತ್ತೀರೋ ಅವರು
> ನಿರೀಕ್ಷೆಯನ್ನು ತೊರೆಯಿರಿ.[16]

ದೇವರು ಕ್ಷಮಿಸಲ್ಪಡದೇಯಿರುವ ಪಾಪಗಳೆಂದರೆ ಶಾಶ್ವತವಾದ ಮರಣ, ಬರಲಿಕ್ಕಿರುವ ಲೋಕದಲ್ಲಿ ದೇವರಿಂದ ಪ್ರತ್ಯೇಕ್ಷಿಸಲ್ಪಡುವದು ಎಂದು ನೇರವಾಗಿ ಸ್ಪಷ್ಟಪಡಿಸಿದ್ದಾನೆ. ಏನಂದರೆ ಪಾಪವು ಈ ಜೀವಿತದಲ್ಲಿ ಸಹ ಪರಿಣಾಮವನ್ನು ಹೊಂದಿದೆ ಎಂಬುದನ್ನು ನಾವು ಲಕ್ಷಿಸದೇ ಇರಬಹುದು. ಪಾಪದ ಭಾಗಶಃ ಶಿಕ್ಷೆಯು ನಾವು ವಾಸಿಸುವ ಈ ಲೋಕದಲ್ಲಿಯೇ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಇದು 2 ಪೇತ್ರ 2:20-22ರಲ್ಲಿ ಅಪೊಸ್ತಲನಾದ ಪೇತ್ರನು ನಮಗೆ ನೀಡಿದ ಸಂದೇಶ ಆತನು ತನ್ನ ಓದುಗರು ಕೆಳಗಿನ ಸತ್ಯವನ್ನು ತಿಳಿದುಕೊಳ್ಳಲಿ ಎಂದು ಬಯಸುತ್ತಾನೆ.

(1) *ವಿಷಯಲಂಪಟತನ, ಸ್ವಾರ್ಥಸೇವೆಯ ಜೀವಿತವನ್ನು ಜೀವಿಸುವ ವ್ಯಕ್ತಿಯು ಕಷ್ಟಸಂಕಟ ಮತ್ತು ಮರಣದೆಡೆಗೆ ನಡೆಸುವ ಮಾರ್ಗವನ್ನು ಆಯ್ದುಕೊಂಡಿದ್ದಾನೆ.* ನಾವು ಇದನ್ನು ಸಂಪೂರ್ಣ ಪತ್ರದಲ್ಲಿ ಸನ್ನಿವೇಶದಲ್ಲಿ ಇಟ್ಟರೆ ಇದು ಪೇತ್ರನ ಮಾತುಗಳನ್ನು

ತಿಳಿದುಕೊಳ್ಳಲು ನಮಗೆ ಸಹಾಯಕವಾಗಿದೆ. ಪೇತ್ರನು ಸಂಬೋಧಿಸಿದ ಸಭೆಗಳನ್ನು ಸುಳ್ಳು ಬೋಧಕರು ಆಕ್ರಮಿಸಿಕೊಂಡಿದ್ದಾರೆ. ಅಪೊಸ್ತಲನು ಅವರು ಏನು ಬೋಧಿಸಿದ್ದಾರೆ ಎಂಬುದರ ಕುರಿತಾಗಿ ಹೆಚ್ಚು ಹೇಳಿಲ್ಲ ಆದರೆ ನಾವು ಕೆಲವು ವಿವರಗಳನ್ನು ಹೇಳಿಕೊಳ್ಳಬಹುದು. (ಅ) ಅಪೊಸ್ತಲನನ್ನು ವಿರೋಧಿಸಿದವರು ತಮಗೆ ವಿಶೇಷವಾದ ಜ್ಞಾನವಿದೆ ಎಂದು ಹೇಳಿಕೊಳ್ಳುತ್ತಿದ್ದರು. ಅವರು ಅಪೊಸ್ತಲರಿಗಿಂತ ಹೆಚ್ಚಾಗಿ ತಿಳಿದುಕೊಂಡಿದ್ದೇವೆ ಎಂದು ಭಾವಿಸಿದ್ದರು. ಅವರ ಜ್ಞಾನವು ದೇವರ ಬಳಿಗೆ ಹೋಗುವ ಮಾರ್ಗವಾಗಿದೆ ಎಂದು ಹೇಳುತ್ತಿದ್ದರು. (ಬ) ಅವರು ದೇವದೂತರು ಮತ್ತು ಆತ್ಮೀಕ ಶಕ್ತಿಗಳು ತಮ್ಮ ಪರವಾಗಿವೆ ಎಂದು ಹೇಳಿಕೊಳ್ಳುತ್ತಿದ್ದರು. ಪೇತ್ರ ಮತ್ತು ಯೂದ ಇಬ್ಬರು ದೇವದೂತರನ್ನು ಉಲ್ಲೇಖಿಸುತ್ತಾರೆ ಅವರನ್ನು ದೇವರು ಕೆಳಗಡೆ ಕತ್ತಲೆಯಗುಂಡಿಗೆ ನ್ಯಾಯತೀರ್ಪಿಗಾಗಿ ಕಾಯ್ದಿರುವಂತೆ ಕಳುಹಿಸುತ್ತಾನೆ. (ಕ) ಅವರು ಎರಡನೆಯ ಬರೋಣದಲ್ಲಿ "ಆತ್ಮೀಕರಾಗಿರಲು" ಬಯಸುತ್ತಾರೆ. ಇದು ಸಮಂಜಸವಾಗಿಲ್ಲಾ ಎಂದು ಇವರು ಬೋಧಿಸುತ್ತಾರೆ. ಒಬ್ಬ ವ್ಯಕ್ತಿಯು ದೇವರ ಬಳಿಗೆ ಬಂದಾಗ ಅವರಿಗೆ ಕರ್ತನು ತಿರುಗಿಬಂದಿರುತ್ತಾನೆ. ಪೇತ್ರನು "ಕುಚೋದ್ಯಗಾರರು ಬಂದು ಕುಚೋದ್ಯಮಾಡುತ್ತಾ - ಆತನ ಪ್ರತ್ಯಕ್ಷತೆಯ ವಿಷಯವಾದ ವಾಗ್ದಾನವು ಏನಾಯಿತು? ನಮ್ಮ ಪಿತೃಗಳು ನಿದ್ರೆ ಹೊಂದಿದ ದಿನ ಮೊದಲುಗೊಂಡು ಸಮಸ್ತವೂ ಲೋಕದಿಯಿಂದಿದ್ದ ಹಾಗೆಯೇ ಇರುತ್ತದಲ್ಲಾ ಎಂದು ಹೇಳುವರೆಂಬುದಾಗಿ ನೀವು ಮೊದಲು ತಿಳಿದುಕೊಳ್ಳಬೇಕು" (2 ಪೇತ್ರ 3:3, 4) ಎಂದು ಪೇತ್ರನು ಬರೆಯುತ್ತಾನೆ.

ಈ ಬೋಧನೆಗಳಷ್ಟೇ ತೊಂದರೆ ನೀಡುವ ಬೋಧನೆಗಳನ್ನು ಪೇತ್ರನು ಇವುಗಳು ಸುಳ್ಳು ಬೋಧಕರ ನಡತೆಗಳು ಎಂಬುದನ್ನು ಅದು ಸುವಾರ್ತೆಯ ವಿಷಯವನ್ನು ಸಂಧಾನ ಮಾಡುತ್ತದೆ ಎಂಬುದನ್ನು ಅರ್ಥಮಾಡಿಕೊಂಡನು. ಅವನ ಭಾಷೆ ಬಲವಾಗಿದೆ, "ಇವರು ಜಾರತ್ವದಿಂದ ತುಂಬಿದ ಮತ್ತು ಪಾಪವನ್ನು ಬಿಡಲೊಲ್ಲದ ಕಣ್ಣುಳ್ಳವರೂ ಚಪಲಚಿತ್ತರನ್ನು ಮರುಳುಗೊಳಿಸುವವರೂ ಲೋಭದಲ್ಲಿ ತೇರ್ಗಡೆಹೊಂದಿದ ಮನಸ್ಸುಳ್ಳವರೂ ಶಾಪಕ್ಕೆ ಪಾತ್ರರು ಆಗಿದ್ದಾರೆ" (2 ಪೇತ್ರ 2:14).

ಪೇತ್ರನು ತನ್ನ ಓದುಗರಿಗೆ ಸುಳ್ಳು ಬೋಧಕರು ಸ್ವಾತಂತ್ರ್ಯವನ್ನು ವಾಗ್ದಾನ ಮಾಡುವ ಸಮಯದಲ್ಲಿ ಅವರು ಪ್ರತಿಪಾದಿಸುವ ಜೀವಿತವು ದಾಸತ್ವ ಮತ್ತು ಮರಣವಾಗಿದೆ. ಅವರು ಸ್ವಾತಂತ್ರ್ಯವನ್ನು ಕೊಡುತ್ತೇವೆಂದು ಕೆಟ್ಟತನದ ದಾಸತ್ವದೊರಳಗಿದ್ದಾರೆ. "ಒಬ್ಬನು ಯಾವುದಕ್ಕೆ ಸೋತು ಹೋಗಿರುವನೋ ಅದರ ದಾಸತ್ವದೊಳಗಿರುವನಷ್ಟೆ" (2 ಪೇತ್ರ 2:19). ಯೇಸು ಇದೇ ರೀತಿಯಾದ ಹೇಳಿಕೆಯನ್ನು ನೀಡಿದ್ದಾನೆ, "ನಿಮಗೆ ನಿಜನಿಜವಾಗಿ ಹೇಳುತ್ತಾನೆ, ಪಾಪಮಾಡುವವರೆಲ್ಲರು ಪಾಪಕ್ಕೆ ದಾಸರಾಗಿದ್ದಾರೆ" (ಯೋಹಾನ 8:34). ಪೌಲನು ಇದೇ ಸತ್ಯವನ್ನು ಹೀಗೆ ಹೇಳುತ್ತಾನೆ, "ಪಾಪವನ್ನು ಮಾಡಬಹುದೋ? ಎಂದಿಗೂ ಮಾಡಬಾರದು. ನೀವು ಯಾವನಿಗೆ ದಾಸರಂತೆ ವಿಧೇಯರಾಗುತ್ತೇವೆಂದು ನಿಮ್ಮನ್ನು ಒಪ್ಪಿಸಿಕೊಡುತ್ತೀರೋ ಆ ಯಜಮಾನನಿಗೆ ದಾಸರಾಗಿಯೇ ಇರುವಿರೆಂಬುದು ನಿಮಗೆ ಗೊತ್ತಿಲ್ಲವೋ? ಪಾಪಕ್ಕೆ ದಾಸರಾದರೆ ಮರಣವೇ ಫಲ; (ನಂಬಿಕೆಯೆಂಬ) ವಿಧೇಯತ್ವಕ್ಕೆ ದಾಸರಾದರೆ ನೀತಿಯೇ ಫಲ" (ರೋಮಾಪುರ 6:16).

ಸ್ವಾತಂತ್ರ್ಯದ ಕೆಲವು ಅವಶ್ಯಕತೆಗಳು ಇತರ ಸ್ವಾತಂತ್ರ್ಯಗಳನ್ನು ನಿರ್ಭಂದಿಸುತ್ತವೆ. ಒಬ್ಬನು ಕಳ್ಳನಂತೆ ಇನ್ನೊಬ್ಬನಿಗೆ ಸಂಬಂಧಿಸಿದ್ದನ್ನು ತೆಗೆದುಕೊಳ್ಳಲು ಸ್ವತಂತ್ರನಾಗಿದ್ದರೆ, ಅವನು/ಅವಳು ವಿಶ್ವಾಸ ಮತ್ತು ಪ್ರೀತಿಯ ಸಂಬಂಧವನ್ನು ಗಂಡ ಅಥವಾ ಹೆಂಡತಿಯೊಂದಿಗೆ ಹೊಂದಲು ಸ್ವಂತತ್ರರಲ್ಲ. ದೇವರಿಗೆ ಅವಿಧೇಯತೆಯನ್ನು ತೋರಿಸುವಾಗ ಅದು ಬಹಳ ಬಾರವಾರವಿರುವ, ಹೆಚ್ಚು ಬೇಡಿಕೆಯನ್ನು ಹೊಂದಿರುತ್ತದೆ, ಒಬ್ಬನ ಸ್ವಾತಂತ್ರ್ಯವನ್ನು ಒಬ್ಬ ವ್ಯಕ್ತಿಯ ಕ್ರೈಸ್ತ ಜೀವಿತದ ನಿರ್ಭಂದಗಳಿಗಿಂತ ಹೆಚ್ಚು ಮಿತಿಗೊಳಿಸುತ್ತದೆಂದು ಒತ್ತು ನೀಡುವಾಗ ಪೇತ್ರನು ಒಂದು ಸಾಮಾನ್ಯ ಅನುಭವಕ್ಕೆ ನಡೆಸುತ್ತಾನೆ. ಕ್ರೈಸ್ತರು ಹೊತ್ತುಕೊಂಡಿರುವ

ದೇವರ ಆಜ್ಞೆಗಳು ಭಾರವಾದವುಗಳಲ್ಲಿ. ಅವು ಅವರ ಹೆಜ್ಜೆಯನ್ನು ಪುಟಿಯುವಂತೆ ಮಾಡುತ್ತವೆ, ಅವುಗಳ ಮಾರ್ಗದರ್ಶನ ಅವರಿಗೆ ಜೀವವನ್ನು ನೀಡುತ್ತದೆ ಯೋಹಾನನು ಹೇಳುತ್ತಾನೆ, "ನಾವು ದೇವರ ಮಕ್ಕಳನ್ನು ಪ್ರೀತಿಸುತ್ತೇವೆಂಬುದನ್ನು ದೇವರನ್ನು ಪ್ರೀತಿಸಿ ಆತನ ಆಜ್ಞೆಗಳನ್ನು ಅನುಸರಿಸುವದರಿಂದಲೇ ತಿಳಿದುಕೊಳ್ಳುತ್ತೇವೆ. ದೇವರ ಮೇಲಣ ಪ್ರೀತಿ ಏನೆಂದರೆ ಆತನ ಆಜ್ಞೆಗಳನ್ನು ಕೈಗೊಂಡು ನಡೆಯುವದೇ. ಆತನ ಆಜ್ಞೆಗಳು ಭಾರವಾದವುಗಳಲ್ಲ" (1 ಯೋಹಾನ 5:2-3).

(2) *ದೇವರಿಲ್ಲದ ಜೀವಿತ ಸ್ವ-ಇಚ್ಛೆಯಿಂದ ಹಚ್ಚುವದು ಮತ್ತು ಆರಿಸುವದು ಮಾಡುವ ಗುಂಡಿಯಂತಲ್ಲ.* ಕೆಲವೊಮ್ಮೆ ಜನರು ತಾವು ಪ್ರತಿಸಾರಿ ಪಾಪ ಮಾಡಿದಾಗ ದೇವರ ಕಡೆಗೆ ತಿರುಗಿಕೊಂಡು ಮೊದಲಿನ ಸ್ಥಿತಿಯ ಪರಿಶುದ್ಧತೆಯನ್ನು ಹೊಂದಬಹುದು ಎಂದು ಮಾತನಾಡುತ್ತಾರೆ. ಆ ರೀತಿಯಾಗಿ ಅದು ಕಾರ್ಯಮಾಡುವದಿಲ್ಲ. ಪೇತ್ರನು ಹೇಳುತ್ತಾನೆ ಪ್ರತಿಸಾರಿ ಮನುಷ್ಯನು ದೇವರಿಗೆ ಬೆನ್ನು ಹಾಕುವಾಗ, ಅವರನ್ನು ತನ್ನಷ್ಟಕ್ಕೆ ತಾನೇ ಏನನ್ನಾದರೂ ಮಾಡಿಕೊಳ್ಳುತ್ತಾನೆ. ಪ್ರತಿಬಾರಿ ಪಾಪಮಾಡುವದೆಂದರೆ ಒಬ್ಬ ವ್ಯಕ್ತಿ ಅದರ ದುಷ್ಟಪರಿಣಾಮದಿಂದ ಕಾಯ್ದಿರಿಸುವಿಕೆಯಿಂದ ತನ್ನನ್ನು ತಾನು ತೂರೆದುಕೊಳ್ಳುತ್ತಾನೆ. ದೇವರ ಬಳಿಗೆ ಹಿಂತಿರುಗುವದು ಕಠಿಣವಾಗುತ್ತದೆ. ದೇವರನ್ನು ತಿಳಿದು ಲೋಕಕ್ಕೆ ಹಿಂತಿರುಗುವ ಯಾವನು ತಾನು ಮೊದಲನೆಯ ಬಾರಿಗೆ ದೇವರ ಬಳಿಗೆ ಬಂದಂತೆ ಮತ್ತೆ ಬರುವದಿಲ್ಲ.

ಪ್ರತಿಸಾರಿ ಒಬ್ಬನು ಪಾಪದಲ್ಲಿ ಬೀಳುವಾಗ ಅದರ ಬಂಧನ ಗಟ್ಟಿಯಾಗುತ್ತದೆ. ಪೇತ್ರನು ಹೇಳುತ್ತಾನೆ ಒಬ್ಬವ್ಯಕ್ತಿ ದೇವರನ್ನು ಬಿಟ್ಟು ಲೋಕಕ್ಕೆ ತಿರುಗುತ್ತಾನೋ, ಆತನು ಮೊದಲು ನಂಬಿರುವದಕ್ಕಿಂತ ಕೆಟ್ಟ ಸ್ಥಿತಿಗೆ ಹಿಂತಿರುಗುತ್ತಾನೆ.

> ಕರ್ತನು ರಕ್ಷಕನು ಆಗಿರುವ ಯೇಸು ಕ್ರಿಸ್ತನ ವಿಷಯವಾದ ಜ್ಞಾನ ಹೊಂದಿ ಲೋಕದ ಮಲೀನತ್ವಗಳಿಗೆ ತಪ್ಪಿಸಿಕೊಂಡವರು ತಿರುಗಿ ಅವುಗಳಲ್ಲಿ ಸಿಕ್ಕಿಕೊಂಡು ಸೋತು ಹೋದರೆ ಅವರ ಅಂತ್ಯ ಸ್ಥಿತಿಯು ಮೊದಲಿಗಿಂತ ಕೆಟ್ಟದ್ದಾಗಿದೆ. ಅವರು ನೀತಿ ಮಾರ್ಗವನ್ನು ತಿಳಿದು ತಮಗೆ ಕೊಡಲ್ಪಟ್ಟ ಪರಿಶುದ್ಧ ಆಜ್ಞೆಯಿಂದ ತೊಲಗಿ ಹೋಗುವದಕ್ಕಿಂತ ಆ ಮಾರ್ಗವನ್ನು ತಿಳಿಯದಿದ್ದರೆ ಮೇಲಾಗಿತ್ತು (2 ಪೇತ್ರ 2:20, 21).

ಇದು ಭಯಾನಕ ವಿಚಾರವಾಗಿದೆ.

ಒಬ್ಬ ವ್ಯಕ್ತಿ ಉಲನ್ನಿನ ಉಂಡೆಯನ್ನು ತೆಗೆದುಕೊಂಡು ಅದನ್ನು ಒಂದು ಕೊಂಡಿಯ ಮೇಲೆ ನೇತುಹಾಕಿದರೆ, ಮೊದಲನೆಯ ಸಾರಿ ಕೆಲವು ಎಳೆಗಳು ಹಿಂದಕ್ಕೆ ಉಳಿಯುತ್ತವೆ. ಪ್ರತಿಸಾರಿ ಹೀಗೆ ಮಾಡುವಾಗ, ಇನ್ನೂ ಕೆಲವು ಉಳಿಯುತ್ತವೆ ಕೊನೆಗೆ ಅದು ಸಂಪೂರ್ಣ ವಾಗಿ ಹಸ್ತಾಂತರವಾಗುವವರೆಗೆ ಮುಂದುವರೆಯುತ್ತದೆ. ಪಾಪವು ಸಹ ಹೀಗೆ ಕಾರ್ಯ ಮಾಡುತ್ತದೆ. ಪ್ರತಿಸಾರಿ ಪಾಪವು ನಮ್ಮನ್ನು ಸ್ವಲ್ಪಮಾತ್ರ ಪರಿಶುದ್ಧರನ್ನಾಗಿ, ಉತ್ತಮ ಕಾರ್ಯಗಳನ್ನು ಮಾಡಲು ಸ್ವಲ್ಪ ಪ್ರಜ್ಞೆಯುಳ್ಳವರನ್ನಾಗಿ ಉಳಿಸುತ್ತದೆ. ನಾವು ಒಳ್ಳೆಯತನವನ್ನು ಮತ್ತು ದೇವರನ್ನು ಗುರುತಿಸಲು ಅಶಕ್ತರಾಗುವಾಗ ನಮಗೆ ಪಶ್ಚಾತ್ತಾಪಪಡುವದು ಮತ್ತು ದೇವರ ಕಡೆಗೆ ತಿರುಗಿಕೊಳ್ಳುವದು ಕಠಿಣವಾಗುತ್ತದೆ. ಪ್ರಸಂಗಿ 8:8 ಹೀಗೆ ಹೇಳುತ್ತದೆ. "ಯುದ್ಧಕಾಲದಲ್ಲಿ ಹೇಗೆ ವಿರಾಮ ದೊರೆಯುವದಿಲ್ಲವೋ ಹಾಗೆ ಅಧರ್ಮಕ್ಕೊಳಪಟ್ಟವನಿಗೆ ಬಿಡುಗಡೆಯಿಲ್ಲ."

ತಾನೂ ಯಾವಾಗಲಾದರೂ ಒಂದು ದಿವಸ ದೇವರ ಕಡೆಗೆ ತಿರುಗಿಕೊಳ್ಳುತ್ತೇನೆ ಎಂದು ಒಬ್ಬ ವ್ಯಕ್ತಿ ಪಾಪದೊಂದಿಗೆ ಹುಡುಗಾಟವಾಡುತ್ತಾನೋ, ಅವನು ಪಾಪವು ತನ್ನ ಮೇಲೆ ಬೀರುತ್ತಿರುವ ಪರಿಣಾಮವನ್ನು ಗುರುತಿಸುವದಿಲ್ಲ. ಶರೀರವನ್ನು ತೃಪ್ತಿಪಡಿಸಲು ಜೀವಿಸುವ

ಜೀವಿತದ ಪರಿಣಾಮ ಒಬ್ಬ ವ್ಯಕ್ತಿಗೆ ದೇವರೆಡೆಗೆ ತಿರುಗಿಕೊಳ್ಳುವ ಮನಸ್ಸನ್ನು ನೀಡುವದೇ ಇಲ್ಲ. ಇದನ್ನೇ ಇಬ್ರಿಯ ಪತ್ರಿಕೆಯ ಬರಹಗಾರನು ಅರ್ಥೈಸಿರಬಹುದು. "ಯಾಕಂದರೆ ಸತ್ಯದ ಪರಿಜ್ಞಾನವನ್ನು ನಾವು ಹೊಂದದ ಮೇಲೆ ಬೇಕೆಂದು ಪಾಪ ಮಾಡಿದರೆ ಪಾಪಪರಿಹಾರಕ್ಕೆ ಇನ್ನಾವ ಯಜ್ಞವೂ ಇರುವದಿಲ್ಲ" (ಇಬ್ರಿಯ 10:26).

(3) *ವಿಷಯಲಂಪಟತನದ ಮತ್ತು ದುರಾಶೆಯ ಲೌಕಿಕ ಜೀವಿತದಿಂದಾಗಿ ನಾವು ಈ ಲೋಕದಲ್ಲಿ ಮತ್ತು ಬರಲಿಕ್ಕಿರುವ ಲೋಕದಲ್ಲಿ ಕ್ರಯವನ್ನು ನೀಡುವದು ಅವಶ್ಯವಾಗಿದೆ.* ಈ ಜೀವಿತದಲ್ಲಿಯೇ ಪಾಪದ ಗುಲಾಮತ್ವದ ಬಂಧನವಿದೆ ಮತ್ತು ನಿತ್ಯತ್ವದಲ್ಲಿ ಕರ್ತನು ತನ್ನ ಜನರಿಂದ ಬಯಸುವ ಗುಲಾಮತ್ವಕ್ಕಿಂತ ಹೆಚ್ಚು ಉತ್ಸುಕತೆಯನ್ನು ಹುಟ್ಟಿಸುವಂತದ್ದಾಗಿದೆ. ಸತ್ಯವೇದವು ಶಿಷ್ಯತ್ವದ ಕುರಿತಾಗಿ ಹೆಚ್ಚಾದದ್ದನ್ನು ಹೇಳುವ ಪಾಲನ್ನು ಹೊಂದಿದೆ. ನಜರೇತ್ನ ಯೇಸುವಿನ ಹೆಸರನ್ನು ಹೊಂದಿಕೊಳ್ಳುವದು ಹಗುರವಾದ ಸಂಗತಿಯೇನಲ್ಲ. ಪೌಲನು ಹೇಳುತ್ತಾನೆ ಕ್ರೈಸ್ತರಾಗಿರುವದೆಂದರೆ ನಮ್ಮ ದೇಹಗಳನ್ನು ಸಜೀವ ಯಜ್ಞವಾಗಿ ಅರ್ಪಿಸುವದಾಗಿದೆ (ರೋಮಾಪುರ 12:1).

ಒಬ್ಬ ಕ್ರೈಸ್ತನಿಗೆ ಕರ್ತನ ಆಜ್ಞೆಗಳಿಗೆ ವಿಧೇಯರಾಗುವದು ಪ್ರಾಮುಖ್ಯವಾಗಿದೆ. ಇದು ಅವಶ್ಯಕತೆಯಿರುವ ನೆರೆಯವನ ವಿಷಯದಲ್ಲಿ ಕಾಳಜಿಯನ್ನು ಹೊಂದುವದು, ಉತ್ತಮ ತಂದೆತಾಯಿಗಳಾಗಿರುವದು, ದೇವರ ಜನರ ಸಮುದಾಯವನ್ನು, ಕ್ರಿಸ್ತನ ಸಭೆಯನ್ನು ಪ್ರೋತ್ಸಾಹಿಸುವದಾಗಿದೆ ನೈತಿಕ ಮೌಲ್ಯಗಳ ನಿಯಮಗಳನ್ನು ಅಳವಡಿಸಿಕೊಳ್ಳುವದಾಗಿದೆ. ಸುಳ್ಳುಹೇಳುವದು, ಕಳ್ಳತನ, ಲೈಂಗಿಕ ಅನೈತಿಕತೆ, ಮೋಸ ಮತ್ತು ಇನ್ನೂ ಇದೇ ರೀತಿಯ ಲೋಕದ ಹಲವಾರು ಅಭ್ಯಾಸಗಳು ತಪ್ಪಾಗಿವೆ. ಕ್ರೈಸ್ತರಾಗಿರುವದೆಂದರೆ ಕ್ರಿಸ್ತನ ಭಾರದಲ್ಲಿ ಪಾಲುಗಾರರಾಗುವದು. ಭಕ್ತಿಹೀನರು ಬೋಧಕನನ್ನು ಹಗೆಮಾಡಿದ್ದರೆ, ಅವರು ಶಿಷ್ಯರನ್ನು ಹಗೆ ಮಾಡುತ್ತಾರೆ. ಕ್ರಿಸ್ತನನ್ನು ಅನುಸರಿಸುವದೆಂದರೆ ಸರಿಯಾದದ್ದಕ್ಕೋಸ್ಕರ ನಿಲ್ಲುವದು ಮತ್ತು ನೀತಿವಂತಿಕೆಯನ್ನು ಹಗೆ ಮಾಡುವ ಕೆಲವರ ವೈರತ್ವವನ್ನು ಹೊಂದಿಕೊಳ್ಳುವದು. ಕ್ರೈಸ್ತರಾಗಿರುವದಕ್ಕೆ ಮನಸ್ಸಿನ ಭಾರ ಬೇಕು.

ಕ್ರೈಸ್ತರಾಗಿ ಮುಂಚೂಣಿಯಲ್ಲಿರುವವರನ್ನು ಯೇಸು ಅದರ ಕ್ರಯವನ್ನು ಪರಿಗಣಿಸಬೇಕೆಂದು ಕೇಳುವಾಗ, ಆತನು ಬೇರೆ ಏನನ್ನೋ ಹೇಳಿದ್ದಾನೆ, "ನಾನು ಸ್ವಾತಿಕನೂ ದೀನಮನಸ್ಸುಳವನು ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ಕಲಿತುಕೊಳ್ಳಿರಿ" (ಮತ್ತಾಯ 11:29) ಎಂದು ಹೇಳಿದ್ದಾನೆ.

*ಮುಕ್ತಾಯ:* ಪೇತ್ರನ ಸಂದೇಶವೇನೆಂದರೆ ಪಾಪದ ಶಿಕ್ಷೆಯು ಬರಲಿಕ್ಕಿರುವ ಲೋಕದಲ್ಲಿ ಕಾಯ್ದಿರಿಸಲಾಗಿದಲ್ಲ. ಈ ಜೀವಿತವೇ ಅವರಿಗೆ ನರಕವಾಗಿದೆ ಎಂದು ಹೇಳುವ ಜನರನ್ನು ನೋಡಿದ್ದೇನೆ ಮತ್ತು ಅವರೊಂದಿಗೆ ಮಾತನಾಡಿದ್ದೇನೆ. ಅವರು ಜೀವಿಸಿದ ಜೀವಿತದ ವಿಧಗಳು ಅವರನ್ನು ಭಯಂಕರವಾದ ಪರಿಣಾಮಕ್ಕೆ ನಡೆಸಿವೆ. ಆದಾಗ್ಯೂ, ಇವೆಲ್ಲವುಗಳೊಂದಿಗೆ ಪಾಪದ ಶಿಕ್ಷೆಯು ಬಹಳವಾಗಿದೆ. ನ್ಯಾಯತೀರ್ಪು ಇದೆ, ಅದರ ಪರಿಣಾಮಗಳು ನಿತ್ಯತ್ವದ ವರೆಗೆ ಇರುತ್ತವೆ.

---

ಟಿಪ್ಪಣಿಗಳು

[1]Lucian *The Passing of Peregrinus* 11-15. [2]ದಾನವನ್ನು ನೀಡುವಾಗ, ಧಾರಳಾತೆಯನ್ನು ಮಾತ್ರ ಪರಿಗಣಿಸಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಹಣದ ಮೂಲಕ ಯಾವುದೇ ಪಕ್ಷಪಾತವಿಲ್ಲದೇ ಕಾರ್ಯಮಾಡುವಾಗ ಸಕಾರಾ ತ್ಮಕವಾದ ನೋವನ್ನು ಸಹ ನೀಡಬಹುದು. ಇನ್ನೂ ಮುಂದಕ್ಕೆ, ಕ್ರೈಸ್ತರು ಸ್ವಾಸ್ಥ್ಯದ ಪಾರುಪತ್ಯಗಾರರಾಗಿದ್ದಾರೆ. ಅವರಿಗೆ ಅದನ್ನು ಜಾಣತನದಿಂದ ಉಪಯೋಗಿಸುವ ಆಜ್ಞೆಯಿರುತ್ತದೆ. [3]ವಾಸ್ತವವಾಗಿ ಗ್ರೀಕ್‌ರು "ಪಾಖಂಡವಾದದ ನಾಶನ" ಓದುತ್ತಾರೆ. [4]ಸೈತಾನ ಎಂಬ ಪದಕ್ಕೆ ಇಬ್ರಿಯ ಪದ "ದೂರುಗಾರ" ಅಥವಾ "ವೈರಿ." ಗ್ರೀಕ್ ಪದ ಇದರ ಅರ್ಥ "ದೂಷಣೆಗಾರ" ಇಬ್ರಿಯ ಪದದ ಅಂದಾಜು ಅನುವಾದ. ಹೊಸ ಒಡಂಬಡಿಕೆಯಲ್ಲಿ ಮತ್ತು ಇತ್ತೀಚಿನ ಅನುವಾದಗಳು "ದೆವ್ವ" ಎಂಬುದಾಗಿ

ಸ್ವಲ್ಪಮಟ್ಟಿಗೆ ಕೆಳಗಿನ ಪದವನ್ನು ಅವರು "ಸೈತಾನ" ಎಂಬುದನ್ನು ಒತ್ತು ನೀತಿ ಉಚ್ಚರಿಸುವಾಗ ದೇವ್ವದ ಅಂಕಿತನಾಮವೆಂದು ಪರಿಗಣಿಸುವಾಗ ಅದನ್ನು ವಿಶಿಷ್ಟವಲ್ಲದ ಪದವೆಂದು ತೆಗೆದುಕೊಳ್ಳುತ್ತಾರೆ. [5]Richard J. Bauckham, *Jude, 2 Peter*, Word Biblical Commentary, vol. 50 (Waco, Tex.: Word Books, 1983), 250. [6]Josephus *Antiquities* 1.11.4. [7]Strabo *Geography* 16.2.44 NIV NRSV [8]ಇಂಥಹಾ ವಾದಕ್ಕೆ ತಾಂತ್ರಿಕತೆ fortiori ಪದವು ಅರ್ಥ "ಇನ್ನೂ ಹೆಚ್ಚಿನ ಕಾರಣಕ್ಕಾಗಿ." [9]NIV ಮತ್ತು NRSV, NASB ಯಿಂದ ಅಳವಡಿಸಿಕೊಂಡಿರುವ ಅದೇ ಮಾಹಿತಿಯನ್ನು ಅನುಸರಿಸುತ್ತದೆ, ಅವರು ಪೇತ್ರನ ಹೇಳಿಕೆಯಲ್ಲಿರುವ ಶಕ್ತಿಯನ್ನು ಸೆರೆಹಿಡಿದಿದ್ದರು ಉತ್ತಮವಾಗಿ REB ಮಾಡುತ್ತದೆ. "ನೋವಿಗೆ ನೋವಿನ ಕಷ್ಟವನ್ನು ಹೊಂದುವದನ್ನು ವಿಧಿಸಲಾಗಿದೆ." ವಾದಕ್ಕೆ ಪತ್ರದ ಪುರಾವೆಗಾಗಿ ನೋಡಿರಿ. J.N.D. Kelly, *A Commentary on the Epistles of Peter and of Jude*, Black's New Testament Commentaries (London: Adam & Charles Black, 1969), 339. [10]Josephus *Antiquities* 1.2.2.

[11]Philo *Life of Moses* 1.283. [12]Josephus *Wars* 6.5.3. [13]ಹೆಚ್ಚಿನದನ್ನು ಓದನ್ನು ಬಯಸುವವರು. Edwin M. Yamauchi, ರವರ ಕೃತಿಗಳನ್ನು ನೋಡ ಬಹುದು *Pre-Christian Gnoticism: A Survey of the Proposed Evidence* (Grand Rapids, Mich.: Wm. B. Eerdmans Publishing Co., 1973). Simone Pétrement, *A Separate God: The Origins and Teachings of Gnosticism,* trans. Carol Harrison (San Francisco: HarperSanFrancisco, 1984); Kurt Rudolph, *Gnosis The Nature & History of Gnosticism,* trans. P. W.Coxon and K. H. Kuhn, ed. Robert McLachlan Wilson (San Francisco: Harper & Row, Publishers, 1987). [14]ನಾಗಾ ಹಮದಿ ಸಲಕರಣೆಗಳು ಪಾಖಾಂಡವಾದದ ಬರಹದ ಸರಕುಗಳನ್ನು ಬಚ್ಚಿಡುವ ಸ್ಥಳವನ್ನು ಒಳಗೊಂಡಿದೆ ಇದನ್ನು 1940ರಲ್ಲಿ ಸಂಶೋಧಿಸಲಾಗಿದೆ. ಜಾನ್ ಪೇಂಟರ್ ರವರ ವಾದ ವನ್ನು ನೋಡಿರಿ, *ಕೇವಲ ಯಾಕೋಬ ಇತಿಹಾಸ ಮತ್ತು ಸಂಪ್ರದಾಯದಲ್ಲಿ ಯೇಸುವಿನ ಸಹೋದರ* (Minneapolis: Fortress, 1999), 159-81. [15]Quoted by James L. Garlow and Peter Jones, *Cracking Da Vinci's Code* (Colorado Springs: Victor, 2004), 38. [16]Dante *Divine Comedy: Inferno* 3.